# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜನವರಿ, ೨೦೧೬ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೫ ಸಂಚಿಕೆ: ೬

**ಚಂದಾ :** ರೂ. ೧೪೦/-(ಡಿಸೆಂಬರ್, ೨೦೧೫-ಆಗಸ್ಟ್, ೨೦೧೬) ಬಿಡಿ ಪ್ರತಿ: ರೂ. ೨೦/- ಪುಟ: ೨೦

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕೆಲ ದಿನಗಳ ಹಿಂದೆ ನನ್ನ ಹಿರಿಯ ಸಮಾಜವಾದಿ ಗೆಳೆಯರೊಬ್ಬರು ಕರೆ ಮಾಡಿ, ನಿಮ್ಮ ಪತ್ರಿಕೆ ಎಲ್ಲ ಸರಿ; ಆದರೆ ಸಿದ್ಧರಾಮಯ್ಯನವರ ಸರ್ಕಾರವನ್ನೇಕೆ ಅಷ್ಟೊಂದು ಟೀಕಿಸುತ್ತೀರಿ? ಎಂದು ಕೇಳಿದರು. ನಾನು ಅವರಿಗೆ, ಎಲ್ಲಿಯಾದರೂ ಪತ್ರಿಕೆ ರಾಜ್ಯ ಸರ್ಕಾರವನ್ನು ನಿಷ್ಕಾರಣವಾಗಿ ಟೀಕಿಸಿದೆಯೇ ದಯವಿಟ್ಟು ತಿಳಿಸಿ ಎಂದೆ. ಅದಕ್ಕೆ ಅವರು ದೇಶಾವರಿ ನಗೆ ನಕ್ಕು, ಅಲ್ಲಾ ರಾಜ್ಯದಲ್ಲಿ ಬಿಜೆಪಿ ಬಲಿಷ್ಠವಾಗುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ಸನ್ನು ಟೀಕಿಸುವುದು ಬಿಜೆಪಿಗೆ ಮತ್ತಷ್ಟು ಅನುಕೂಲ ಮಾಡಿಕೊಟ್ಟಂತಲ್ಲವೇ ಎಂದರು. ನಾನು ನಿಮ್ಮ ಪ್ರಶ್ನೆಯಲ್ಲೇ ಉತ್ತರ ಅಡಗಿದೆ, ಯೋಚಿಸಿ ಎಂದೆ. ನಂತರ ಅದನ್ನು ನಾನೇ ಅವರಿಗೆ ವಿವರಿಸಿ ಹೇಳಬೇಕಾಯಿತು. ಅವರೇ ಹೇಳುವಂತೆ ಬಿಜೆಪಿ ಬಲಿಷ್ಠವಾಗುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತವಿದ್ದರೂ ಹೀಗಾಗಲು ಕಾರಣವೇನು? ಬಿಜೆಪಿಯವರು ತಿಪ್ಪರ ಲಾಗ ಹಾಕಿದರೂ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲವೆಂದು ಸಿದ್ಧರಾಮಯ್ಯನವರು ಗುಟುರು ಹಾಕಿದಾಕ್ಷಣ ಆ ಪಕ್ಷ ಬಲಿಷ್ಠವಾಗುವುದನ್ನು ತಡೆಯಲು ಸಾಧ್ಯವಿಲ್ಲ. ಬದಲಿಗೆ ರಾಜ್ಯದ ಜನತೆಗೆ ಚುರುಕಾದ, ದಕ್ಷ ಆಡಳಿತ ನೀಡಬೇಕು. ಆದರೆ ಸದ್ಯಕ್ಕೆ ಈ ಸರ್ಕಾರದ ಸಾರ್ವಜನಿಕ ಬಿಂಬ ಅಷ್ಟೇನೂ ಉತ್ತೇಜನಕಾರಿಯಾಗಿಲ್ಲ ಎಂಬುದು ಸಾರ್ವತ್ರಿಕ ಅಭಿಪ್ರಾಯ. ಇದೊಂದು ನಿಧಾನ (ದ್ರೋಹದ) ಸರ್ಕಾರ ಎಂಬ ಅಭಿಪ್ರಾಯ ಬಲಗೊಳ್ಳುತ್ತಿದೆ. ಕಾರಣ, ದುಷ್ಟ, ಭ್ರಷ್ಟ ಮತ್ತು ನಿಷ್ಕ್ರಿಯ ಸಚಿವರನ್ನು ಕೈಬಿಡುವ ಪ್ರಕ್ರಿಯೆಯನ್ನು ನೆಪಗಳನ್ನು ಹುಡುಕುತ್ತಾ ಮುಖ್ಯಮಂತ್ರಿಗಳು ಮುಂದೂಡುತ್ತಲೇ ಇರುವುದರ ರಹಸ್ಯವಾದರೂ ಏನು? ಅವರು ಜನರನ್ನು ಈ ರಹಸ್ಯವನ್ನು ಅರಿಯಲಾರದ ಬುದ್ಧಿಗೇಡಿಗಳೆಂದೇನಾದರೂ ತಿಳಿದಿದ್ದಾರೆಯೇ?

ನಿಜ, ಸಿದ್ಧರಾಮಯ್ಯ ನಮ್ಮ ಮುಖ್ಯಮಂತ್ರಿಯಾಗಬೇಕೆಂಬುದು ನಾನೂ ಸೇರಿದಂತೆ ಬಹಳ ಜನರ ಆಸೆಯಾಗಿತ್ತು. ಆದರೆ ಆ ಆಸೆ ಅವರು ಮುಖ್ಯಮಂತ್ರಿ ಸ್ಥಾನದಲ್ಲಿ ಕೂರುವುದನ್ನು ಕಣ್ತುಂಬ ನೋಡಿ ಸಂತೋಷಪಡುವಂತಹ ಅರ್ಥದ್ದಾಗಿರಲಿಲ್ಲ. ಇಂದು ಈ ಸರ್ಕಾರದೊಳಗೆ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸುತ್ತಾ ಹೋದರೆ ಮತ್ತು ಗೆಳೆಯರು ಹೇಳುವುದನ್ನು ಕೇಳುತ್ತಾ ಹೋದರೆ ಇದು ನಾವು ಆಸೆ ಪಟ್ಟು ಪಡೆದ ಸರ್ಕಾರ ಎಂದು ಹೇಳಿಕೊಳ್ಳಲು ನಾಚಿಕೆಯಾಗುತ್ತದೆ. ಸಣ್ಣ ಉದಾಹರಣೆ ಹೇಳುವುದಾದರೆ, ಕುವೆಂಪು ಅವರ ಬಗ್ಗೆ ಅಂಚೆ ಚೀಟಿ ಹೊರಡಿಸುವ ಪ್ರಸ್ತಾಪಕ್ಕೆ ಸಂಬಂಧಿಸಿದ ಪತ್ರವೊಂದನ್ನು ಮುಖ್ಯಮಂತ್ರಿಗಳ ಕಛೇರಿಗೆ ನೀಡಿ ಒಂದು ವರ್ಷವಾದರೂ ಅದು ಇತ್ತೀಚಿನವರೆಗೆ ಅಲ್ಲಿಂದ ಚಲಿಸಿರಲಿಲ್ಲ! ಆದರೆ ಆ ಪತ್ರದ ಪ್ರತಿಯೊಂದನ್ನು ರಾಜ್ಯದ ಕೇಂದ್ರ ಸಚಿವರೊಬ್ಬರಿಗೆ ನೀಡಿದ ಒಂದೇ ದಿನದಲ್ಲಿ ಅದು ಸಂಪರ್ಕ ಸಚಿವರ ಕಛೇರಿ ತಲುಪಿ ಅಗತ್ಯ ಪ್ರಕ್ರಿಯೆಗೆ ಚಾಲನೆ ಸಿಕ್ಕಿತು. ಸಿದ್ಧರಾಮಯ್ಯ ತಮ್ಮ ತಾತ್ವಿಕ ಹಿನ್ನೆಲೆ ಬಗ್ಗೆ ಏನೇ ಹೇಳಿಕೊಳ್ಳಲಿ, ಅವರ ಸರ್ಕಾರ ಒಂದು ಜಡ ಕಾಂಗ್ರೆಸ್ ಸರ್ಕಾರ. ಮೊನ್ನೆ ರಮೇಶ್‌ಕುಮಾರ್ ಸಮಿತಿಯ ಬಹುತೇಕ ಶಿಫಾರ್ಸುಗಳನ್ನು ಒಪ್ಪಿ ಪಂಚಾಯತ್‌ರಾಜ್ ಸಂಸ್ಥೆಗಳನ್ನು ತಕ್ಕಮಟ್ಟಿಗೆ ಬಲಪಡಿಸುವ ಶಾಸನವೊಂದನ್ನು ಪಾಸು ಮಾಡಿದ್ದರ ಹೊರತಾಗಿ ಇತ್ತೀಚೆಗೆ ಅದು ಶಹಬ್ಬಾಸ್ ಎನ್ನುವಂತಹ ಕೆಲಸ ಮಾಡಿದ್ದಾದರೂ ಯಾವುದು? ಉಪಲೋಕಾಯುಕ್ತ ಸುಭಾಷ್ ಅಡಿ ಅವರ ದುರುದ್ದೇಶಪೂರ್ವಕ ಪದಚ್ಯುತಿಗೆ ಕೈಹಾಕಿ ಕೈಸುಟ್ಟುಕೊಳ್ಳುತ್ತಿರುವ ಪ್ರಕರಣ ಸರ್ಕಾರ ನಡೆಯುತ್ತಿರುವ ರೀತಿ-ನೀತಿಗಳ ಬಗ್ಗೆ ಎಲ್ಲವನ್ನೂ ಹೇಳುತ್ತದೆ.

ಸಿದ್ಧರಾಮಯ್ಯನವರಿಗೆ ನೆನಪಿರಲಿ: ಈ ಹಿಂದಿನ ಬಿಜೆಪಿ ರಾಜ್ಯ ಸರ್ಕಾರ ಎಷ್ಟೇ ದುಷ್ಟ ಮತ್ತು ಭ್ರಷ್ಟ ಆಗಿದ್ದರೂ ಕೂಡ, ರಾಜ್ಯ ಬಿಜೆಪಿ ವಿಭಜನೆಯಾಗಿರದಿದ್ದಲ್ಲಿ, ಸಿದ್ಧರಾಮಯ್ಯನವರ ನುಡಿಗಟ್ಟನ್ನೇ ಬಳಸಿ ಹೇಳುವುದಾದರೆ, ತಿಪ್ಪರಲಾಗ ಹಾಕಿದ್ದರೂ, ಕಳೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿರಲಿಲ್ಲ. ಅಷ್ಟರಮಟ್ಟಿಗೆ ಕಾಂಗ್ರೆಸ್ ರಾಜ್ಯದಲ್ಲಿ (ಮತ್ತು ರಾಷ್ಟ್ರದಲ್ಲಿ ಕೂಡ) ತನ್ನ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ಅದಕ್ಕೆ ತನ್ನ ಈ ಹಿಂದಿನ ತಪ್ಪುಗಳ ಬಗ್ಗೆ ವಿಷಾದವೂ ಇಲ್ಲ, ಪಶ್ಚಾತ್ತಾಪವೂ ಇಲ್ಲ. ಸಿದ್ಧರಾಮಯ್ಯನವವರ ಸರ್ಕಾರ ಇದಕ್ಕೊಂದು ಜೀವಂತ ನಿದರ್ಶನ.

ಜನಕ್ಕೆ ನಮ್ಮ ತುಕ್ಕುಹಿಡಿದ ಸಮಾಜವಾದಿ ಮತ್ತು ಜಾತ್ಯತೀತ ಗೆಳೆಯರಿಗಿದ್ದಂತೆ ಬಿಜೆಪಿ ವಿರೋಧದ ವ್ಯಸನವಿಲ್ಲ. ಈ ಗೆಳೆಯರಿಗೆ ಸದ್ಯಕ್ಕೆ ಬಿಜೆಪಿ ವಿರೋಧದ ಹೊರತಾಗಿ ಯಾವುದೇ ಸ್ವತಂತ್ರ ರಾಜಕೀಯ ದೃಷ್ಟಿಕೋನವಿದ್ದಂತೆ ಕಾಣುತ್ತಿಲ್ಲ. ಹಾಗಾಗಿಯೇ ಇವರು ಕುರುಡಾಗಿ ಕಾಂಗ್ರೆಸ್‌ನ ರಾಜಕೀಯ ಸಮರವನ್ನು ತಾವೇ ಕೈಗೆತ್ತಿಕೊಂಡಂತಿದೆ. ಇದು ನಿಜವಾದ ಅಪಾಯ. ಏಕೆಂದರೆ, ರಾಹುಲ್‌ಗಾಂಧಿಯಂತಹ 'ಪೆದ್ದಗುಂಡ'ನನ್ನು ತನ್ನ ಅಗ್ರ ನಾಯಕಕನ್ನಾಗಿ ಮಾಡಿಕೊಂಡಿದ್ದಲ್ಲದೆ ಆತನನ್ನು ರಾಷ್ಟ್ರದ ಮೇಲೂ ಹೇರಲು ಹೊರಟಿರುವ ಕಾಂಗ್ರೆಸ್ ಸಂಪೂರ್ಣ ಮತಿಗೆಟ್ಟ ಪಕ್ಷವಾಗಿದೆ. ಅದು ಇಡಿಯಾಗಿ *ನ್ಯಾಷನಲ್ ಹೆರಾಲ್ಡ್* ಪ್ರಕರಣವನ್ನು ಸಮರ್ಥಿಸಿಕೊಳ್ಳುತ್ತಿರುವ ಮತ್ತು ಅದನ್ನೇ ಮುಂದಿಟ್ಟುಕೊಂಡು ಲೋಕಸಭೆಯ ಇಡೀ ಚಳಿಗಾಲದ ಅಧಿವೇಶನವನ್ನು ಅಸ್ತವ್ಯಸ್ತಗೊಳಿಸಿದ ಪರಿ ನೋಡಿ. ಆದ್ದರಿಂದ ಅದರ ಭವಿಷ್ಯದ ಬಗ್ಗೆ ಸದ್ಯಕ್ಕೆ ಹೆಚ್ಚು ಆಶೆ ಇಟ್ಟುಕೊಳ್ಳುವಂತಿಲ್ಲ. ಹಾಗಾಗಿ, ವಿಶ್ವಾಸಾರ್ಹ ಮೂರನೇ ಶಕ್ತಿಯ ಗೈರುಹಾಜರಿಯಲ್ಲಿ ಅಂತಿಮ ಜಯಘೋಷ ಸಲ್ಲುವುದಾದರೂ ಯಾರಿಗೆ? ಈ ಗೆಳೆಯರು ಯೋಚನೆ ಮಾಡಬೇಕು. ಕಾಂಗ್ರೆಸ್‌ಗೆ ಛೀಮಾರಿ ಹಾಕಿ ಅದನ್ನು ಪುನರ್ರೂಪಿಸುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಲೇ, ಬಿಜೆಪಿಗೊಂದು ಜನತೆ ನಂಬುವಂತಹ ಪರ್ಯಾಯ ಕಟ್ಟುವ ಪ್ರಯತ್ನಗಳನ್ನೂ ಮಾಡಬೇಕು, ಪತ್ರಿಕೆ ಸದ್ಯಕ್ಕೆ ವಿಚಾರಗಳ ಮಟ್ಟದಲ್ಲಾದರೂ ತನ್ನ ಮಿತಿಯಲ್ಲಿ ಅದನ್ನು ಮಾಡುತ್ತಿದೆ.

ಇಲ್ಲಿ ಇನ್ನೊಂದು ವಿಷಯವನ್ನೂ ಪ್ರಸ್ತಾಪಿಸಬೇಕು. ಈ ಜಾತ್ಯತೀತ ಎಡಪಂಥೀಯ ಗೆಳೆಯರು ತಮ್ಮ ಬಿಜೆಪಿ ವಿರೋಧಿ ವ್ಯಸನದಲ್ಲಿ ಯಾವುದೋ ಕಾಲದಲ್ಲಿ ಯಾವುದೋ ಸಂದರ್ಭದಲ್ಲಿ ಲೋಹಿಯಾ (೫೦ ವರ್ಷಗಳ ಹಿಂದೆ) ಮತ್ತು ಜೆಪಿ(೪೦ ವರ್ಷಗಳ ಹಿಂದೆ) ಬಿಜೆಪಿಯ ಈ ಹಿಂದಿನ ಆವೃತ್ತಿಯಾದ ಜನಸಂಘದೊಂದಿಗೆ ಮಿತ್ರತ್ವ ಹೊಂದಿದ್ದೇ ಮತ್ತು ಈ ಇಬ್ಬರ ಕಾಂಗ್ರೆಸ್ ವಿರೋಧವೇ ಬಿಜೆಪಿ ಇಷ್ಟು ದೊಡ್ಡದಾಗಿ ಬೆಳೆಯಲು ಕಾರಣವೆಂಬ ಪ್ರಚಾರ ಕೈಗೆತ್ತಿಕೊಂಡಿದ್ದಾರೆ. ರಾಜಕಾರಣದ ಚಲನಶೀಲತೆಯ ಅರಿವೇ ಇಲ್ಲದಂತೆ ಮಾತಾಡುವ ಈ ಗೆಳೆಯರು, ಅಂದು ಲೋಹಿಯಾ, ಜೆಪಿಯ ಜೊತೆಗಿದ್ದ ಬಹುತೇಕ ನಾಯಕರು ಇಂದು ಕಾಂಗ್ರೆಸ್‌ನೊಳಗೆ ಅಥವಾ ಜೊತೆಗಿದ್ದು, ಅವರೇ ರಾಷ್ಟ್ರ ರಾಜಕಾರಣದಲ್ಲಿ ಬಿಜೆಪಿ ವಿರುದ್ಧದ ಹೋರಾಟದ ಮುಂಚೂಣಿಯಲ್ಲಿ ಇರುವುದರ ಮರ್ಮವಾದರೂ ಏನು ಎಂದು ಯೋಚಿಸುವ ಶಕ್ತಿಯನ್ನೇ ಕಳೆದುಕೊಂಡಿರುವುದು ವಿಷಾದನೀಯ ಸಂಗತಿಯಾಗಿದೆ.

ಇನ್ನು ಈ ಟಿಪ್ಪಣಿಗಳಲ್ಲಿ ಪ್ರಸ್ತಾಪಿಸಲೇಬೇಕಾದ ಇನ್ನೊಂದು ಸಂಗತಿಯೆಂದರೆ, ಕಳೆದ ತಿಂಗಳು ಚೆನ್ನೈ ನಗರವನ್ನು ಮುಳುಗಿಸಿಯೇಬಿಟ್ಟಿದ್ದ ರಾಕ್ಷಸ ಮಳೆ. ಅದು ಒಂದೇ ದಿನದಲ್ಲಿ ೫೮ ಸೆ.ಮೀ.ನಷ್ಟು ಬಿದ್ದ ಶತಮಾನದ

ಮಳೆ. ಲಕ್ಷಾಂತರ ಜನ ಮನೆಮಠ–ಆಸ್ತಿಪಾಸ್ತಿ–ನಿತ್ಯಜೀವನದ ಅವಶ್ಯಕ ಸಾಧನ–ಸಲಕರಣೆಗಳನ್ನು ಕಳೆದುಕೊಂಡ ಈ ಬೃಹತ್ ವಿಪತ್ತಿನ ಸಂದರ್ಭದಲ್ಲಿ ನಮ್ಮ ಸೇನೆ ಆಪತ್ ನಿರ್ವಹಣಾ ವ್ಯವಸ್ಥೆಗಳೊಂದಿಗೆ ನಡೆಸಿದ ರಕ್ಷಣಾ ಮತ್ತು ಪುರ್ನವಸತಿ ಕಾರ್ಯಾಚರಣೆಯನ್ನೂ ಮತ್ತು ಈ ಸಂದರ್ಭದಲ್ಲಿ ಚೆನ್ನೈನ ಜನತೆ ತೋರಿದ ನೈತಿಕ ಸ್ಥೈರ್ಯವನ್ನೂ ಮೆಚ್ಚಬೇಕಿದೆ. ಅದೇ ಹೊತ್ತಿನಲ್ಲಿ, ಇತ್ತೀಚಿನ ದಿನಗಳಲ್ಲಿ ನಾವೇಕೆ ಇಂತಹ ವಿಪತ್ತುಗಳನ್ನು ಪದೇ ಪದೇ(ಉತ್ತರಾಖಂಡ, ಶ್ರೀನಗರ) ಎದುರಿಸುವಂತಾಗಿದೆ ಎಂಬುದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡುತ್ತಿಲ್ಲ ಎಂದೂ ಕೇಳಿಕೊಳ್ಳಬೇಕಿದೆ. ಚೆನ್ನೈ ನಗರ ಜಾಗತೀಕರಣದ ಗರಿಷ್ಠ ಲಾಭ ಪಡೆದು ವಾಣಿಜ್ಯ ನಗರವಾಗಿ ಅವಸರದಲ್ಲಿ ಬೆಳೆಯುವ ಹುಮ್ಮಸ್ಸಿನಲ್ಲಿ ತನ್ನ ವಿವೇಕವನ್ನೇ ಕಳೆದುಕೊಂಡು ಅಸ್ತವ್ಯಸ್ತವಾಗಿ ಬೆಳೆದದ್ದೇ ಇದಕ್ಕೆ ಕಾರಣವೆಂದು ಈಗ ವಿಶ್ಲೇಷಿಸಲಾಗುತ್ತಿದೆ. ಇನ್ನು ರಾಜಧಾನಿ ದೆಹಲಿಯನ್ನು ನೋಡಿ. ಅಲ್ಲಿನ ಗಾಳಿ ಎಷ್ಟು ಕೆಟ್ಟಿದೆ ಎಂದರೆ ಅಲ್ಲಿ ಜನ ಉಸಿರಾಡುವುದೂ ಕಷ್ಟವಾಗಿ ಅಲ್ಲಿನ ಸರ್ಕಾರ ವಾಹನ ಸಂಚಾರದ ಮೇಲೆ ಅನಿವಾರ್ಯವಾಗಿ ಒಂದಿಷ್ಟು ನಿರ್ಬಂಧ ಹೇರಲು ಮುಂದಾಗಿದೆ. ಆದರೆ ಅದರ ಬಗ್ಗೆಯೂ ವಿವಾದಗಳ ಮೇಲೆ ವಿವಾದ! ಮತ್ತೆ ಅದೇ ಮಾತನ್ನು ಹೇಳಬೇಕಿದೆ: ನಮ್ಮ ಆಸೆಬುರುಕತನ ಮಿತಿ ಮೀರಿದೆ; ಇದ್ದುದನ್ನು ಹಂಚಿ ತಿನ್ನುವ ವಿವೇಕ ಕಳೆದುಹೋಗಿದೆ.

ಮೊನ್ನೆ ಇತ್ಯರ್ಥಗೊಂಡ ಹವಾಮಾನ ವೈಪರೀತ್ಯ ಕುರಿತ ಪ್ಯಾರಿಸ್ ಸಮ್ಮೇಳನದ ಒಪ್ಪಂದವೇನಾದರೂ ಈ ವಿವೇಕವನ್ನು ಮರಳಿ ತಂದೀತೇ? ಮುಂದಿನ ಸಂಚಿಕೆಯಲ್ಲಿ ಈ ಬಗ್ಗೆ ಚರ್ಚಿಸೋಣ.

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

**–ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಡಿಸೆಂಬರ್ ಸಂಚಿಕೆಯ ಸಂಪಾದಕೀಯದಿಂದ ಪುಸ್ತಕ ಪರಿಚಯದವರೆಗೂ ಎಲ್ಲ ಲೇಖನಗಳೂ ಚೆನ್ನಾಗಿವೆ. ಎಲ್ಲರೂ ಗಮನಿಸಲೇಬೇಕು ಅನ್ನಿಸಿದ 'ಸಮಕಾಲೀನ'ದ ಬರಹಗಳು ಅದ್ಭುತವೂ ವಿಚಾರಯೋಗ್ಯವೂ, ಅರಿವ ವಿಸ್ತರಿಸಿದವೂ ಆಗಿವೆ 'What about the last cry?'ಸಾಲು ಕಾಡುತ್ತಲೆ ಇದೆ.

**–ಎಚ್. ಎಸ್. ರಾಮನಗೌಡ**, ಕೊಂಡಿಕೊಪ್ಪ (ನವಲಗುಂದ)

ಕಳೆದ ಸಂಚಿಕೆಯ ನಿಮ್ಮ ಸಂಪಾದಕರ ಟಿಪ್ಪಣಿಗಳಲ್ಲಿನ 'ಆದರೆ 'ಬಿಗ್ ಬಾಸ್' ಎಂಬ ಅಭಾಸವನ್ನೂ ಮತ್ತು ಹುಚ್ಚು ವೆಂಕಟೇಶ ಎಂಬ ವಿಕ್ಷಿಪ್ತನ ವರ್ತನೆಗಳನ್ನು ಮುಗಿಬಿದ್ದು ಪ್ರದರ್ಶಿಸುವ ಮಾಧ್ಯಮಗಳು ಮತ್ತು ಅದನ್ನು ಮುಗಿಬಿದ್ದು ನೋಡುವ ಅಧೋಗತಿ ತಲುಪಿರುವ ಈ ರಾಜ್ಯದ ಜನ ತಮ್ಮ ಭವಿಷ್ಯದ ಬಗ್ಗೆ ಸಾಮೂಹಿಕವಾಗಿ ಗಂಭೀರ ಆಲೋಚನೆ ಮಾಡಬಲ್ಲ ಶಕ್ತಿಯನ್ನು ಉಳಿಸಿಕೊಂಡಿದ್ದಾರೆಯೇ?' ಎಂಬ ನಿಮ್ಮ ಸಂದೇಹ ( ನನ್ನನ್ನು ಹಲವು ಕಾಲದಿಂದ ಕಾಡುತ್ತಲೇ ಇದೆ. ಜನರಲ್ಲಿ ಒಳ್ಳೆಯ ಅಭಿರುಚಿಗಳನ್ನು ಸೃಷ್ಟಿಸುವುದು ಸಹ ಮಾಧ್ಯಮಗಳ ಜವಾಬ್ದಾರಿ ಎಂದು ಪಾಠ ಹೇಳುತ್ತಾ ಬಂದಿರುವ ನನಗೆ ಆ ಬಗೆಯ ನಿರೀಕ್ಷೆ ಕೇವಲ ಸೈದ್ಧಾಂತಿಕ ಊಹೆ ಎನ್ನುವ ವಾಸ್ತವದ ಅರಿವು ಬರುತ್ತಿದೆ. ಮಾಧ್ಯಮ ಒಂದು ಬೃಹತ್ ಉದ್ಯಮವಾಗಿ ಬೆಳೆದಿರುವ ಈ ಐತಿಹಾಸಿಕ ಘಟ್ಟದಲ್ಲಿ ಬೌದ್ಧಿಕ ಅಧೋಗತಿ ಅನಿವಾರ್ಯವಾಗಿ ಪರಿಣಮಿಸುತ್ತದೆ ಎನ್ನುವುದು ನನ್ನ ಆತಂಕ. ಅದು ಸುಳ್ಳಾದರೆ ಸಂತೋಷ.

**–ಡಾ. ಹೆಚ್. ಎಸ್. ಈಶ್ವರ**, ಬೆಂಗಳೂರು

ಪತ್ರಿಕೆಯ ಡಿಸೆಂಬರ್ ಸಂಚಿಕೆ ಓದಿ ನಿಜವಾಗಿಯೂ ಸಂತೋಷವಾಯ್ತು. ಈ ಕನ್ನಡ ರಾಜ್ಯದಲ್ಲಿ ಸಮಾಜವಾದಿ ಚಿಂತನೆ ಸತ್ತಿಲ್ಲ, ಎಂದಿಗೂ ಸಾಯುವುದಿಲ್ಲ ಎಂಬ ಸಮಾಧಾನವಾಯ್ತು. ನಿಮ್ಮ ಸಂಪಾದಕೀಯ ಟಿಪ್ಪಣಿಗಳು ಮತ್ತು ಸಾಹಿತ್ಯ–ಸಂಸ್ಕೃತಿ–ರಾಜಕಾರಣ ಇತ್ಯಾದಿ ಅಂಕಣದ ಬರಹಗಳು ಪ್ರತಿ ಕನ್ನಡಿಗ ಮಾತ್ರವಲ್ಲ, ಪ್ರತಿ ಭಾರತೀಯನೂ ಯೋಚಿಸಬೇಕಾದ, ಚಿಂತಿಸಬೇಕಾದ ವಿಚಾರಗಳನ್ನೊಳಗೊಂಡಿದೆ.

**–ಕೆ.ಟಿ. ಮೋಹನ್**, ಬೆಂಗಳೂರು

ದಲಿತ ಚಳುವಳಿಯ ಬಿಕ್ಕಟ್ಟುಗಳನ್ನು ಕುರಿತ ಡಾ. ವಾಸುದೇವ ಬೆಳ್ಳೆಯವರ ಲೇಖನ ಹೊಸ ಒಳನೋಟಗಳಿಂದ ಕೂಡಿ ಆಸಕ್ತಿ ಹುಟ್ಟಿಸುವಂತಿದೆ. ದಲಿತ ಚಳುವಳಿಯ ನಾಯಕರು ದಲಿತ ಸಾಹಿತಿಗಳೂ ಆದುದರಿಂದ ಚಳುವಳಿ ವಾಸ್ತವ ನೆಲೆಯಲ್ಲಿ ತನ್ನ ಕಸುವನ್ನು ಕಳೆದುಕೊಂಡಿತು ಎಂಬ ಅವರ ಮಾತು ಸತ್ಯ. ಆದರೆ ದಲಿತ ಸಮುದಾಯದ ಗಣನೀಯ ಭಾಗ ಮತ್ತು ಹಲವು ದಲಿತ ನಾಯಕರು ಹಿಂದೂವಾದಿ ರಾಜಕಾರಣದ ಕಡೆ ಸೆಳೆಯಲ್ಪಟ್ಟಿರುವುದನ್ನು ದುರಂತವೆಂದು ಗುರುತಿಸುವ ಲೇಖಕರು ಇದಕ್ಕೆ ಕಾರಣಗಳೇನು ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಿದ್ದರೆ ಲೇಖನ ಇನ್ನಷ್ಟು ಮೌಲಿಕವಾಗಿರುತ್ತಿತ್ತು.

**–ಎಂ. ಎನ್. ನಾಯಕ್**, ದಾವಣಗೆರೆ

ಬಿಹಾರ ಚುನಾವಣೆ ಮತ್ತು ಸಮಾಜವಾದಿಗಳ ನಡೆಗಳ ಬಗ್ಗೆ ನೀವು ಸಂಕುಚಿತವಾಗಿ ಬರೆದಿದ್ದೀರಿ. ಸಮಾಜವಾದಿಗಳು ಜಾತಿವಾದ, ಕೋಮುವಾದ, ಬಂಡವಾಳ ಮತ್ತು ಸಂಪತ್ತಿನ ಉತ್ಪಾದನೆ ಕುರಿತಂತೆ ಹೊಸದಾಗಿ ಯೋಚಿಸಬೇಕು

**–ಎಂ. ಪ್ರಭಾಕರ ಜೋಷಿ**, ಮಂಗಳೂರು

ನವೆಂಬರ್ ಸಂಚಿಕೆಯಲ್ಲಿ ರಾಜೇಂದ್ರ ಚೆನ್ನಿ ನವ್ಯ ಸಾಹಿತ್ಯದ ಬಗ್ಗೆ ಬರೆದ ಟಿಪ್ಪಣಿಗಳಿಗೆ ಕಳೆದ ಸಂಚಿಕೆಯಲ್ಲಿ ಡಿಎಸ್ಸೆನ್ ಬರೆದ ಪ್ರತಿಕ್ರಿಯೆ ('ನಿಮ್ಮ ಪತ್ರ') ಸರಿಯಾಗಿಯೇ ಇದೆ ಅನ್ನಿಸಿತು.

**–ಟಿ.ಎಸ್.ರಾಮಸ್ವಾಮಿ**, ಮೈಸೂರು

ಬಹಳ ಶ್ರೇಷ್ಠವಾಗಿ ಮತ್ತು ಅತ್ಯಂತ ಮೌಲಿಕವಾಗಿ ಮೂಡಿ ಬಂದ ಪತ್ರಿಕೆಯ ಕಳೆದ ಸಂಚಿಕೆಯನ್ನು ಓದಿದ ಮೇಲೆ ತಮಗೆ ತುಂಬು ಹೃದಯದ ಅಭಿನಂದನೆ ಹಾಗು ಧನ್ಯವಾದಗಳನ್ನು ಹೇಳದೇ ಇರಲು ಸಾಧ್ಯವೇ ಇಲ್ಲ. ಕಳೆದ ಮೂರೂವರೆ ವರ್ಷದಿಂದ ಪತ್ರಿಕೆಯು ಸಮಕಾಲೀನ ವಿಷಯಗಳಿಗೆ ತೀವ್ರವಾಗಿ ಸ್ಪಂದಿಸುತ್ತ, ಚರ್ಚಿಸುತ್ತಾ ಒಟ್ಟಾರೆ ಆಳವಾದ ತಾತ್ವಿಕತೆ, ಜೀವನ ದರ್ಶನ, ಚಿಂತನೆ ಹಾಗು ವಿಚಾರಗಳನ್ನು ಕಟ್ಟಿಕೊಡುತ್ತಾ ಬಂದಿದೆ. ಅದೇ ಹಾದಿಯಲ್ಲಿ ಈ ಸಂಚಿಕೆಯನ್ನು ರೂಪಿಸಿದ್ದೀರಿ. ಯಾವ ವಿಜ್ಞಾನವೆಂಬ ಶಿಸ್ತು, ಪ್ರಶ್ನಾತೀತ ಮತ್ತು ವೈಜ್ಞಾನಿಕ ದೃಷ್ಟಿಕೋನವೇ ಎಲ್ಲ ಪ್ರಶ್ನೆಗಳನ್ನು ಮತ್ತು ಸಮಸ್ಯೆಗಳನ್ನು ಪರಿಹರಿಸಬಲ್ಲದೆಂಬ ನಂಬಿಕೆಯಲ್ಲಿದ್ದೇವೆಯೋ ಆ ಶಿಸ್ತನ್ನೇ ತೀವ್ರವಾದ ವಿಮರ್ಶೆಗೆ ಒಳಪಡಿಸಿ ಹೊಸ ನೋಟ ಕ್ರಮವನ್ನು ಅನಾವರಣಗೊಳಿಸಿದ್ದೀರಿ. ನಿಜಕ್ಕೂ ನಾನು ಕಳೆದ ೨೦ ದಿನಗಳಿಂದ ಈ ಸಂಚಿಕೆಯನ್ನು ಬಳಿಯಲ್ಲೇ ಇಟ್ಟುಕೊಂಡು ಓಡಾಡಿದ್ದೇನೆ. ಸಂಪರ್ಕಕ್ಕೆ ಬಂದವರಿಂದ ಇದನ್ನು ಓದಿಸಲು ಪ್ರಯತ್ನಿಸಿದ್ದೇನೆ. ಆದರೆ ತಾವು ನುಡಿದಂತೆ ಅಷ್ಟು ಸುಲಭವಾಗಿ ಜನರಿಗೆ ಇದರ ತೀವ್ರತೆ ತಾಕುವುದಿಲ್ಲ. ಹೆಚ್ಚು ಹೇಳಲು ಹೋದರೆ ಏನೋ ಹುಚ್ಚು ಎಂದೆನಿಸಿಕೊಳ್ಳುವ ಅನುಭವವೇ ಆಗಿದೆ.

ಆದರೆ ನಿಜವಾದ ಚಿಂತೆ ಎಂದರೆ ಇಂಥ ಸ್ವಯಂ ವಿನಾಶದ ಸ್ಥಿತಿಗೆ ತಲುಪುತ್ತಿರುವ ಸಂದರ್ಭದಲ್ಲಿಯೂ ಈ ಜಗತ್ತು ಇಂತಹ ವಿಚಾರಗಳಿಂದ ಪ್ರೇರಣೆಗೊಳ್ಳದಿರುವುದು ಮತ್ತು ಅದರ ವಿರುದ್ಧವೇ ಸಾಗುತ್ತಿರುವ ವಿದ್ಯಮಾನ. ವೈಯಕ್ತಿಕವಾಗಿ ಜೀವನಶೈಲಿಯನ್ನು ಮಿತಿಗೊಳಪಡಿಸಿ ವಿವೇಕದಿಂದ ಇರಬಹುದೇ ಹೊರತು ಈ ಮಧ್ಯಮ ಮಾರ್ಗವನ್ನು ಸಾಧಿಸುವ ಸಾರ್ವಜನಿಕ ಕ್ರಮ ಯಾವುದು? ಅದೂ ನಮ್ಮ ಜಾಗತಿಕ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ ಈಗಿರುವಂತ ಸ್ಥಿತಿಯಲ್ಲಿ ಇದ್ದು, ಈ ಮಿತಿಗಳುಳ್ಳ ಜೀವನ ಶೈಲಿಯನ್ನ ಜಾರಿಗೊಳಿಸುವಂತ ವಿಧಾನ (ವೈಜ್ಞಾನಿಕ!!!)ವಾದರೂ ಯಾವುದು? ಇದನ್ನು ಕೇಳಿಕೊಳ್ಳುತ್ತಾ ಹೋದರೆ ನಿರಾಶೆಯೇ ಕವಿಯುತ್ತದೆ. ಬಹುಶಃ ತೇಜಸ್ವಿ ಅವರ ಕಥೆಗಳಲ್ಲಿ ಬರುವ ಪ್ರಕೃತಿಯೇ ಮಾನವನ ಅವಿವೇಕಕ್ಕೆ ತಕ್ಕ ಪಾಠ ಕಲಿಸಿ ಸರಿಪಡಿಸಬೇಕೇನೋ!

ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಯುವ ಸಮಾಜವಾದಿ ಚಿಂತನ ವೇದಿಕೆಯ ಹರ್ಷಕುಮಾರ್ ಕುಗ್ವೆಯವರ ಲೇಖನದಲ್ಲಿ ಹದಗೆಡುತ್ತಿರುವ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಲು ತಂತ್ರಜ್ಞಾನದ ಇತ್ತೀಚಿನ ಆವಿಷ್ಕಾರವಾದ ಸಾಮಾಜಿಕ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕೆಂಬ ಅಭಿಪ್ರಾಯ ನೋಡಿದರೆ ವಿಜ್ಞಾನ–ತಂತ್ರಜ್ಞಾನದ ಬಳಕೆಯ ಇತಿಮಿತಿಗಳ ಗೆರೆಯೇ ಕಾಣದೆ ಇಡೀ ಸಮಾಜ ಗೊಂದಲದ ಗೂಡಿನಲ್ಲಿ ಸಿಕ್ಕಿಕೊಂಡಿದೆ ಎಂದೆನಿಸುತ್ತದೆ.

ಇತ್ತೀಚೆಗೆ ಧಾರವಾಡದ ಸಂಜೀವ ಕುಲಕರ್ಣಿ ಅವರ ಕಾಡುತೋಟದಲ್ಲಿ ನಾವೊಂದಿಷ್ಟು ಜನ ಆಧುನಿಕ ತಂತ್ರಜ್ಞಾನದ ಅಪಾಯಗಳಿಗೆ ಪರ್ಯಾಯವಾಗಿ ಪರಿಸರಸ್ನೇಹಿ ಜೀವನ ಮಾದರಿಯನ್ನು ಅಳವಡಿಸಿಕೊಳ್ಳುವುದರ ಬಗ್ಗೆ 'ecologise' ಎಂಬ ಘೋಷಣೆಯೊಂದಿಗೆ ಸೇರಿದ್ದೆವು. ಈ 'ಸಮಕಾಲೀನ' ಲೇಖನಗಳ ಆಶಯಗಳು ಅಲ್ಲಿಯೂ ಪ್ರತಿಧ್ವನಿಸಿದವು.

**–ಬಿ.ವಿ.ಸುರೇಂದ್ರ**, ಧಾರವಾಡ

## ಸಂಪಾದಕರ ವಿಶೇಷ ಟಿಪ್ಪಣಿಗಳು: ಬಾಲಗಂಗಾಧರ ಎಂಬ ಆಧುನಿಕ ವಸಿಷ್ಠ



**ಎಸ್**.ಎನ್. ಬಾಲಗಂಗಾಧರ ಮತ್ತೆ ಸುದ್ದಿಯಲ್ಲಿದ್ದಾರೆ! ಭಾರತದಲ್ಲಿ ನಿಜವಾದ ಸಮಾಜಶಾಸ್ತ್ರ ಅಧ್ಯಯನಗಳೆಂಬುವು ನಡೆದೇ ಇಲ್ಲ ಮತ್ತು ಜಾತಿ ವ್ಯವಸ್ಥೆ ಕುರಿತ ಈವರೆಗಿನ ಟೀಕೆಗಳಿಗೆ ವಸಾಹತುಶಾಹಿ ಮನಸ್ಸೇ ಕಾರಣ ಎಂದೆಲ್ಲ ವಾದಿಸಿ ಈ ದೇಶದಲ್ಲಿ ಒಂದು ಗಣನೀಯ ಶಿಷ್ಯವರ್ಗವನ್ನೇ ಸಂಪಾದಿಸಿಕೊಂಡಿರುವ ಮೂಲತಃ ಕನ್ನಡಿಗನೂ ಮತ್ತು ಈಗ ಬೆಲ್ಜಿಯಂ ದೇಶದ ಘೆಂಟ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕನೂ ಆಗಿರುವ ಈ ಬಾಲಗಂಗಾಧರ, ಇತ್ತೀಚಿನ ತನ್ನ ಭಾಷಣವೊಂದರ ಮೂಲಕ ಮತ್ತು ಅದನ್ನು ಸಮರ್ಥಿಸಲು ಬರೆದಿರುವ ಲೇಖನವೊಂದರ ಮೂಲಕ ದೊಡ್ಡ ವಿವಾದಕ್ಕೆ ಕಾರಣರಾಗಿದ್ದಾರೆ. ಕಳೆದ ನವೆಂಬರ್‌ನಲ್ಲಿ ಹೈದರಾಬಾದ್‌ನ ಇಂಗ್ಲಿಷ್ ಮತ್ತು ವಿದೇಶೀ ಭಾಷೆಗಳ ವಿಶ್ವವಿದ್ಯಾಲಯದಲ್ಲಿ ಕಾನೂನುಶಾಸ್ತ್ರ ಕುರಿತ ವಿಚಾರ ಸಂಕಿರಣಕ್ಕೆ ಆಹ್ವಾನಿತರಾಗಿ ಬಂದಿದ್ದ ಇವರು ತಮ್ಮ ಭಾಷಣದಲ್ಲಿ ಅಂಬೇಡ್ಕರ್‌ರನ್ನು ಶತಮೂರ್ಖ(ಈಡಿಯಟ್) ಎಂದು ಕರೆದಿದ್ದಲ್ಲದೆ, ಅವರಿಗೆ ಕೊಲಂಬಿಯಾ ವಿಶ್ವವಿದ್ಯಾಲಯ ಹೇಗೆ ಡಾಕ್ಟೊರೇಟ್ ನೀಡಿತೋ ಎಂದು ಆಶ್ಚರ್ಯಪಟ್ಟಿದ್ದಾರೆ. ಅಲ್ಲದೆ, ಜಾತಿ ಮೀಸಲಾತಿಯಡಿ ಆಯ್ಕೆಯಾಗಿರುವ ಆ ವಿಶ್ವವಿದ್ಯಾಲಯದ ಅಧ್ಯಾಪಕರನ್ನು 'ಜಾತಿ ಪ್ರಮಾಣ ಪತ್ರ ಕಟ್ಟಿಕೊಂಡಿರುವ ಕತ್ತೆ'ಗಳು ಎಂದು ಕರೆದು ಅವರ ಪಾಠ–ಪ್ರವಚನಗಳ ವಿರುದ್ಧ ಎಚ್ಚರಿಕೆಯಿಂದಿರಬೇಕೆಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟು ಹೋಗಿದ್ದಾರೆ.

ಆಶ್ಚರ್ಯವೆಂದರೆ ಈ ಬಾಲಗಂಗಾಧರ ಇಷ್ಟೆಲ್ಲ ತಲೆಹರಟೆ ಮಾತುಗಳನ್ನಾಡಿದಾಗ ಸುಮ್ಮನಿದ್ದಂತೆ ತೋರುವ 'ನೊಂದ' ಅಧ್ಯಾಪಕರು ನಂತರದಲ್ಲಷ್ಟೇ ತಮ್ಮ ಕುಲಪತಿಗಳಿಗೆ(ಹಾಗೂ ರಾಷ್ಟ್ರಪತಿಗಳಿಂದ ಹಿಡಿದು ರಾಜ್ಯಪಾಲರವರೆಗೆ) ಒಂದು ಮನವಿ ಸಲ್ಲಿಸಿ ಬಾಲಗಂಗಾಧರರ ಸಮುದಾಯಗಳ ನಡುವೆ ದ್ವೇಷ ಹುಟ್ಟಿಸುವ ಮಾತುಗಳಿಗಾಗಿ ಅವರ ವಿರುದ್ಧ ಕ್ರಮಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ಆದರೆ ಇದೆಲ್ಲ ಈಗ ಸುದ್ದಿಯಾಗುತ್ತಿರುವುದು, ಈ ಮನವಿಯಿಂದ ವಿಚಲಿತರಾಗಿರುವಂತೆ ತೋರಿರುವ ಬಾಲಗಂಗಾಧರ, ಭಾರತದಲ್ಲಿ ಈಗ ನಡೆದಿರುವ 'ಅಸಹಿಷ್ಣುತೆ' ಕುರಿತ ಚರ್ಚೆ ಹೇಗೆ ಅಸಂಬದ್ಧವಾಗಿದೆ ಎಂದು ವಿವರಿಸುವ ಲೇಖನವೊಂದನ್ನು ಬರೆದು ಅದರ ಭಾಗವಾಗಿ ತಮ್ಮ ಮೇಲಿನ ಈ ಆಪಾದನೆಯನ್ನು ನಿರಾಕರಿಸಲು ಮಾಡಿರುವ ಪ್ರಯತ್ನದ ಮೂಲಕ. ಈ ಲೇಖನ ಈ ಮನುಷ್ಯನ ಮನಸ್ಸಿನೊಳಗಿನ ಮತ್ತಷ್ಟು ರಾಡಿಯನ್ನು ಹೊರಚೆಲ್ಲಿದ್ದು, ಇನ್ನಷ್ಟು ವಿವಾದಕ್ಕೆ ಕಾರಣವಾಗಿ, ಅಲ್ಲಲ್ಲಿ ಖಂಡನೆ ಮತ್ತು ಪ್ರತಿಭಟನೆಗಳಿಗೆ ಕಾರಣವಾಗಿದೆ.

ತಮ್ಮ ವಿರುದ್ಧದ ಆರೋಪದ ತೀವ್ರತೆಯನ್ನು ಅರಿತೋ ಏನೋ ಬಾಲ ಗಂಗಾಧರ ಅಂಬೇಡ್ಕರ್ ಬಗ್ಗೆ ಬಳಸಿದ 'ಈಡಿಯಟ್' ಶಬ್ದ ಅನುಚಿತವಾದದ್ದು ಎಂದು ಒಪ್ಪಿಕೊಂಡು ಅದಕ್ಕಾಗಿ ವಿಷಾದವನ್ನೂ ವ್ಯಕ್ತಪಡಿಸಿದ್ದಾರೆ. ಅಷ್ಟರಮಟ್ಟಿಗೆ ಅವರನ್ನು ತಾಂತ್ರಿಕವಾಗಿ ಕ್ಷಮಿಸಬಹುದು. ಅವರಿಂದ ಆ ಮಾತನ್ನಾಡಿಸಿದ ಅವರ ಮೂಲ ಹೀನ ಮನಃಸ್ಥಿತಿ ಕ್ಷಮಾರ್ಹವಾಗದಾದರೂ. ಏಕೆಂದರೆ, ಇದರ ಜೊತೆಗೇ ಅಂಬೇಡ್ಕರ್‌ರ ಬುದ್ಧಿಮತ್ತೆಯನ್ನು, ಈ ದಿನಗಳಲ್ಲಿ ಮಹಾಪೆದ್ದುತನದ ಪ್ರತೀಕವೆನಿಸಿರುವ ಅಲಿಯಾ ಭಟ್‌ಳ ಬುದ್ಧಿಮತ್ತೆಗೆ ಹೋಲಿಸುವ ವ್ಯಂಗ್ಯದಾಟಕ್ಕೆ ಇಳಿದಿದ್ದಾರೆ. ಅಂಬೇಡ್ಕರ್‌ರನ್ನು ಯಾಕೆ ಟೀಕಿಸಬಾರದು ಎಂಬುದು ಅವರ ಪ್ರಶ್ನೆ. ಇಲ್ಲಿ ಹುಚ್ಚ ವೆಂಕಟ್ ಅಂಬೇಡ್ಕರ್ ಬಗ್ಗೆ ಆಡಿದ ಮಾತಿಗೆ ಕರ್ನಾಟಕದಲ್ಲಿ ಕಂಡುಬಂದ ಪ್ರತಿಭಟನೆಯನ್ನು ಇವರು ಅಂಬೇಡ್ಕರ್‌ವಾದಿಗಳ ಅಸಹಿಷ್ಣುತೆ ಎಂದು ಉದಾಹರಿಸುತ್ತಾ ಈಗ ಭಾರತದಲ್ಲಿನ ನಿಜವಾದ ಅಸಹಿಷ್ಣುಗಳು ಅಂಬೇಡ್ಕರ್‌ವಾದಿಗಳು ಎನ್ನುತ್ತಾರೆ. ಇಂದಿರಾ ಗಾಂಧಿ ಕಾಲದಿಂದಲೂ ಮತಬ್ಯಾಂಕ್ ರಾಜಕಾರಣಕ್ಕಾಗಿ ರಾಷ್ಟ್ರಜೀವನದಲ್ಲಿ ಅಂಬೇಡ್ಕರ್‌ರನ್ನು ಅನಗತ್ಯವಾಗಿ ಮೇಲೇರಿಸಿ ಕೂರಿಸಲಾಗಿದೆ ಎಂದೆನ್ನುವ ಇವರ ವಾದ ಗೊತ್ತಿಲ್ಲದಂತೆ ಇವರಿಗೇ ಸುತ್ತಿಕೊಂಡು, ಇವರ ಮೂಲಸ್ಫೂರ್ತಿ ಯಾರೆಂಬುದನ್ನು ಇವರ ಬಾಯಿಯಿಂದಲೇ ಹೇಳಿಸುತ್ತದೆ. ಇವರ ಪ್ರಕಾರ ಪ್ರಧಾನಿ ಮೋದಿ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ಫಡ್ನವಿಸ್ ಅಂಬೇಡ್ಕರ್‌ರನ್ನು ಹೊಗಳುತ್ತಿರುವುದು ಈ ಅಂಬೇಡ್ಕರ್‌ವಾದಿಗಳ ಅಸಹಿಷ್ಣುತಾ ವರ್ತನೆಗೆ ಹೆದರಿಯಂತೆ! ಇದಕ್ಕೆ ಮೋದಿ ಅಂಡ್ ಕಂ. ಏನು ಹೇಳುತ್ತದೆಯೋ?

ಇನ್ನು ಅಂಬೇಡ್ಕರ್ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಡಾಕ್ಟೊರೇಟ್ ಪ್ರಬಂಧ ಕಳಪೆ ಮತ್ತು ಅವರ ಬುದ್ಧಿಮತ್ತೆ ಸಾಧಾರಣ ಎಂದು ಭಾವಿಸಲು ಬಾಲಗಂಗಾಧರರಿಗೆ ಎಲ್ಲ ಹಕ್ಕೂ ಇದೆ. ಆದರೆ ಇದಕ್ಕೆ ವಿದ್ವಾಂಸರು ಒಪ್ಪುವಂತಹ ಸಾಕ್ಷ್ಯಗಳನ್ನು ಒದಗಿಸದೆ ಇಂತಹ ಮಾತುಗಳನ್ನಾಡಲು ಜಾತಿ ಕೊಳಕಿನಿಂದ ತುಂಬಿದ ಮನಸ್ಸಿನ ಹೊರತಾಗಿ ಬೇರೇನೂ ಕಾರಣ ಹೊಳೆಯುವುದಿಲ್ಲ. ಹಾಗೇ, ಜಾತಿ ಮೀಸಲಾತಿಯಡಿಯಲ್ಲಿ ಆಯ್ಕೆಯಾಗಿರುವ ಅಧ್ಯಾಪಕರನ್ನು ಕುರಿತ ಅವರ ಮಾತು ಸಹ. ನಿಜ, ನಮ್ಮ ವಿಶ್ವವಿದ್ಯಾಲಯಗಳನ್ನು ನೋಡಿದರೆ ನಮಗೇ ಒಮ್ಮೊಮ್ಮೆ ಇವರ ಮಾತು ನಿಜವೆನ್ನಿಸುತ್ತದೆ. ಆದರೆ ಇಂತಹ ಮಾತನ್ನು ಸಾರಾಸಗಟಾಗಿ ಹೇಳಲಾಗದೆಂಬ ಎಚ್ಚರವೂ ನಮಗಿರಬೇಕು. ಮೀಸಲಾತಿಯಡಿಯ ಆಯ್ಕೆಗಳು ಕಳಪೆಯಾಗಿರಲು ಈ ಮೀಸಲಾತಿ ಒಂದು ವಿದ್ವದ್ ಚಟುವಟಿಕೆಯಾಗಿರದೆ, ಶುದ್ಧ ಜಾತಿ ರಾಜಕಾರಣ ಮತ್ತು ಹಣ ಸಂಬಂಧಿ ಚಟುವಟಿಕೆಯಾಗಿರುವುದೇ ಕಾರಣವಾಗಿದೆ. ಈ ಪ್ರಕ್ರಿಯೆ ವಿಶ್ವವಿದ್ಯಾಲಯಗಳ ಕುಲಪತಿಗಳ ಆಯ್ಕೆಯಿಂದಲೇ ಆರಂಭವಾಗುತ್ತಿರುವುದನ್ನು ನಾವು ನಿಚ್ಚಳವಾಗಿ ಕಾಣಬಹುದಾಗಿದೆ.

ಅದೇನೇ ಇರಲಿ, ಈ ಬಾಲಗಂಗಾಧರರ ಮನಸ್ಸಿನ ಕೊಳಕು ನಿಜವಾಗಿ ಮತ್ತು ನೇರವಾಗಿ ಬಯಲಾಗುವುದು ಈತ ಕಲ್ಬುರ್ಗಿ ಮತ್ತು ದಾದ್ರಿ ಹತ್ಯೆಗಳನ್ನು ಹೆಚ್ಚೂಕಡಿಮೆ ನೇರವಾಗಿ ಸಮರ್ಥಿಸುವ ರೀತಿ ನೀತಿಗಳನ್ನು ಗಮನಿಸಿದಾಗ. ಕಲ್ಬುರ್ಗಿ ಮೂರ್ತಿಪೂಜೆ ವಿರೋಧಿಯಾಗಿದ್ದು, ಅದು ಇವರ ಪ್ರಕಾರ ಕಡಿಮೆ ತೀವ್ರತೆಯ ಅಪರಾಧವಲ್ಲವಂತೆ. ಅವರು ಕನ್ನಡದ ಪತ್ರಿಕೆಯೊಂದರಲ್ಲಿ ವೀರಶೈವ ಧರ್ಮದ ಪುನರ್‌ವ್ಯಾಖ್ಯಾನ ಲೇಖನ ಮಾಲಿಕೆಯನ್ನು ಸಂಪಾದಕರ ಮೇಲೆ ಒತ್ತಡ ಹೇರಿ ನಿಲ್ಲಿಸಿದರಂತೆ. ಇನ್ನೂ ಮುಖ್ಯವೆಂದರೆ, ಕುವೆಂಪು ವಿಶ್ವವಿದ್ಯಾಲಯದಲ್ಲಿ ತಮ್ಮ ವಿಚಾರಗಳನ್ನು ಕುರಿತ ಸಂಶೋಧನೆಗಳಿಗಾಗಿ ಸ್ಥಾಪಿಸಿದ್ದ ಕೇಂದ್ರವನ್ನು ಮುಚ್ಚಿಸಲೂ ಕಲ್ಬುರ್ಗಿಯವರೇ ಕಾರಣರಂತೆ. ಅಷ್ಟೇ ಅಲ್ಲ, ಅವರನ್ನು ಛೋಟಾ ರಾಜನ್‌ಗೆ ಹೋಲಿಸುತ್ತಾ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಕಾಲದಿಂದಲೂ ಅವರ ಶೀಲ ಮತ್ತು ನೈತಿಕತೆ ಪ್ರಶ್ನಾರ್ಹವೇ ಆಗಿತ್ತೆನ್ನುತ್ತಾರೆ. ಹೀಗೆ ನಮ್ಮ ಪೋಲೀಸರಿಗಿಂತ ಹೆಚ್ಚು ಗುಪ್ತ ಮಾಹಿತಿಯನ್ನು ಸಂಗ್ರಹಿಸಿರುವಂತೆ ತೋರುವ ಈ ನಿರ್ಲಜ್ಜ ಭಂಡತನದ ಮನುಷ್ಯ ಕಲ್ಬುರ್ಗಿಯಂತಹವರ ಹತ್ಯೆ ಅಸಹಿಷ್ಣುತೆಯ ಸೂಚಕ ಎನ್ನುವವರು ಸಹಿಷ್ಣುಗಳನ್ನು ಕೊಲ್ಲಬೇಕೆಂದು ಸೂಚಿಸುತ್ತಾರೆಯೇ ಎಂದು ಕೇಳುವ ಮೂಲಕ ಏನು ಹೇಳುತ್ತಿದ್ದಾರೆ? ಭಯವಾಗುತ್ತದೆ! ರಾಜ್ಯದ ಪೋಲೀಸರು ಕಲ್ಬುರ್ಗಿಯವರ ಕೊಲೆಗಾರರಿಗಾಗಿ ಇವರನ್ನೊಮ್ಮೆ 'ವಿಚಾರಿಸುವುದು' ಒಳ್ಳೆಯದು.

ಇನ್ನು ದಾದ್ರಿ ಘಟನೆಗೆ, ಈವರೆಗೆ ಕೇಳದ ಕತೆಯೊಂದನ್ನು ಈ ಬಾಲಗಂಗಾಧರ ಜೋಡಿಸುತ್ತಾರೆ. ಇವರ ಪ್ರಕಾರ ಹತ್ಯೆಗೀಡಾದ ಮುಸ್ಲಿಂ ವ್ಯಕ್ತಿ ಹಿಂದೂಗಳೊಬ್ಬರ ಮನೆಯಿಂದ ಹಸುವೊಂದನ್ನು ಕದ್ದಿದ್ದರಂತೆ! ಇಂತಹ ಘೋರ ಅಪರಾಧಕ್ಕೆ ಹಿಂದೆ ಅಮೆರಿಕಾ, ಬ್ರಿಟನ್‌ಗಳಲ್ಲೂ ಆತನನ್ನು ಬಡಿದುಕೊಲ್ಲುವ ಶಿಕ್ಷೆ ಜಾರಿಯಲ್ಲಿತ್ತಂತೆ! ಈಗ ಆಧುನಿಕ ಕಾನೂನುಗಳ ಪ್ರಕಾರ ಇಂತಹ ಹತ್ಯೆ ಅಪರಾಧವಾಗಿದೆ ಎಂದಾಕ್ಷಣ ಇದನ್ನು ಅಸಹಿಷ್ಣುತೆಯ ಸಂಕೇತವೆಂದು ಕರೆಯುವುದು ಮಾನವ ಚರಿತ್ರೆ ಕುರಿತ ಅಜ್ಞಾನ ಮಾತ್ರವೆನಿಸಿಕೊಳ್ಳುತ್ತದೆ ಎಂಬ ತೀರ್ಪು ನೀಡುತ್ತಾರೆ!

ಈಗ ಹೇಳಿರಿ, ನಿಜವಾಗಿ ಈ ಬಾಲಗಂಗಾಧರನೆಂಬಾತ ಮನುಷ್ಯನೇ? ಕುವೆಂಪು ವಿಶ್ವವಿದ್ಯಾಲಯದಲ್ಲಿದ್ದ ಈತನ ಶಿಷ್ಯರ ಸಂಶೋಧನಾ ಕೇಂದ್ರವನ್ನು ಮುಚ್ಚಿಸಲಾಯಿತು ಎಂದು ಈ ಹಿಂದೆ ಕೇಳಿದಾಗ, ಇದೊಂದು ಅಬೌದ್ಧಿಕ ಕ್ರಮ ಎಂದು ನನಗೆ ಬೇಸರವಾಗಿತ್ತು. ಆದರೆ ಅದನ್ನು ಮುಚ್ಚದಿದ್ದರೆ, ಅದೊಂದು ನರಹಂತಕ ಸಿದ್ಧಾಂತಗಳ ನಿರ್ಮಾಣ ಕೇಂದ್ರವಾಗಿ ಬೆಳೆಯುತ್ತಿತ್ತೇನೋ ಎಂಬ ಅನುಮಾನ ನನ್ನನ್ನೀಗ ಕಾಡಹತ್ತಿದೆ. ಈ ಬಾಲಗಂಗಾಧರ ಎಂಬ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಎಷ್ಟು ವ್ಯಾವಹಾರಿಕವೋ ನನಗೆ ತಿಳಿಯದು. ಕನಿಷ್ಠ ಇಷ್ಟಕ್ಕಾಗಿಯಾದರೂ ನಾವೀಗ ಆಗ್ರಹಿಸಬೇಕು: ಈತ ಭಾರತಕ್ಕೆ ಮತ್ತೆ ಕಾಲಿಡದಂತೆ ಕ್ರಮ ಕೈಗೊಳ್ಳಬೇಕು ಮತ್ತು ಈ ದೇಶದಲ್ಲಿರುವ ಈತನ ದುಷ್ಟ ಜಾಲದ ಚಟುವಟಿಕೆಗಳ ಮೇಲೆ ತೀವ್ರ ನಿಗಾ ಇಡಬೇಕು.

ಲೋಹಿಯಾ ಹೇಳುತ್ತಿದ್ದ, ವರ್ಣಧರ್ಮ ವಿರೋಧಿಗಳಿಗೆ ರಾಜಪುರೋಹಿತರಾಗಿ ಶಿರಚ್ಛೇದನ ಶಿಕ್ಷೆಯನ್ನು ಸೂಚಿಸುತ್ತಿದ್ದ ವಸಿಷ್ಠ ಪರಂಪರೆ ಎಂದರೆ ಇದೇ ಏನೋ! ಅಥವಾ ಮೋದಿಯವರ ಜೊತೆಗೆ ಬರುತ್ತದೆಂದು ಹೆದರಿಸಲಾಗುತ್ತಿದ್ದ ಫ್ಯಾಸಿಸಂ ಅಂದರೂ ಇದೇ ಇರಬಹುದೆ?

**–ಡಿಎಸ್ಸೆನ್**

## ನಮ್ಮ ಸಮಾಜವಾದಿಗಳು

# ಭಾರತೀಯ ಸಮಾಜವಾದದ ಭೀಷ್ಮ ಆಚಾರ್ಯ ನರೇಂದ್ರ ದೇವ



**ಭಾ**ರತದ ಸಮಾಜವಾದಿ ಆಂದೋಲನದ ಭೀಷ್ಮ ಪಿತಾಮಹರಾಗಿದ್ದ ಆಚಾರ್ಯ ನರೇಂದ್ರ ದೇವ ಕೊನೆವರೆಗೂ ಪರಿಪಕ್ವ ಮಾರ್ಕ್ಸ್‌ವಾದಿ ಮತ್ತು ಜನತಾಂತ್ರಿಕ ಸಮಾಜವಾದಿಯಾಗಿದ್ದರು. ಅವರು ಉತ್ತರ ಪ್ರದೇಶದ ಸಿತಾಪುರದಲ್ಲಿ ೩೧-೧೦-೧೮೮೯ರಲ್ಲಿ ಜನಿಸಿದರು. ಅವರ ತಂದೆ ಬಲದೇವ ಪ್ರಸಾದ, ತಾಯಿ ಜವಾಹರದೇವಿ. ಅವರು ಅಲಹಾಬಾದಿನ ಮ್ಯೂಯಿರ್ ಸೆಂಟ್ರಲ್ ಕಾಲೇಜಿನಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಮತ್ತು ಬನಾರಸ್‌ನ ಕ್ವೀನ್ಸ್ ಕಾಲೇಜಿನಿಂದ ಕಾನೂನು ಪದವಿಯನ್ನು ಪಡೆದು ಫೈಜಾಬಾದಿನಲ್ಲಿ ವಕೀಲರಾಗಿದ್ದರು. ಅವರಿಗೆ ಜೀವನದಲ್ಲಿ ಓದು, ಬರಹ ಮತ್ತು ರಾಜಕಾರಣ ಎಂಬ ಎರಡು ತೀವ್ರ ಆಸಕ್ತಿಗಳಿದ್ದವು. ಅವರು ಚಿಕ್ಕಂದಿನಲ್ಲಿಯೇ ರಾಮಾಯಣ, ಮಹಾಭಾರತ, ರಘು ಕೌಮುದಿ, ಅಮರಕೋಶ, ಭಗವದ್ಗೀತೆಗಳನ್ನು ಓದಿ ಕರಗತಮಾಡಿಕೊಂಡಿದ್ದರು. ಅವರು ಪಾಲಿ, ಸಂಸ್ಕೃತ, ಹಿಂದಿ, ಉರ್ದು, ಪರ್ಷಿಯನ್, ಫ್ರೆಂಚ್, ಜರ್ಮನ್, ಪ್ರಾಕೃತ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪ್ರಭುತ್ವ ಪಡೆದಿದ್ದರು. ಅವರು ಪ್ರಾಚೀನ ಶೋಧನ ಶಾಸ್ತ್ರದಲ್ಲಿ ಸಂಶೋಧಕನಾಗಬೇಕೆಂದು ಪ್ರಾಚೀನ ಲಿಪಿಶಾಸ್ತ್ರ, ಶಾಸನ ಶಾಸ್ತ್ರ, ಮತ್ತು ನಾಣ್ಯ ಶಾಸ್ತ್ರಗಳಲ್ಲಿ ವಿಶೇಷ ಅಧ್ಯಯನ ನಡೆಸಿದ್ದರು. ಜೊತೆಗೆ ಅವರು ಕ್ರಾಂತಿಕಾರಿ ವಿಚಾರಗಳ ಹಲವಾರು ಪುಸ್ತಕಗಳನ್ನು ಅಧ್ಯಯನ ಮಾಡಿದ್ದರು. ಮಾರ್ಕ್ಸ್‌ವಾದ ಮತ್ತು ಬೌದ್ಧ ತತ್ವಗಳಲ್ಲಿ ವಿಶೇಷ ಆಸಕ್ತಿ ಇದ್ದ ಅವರು ಇವೆರಡರ ತುಲನಾತ್ಮಕ ಅಧ್ಯಯನದ ಪ್ರಯತ್ನವನ್ನೂ ಮಾಡಿದ್ದರು.

ಆಚಾರ್ಯರ ರಾಜಕೀಯ ಗುರು ಬಾಲಗಂಗಾಧರ ತಿಲಕರು. ಅವರು ತಿಲಕ ರಾಜಕೀಯ ತೀವ್ರಗಾಮಿತ್ವವನ್ನು ಮಾತ್ರ ಸ್ವೀಕರಿಸಿ, ಅವರ ಸಾಮಾಜಿಕ ಪ್ರತಿಗಾಮಿತನವನ್ನು ನಿರಾಕರಿಸಿದರು. ಗಾಂಧೀಜಿ ಅವರು ಬ್ರಿಟಿಷರ ವಿರುದ್ಧ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದಾಗ ಆಚಾರ್ಯರು ವಕೀಲ ವೃತ್ತಿ ಬಿಟ್ಟು ಆಂದೋಲನದಲ್ಲಿ ಧುಮುಕಿದರು ಮತ್ತು ೧೯೩೨ರಲ್ಲಿ ವಾರಣಾಸಿಯಲ್ಲಿ ಜೈಲುವಾಸ ಅನುಭವಿಸಿದರು. ನಂತರ ಅವರು ಕಾಶಿ ವಿದ್ಯಾಪೀಠದಲ್ಲಿ ಅಧ್ಯಾಪಕರಾಗಿ ಸೇರಿ, ಅಲ್ಲಿಯೆ ಪ್ರಾಚಾರ್ಯರಾಗಿ ೧೯೩೬ರ ವರೆಗೆ ಸೇವೆಸಲ್ಲಿಸಿದರು.

೧೯೩೪ರಲ್ಲಿ ನಾಸಿಕ್ ಜೈಲಿನಲ್ಲಿದ್ದ ಜಯಪ್ರಕಾಶ್ ನಾರಾಯಣ, ಮಿನೂ ಮಸಾನಿ, ಅಶೋಕ ಮೆಹ್ತಾ ಮುಂತಾದವರು ಸ್ವಾತಂತ್ರ್ಯ ಹೋರಾಟ ಹಿಡಿದಿದ್ದ ಗಾಂಧಿಯವರ ಮಾರ್ಗದಿಂದ ಅತೃಪ್ತರಾಗಿ ಕಾಂಗ್ರಸ್‌ನೊಳಗೇ ಎಡಪಂಥೀಯ ಗುಂಪೊಂದನ್ನು ಕಟ್ಟಲು ನಿರ್ಧರಿಸಿದಾಗ ರೂಪುಗೊಂಡ ಕಾಂಗ್ರೆಸ್ ಸಮಾಜವಾದಿ ಪಕ್ಷದ ಮಾರ್ಗದರ್ಶಕರಾಗಿ ಒದಗಿದ ಇಬ್ಬರು ಹಿರಿಯರಲ್ಲಿ ಒಬ್ಬರು ಆಚಾರ್ಯ ನರೇಂದ್ರ ದೇವ ಅವರು. ಇನ್ನೊಬ್ಬರು ಡಾ. ಸಂಪೂರ್ಣಾನಂದರು. ಪಟ್ನಾದಲ್ಲಿ ೧೯೩೪ರ ಮೇ ೧೬ರಂದು ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಂಸ್ಥಾಪನಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ನರೇಂದ್ರ ದೇವ ಅವರು ಅದಕ್ಕೊಂದು ತಾತ್ವಿಕ ನಿರ್ದೇಶನ ಒದಗಿಸಿದರು.

೧೯೪೨ರಲ್ಲಿ 'ಭಾರತ ಬಿಟ್ಟು ತೊಲಗಿ' ಚಳುವಳಿಯು ಜೆಪಿ, ಲೋಹಿಯಾ, ಅಚ್ಯುತ ಪಟವರ್ಧನ್ ಮುಂತಾದ ಕಾಂಗ್ರೆಸ್ ಸಮಾಜವಾದಿಗಳ ನೇತೃತ್ವದಲ್ಲಿ ವಿಧ್ವಂಸಕ ಭೂಗತ ಹೋರಾಟವಾಗಿ ಮಾರ್ಪಾಡಾದಾಗ ಆಚಾರ್ಯರು ಈ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಅವರನ್ನು ಅಹಮದನಗರ ಕೋಟೆಯಲ್ಲಿ ಬಂಧಿಸಿ ಇಡಲಾಗಿತ್ತು. ಇದರ ಫಲವಾಗಿ ಅವರು ಅಲ್ಲಿ ಫ್ರೆಂಚ್ ಭಾಷೆಯಲ್ಲಿದ್ದ 'ಅಭಿಧರ್ಮಕೋಶ' ಎಂಬ ಬೌದ್ಧಗ್ರಂಥವನ್ನು ಹಿಂದಿ ಭಾಷೆಗೆ ಅನುವಾದಿಸಿದರು. ಅವರು ೧೯೪೨ರಿಂದ ೧೯೪೫ರ ವರೆಗೆ ಇಲ್ಲಿಯೆ ಜೈಲುವಾಸ ಅನುಭವಿಸಿದರು.

ರಾಜಕೀಯದಲ್ಲಿ ನೈತಿಕತೆ ಮತ್ತು ಶಿಸ್ತನ್ನು ಪರಿಪಾಲಿಸುವುದು ವಿರಳ, ಆದರೆ ಆಚಾರ್ಯರು ತಮ್ಮ ಜೀವನದ ಉದ್ದಕ್ಕೂ ಈ ಎರಡು ಮೌಲ್ಯಗಳನ್ನು ಪರಿಪಾಲಿಸಿದರು. ಅವರು ೧೯೩೬ರಲ್ಲಿ ಅಖಿಲಭಾರತ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು ಮತ್ತು ಆಗಿನ ಉತ್ತರಪ್ರದೇಶದ ಕಾಂಗ್ರೆಸ್ಸಿನ ರಾಜ್ಯಾಧ್ಯಕ್ಷರಾಗಿದ್ದರು. ಜೊತೆಗೆ ಅವರು ೧೯೩೬ರಿಂದ ೧೯೪೬ರ ವರೆಗೆ ಆಗಿನ ಉತ್ತರಪ್ರ್ರದೇಶದ ವಿಧಾನ ಸಭೆಯ ಸದಸ್ಯರಾಗಿದ್ದರು. ವಿಧಾನಸಭೆಯು ಅವರನ್ನು ಸರ್ವಾನುಮತದಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಿತ್ತು. ಆದರೆ ಕಾಂಗ್ರೆಸ್ ಸಮಾಜವಾದಿ ಪಕ್ಷವು ಸಂವಿಧಾನದ ೧೯೩೫ರ ಕಾಯ್ದೆಯಡಿಯಲ್ಲಿ ಅಧಿಕಾರವನ್ನು ಸ್ವೀಕರಿಸಬಾರದೆಂದು ನಿರ್ಧರಿಸಿತ್ತು. ಅವರು ಪಕ್ಷದ ಶಿಸ್ತು ಮತ್ತು ನೈತಿಕತೆಗೆ ಬದ್ಧರಾಗಿ ಮುಖ್ಯಮಂತ್ರಿ ಸ್ಥಾನವನ್ನು ನಿರಾಕರಿಸಿದರು. ಹಾಗೆಯೇ ೧೯೪೮ರಲ್ಲಿ ಉತ್ತರಪ್ರದೇಶದ ವಿಧಾನಸಭೆಯ ಸದಸ್ಯರಾಗಿದ್ದ ಆಚಾರ್ಯರು ರಾಷ್ಟ್ರೀಯ ಕಾಂಗ್ರೆಸ್ಸಿನಿಂದ ಕಾಂಗ್ರೆಸ್ ಸಮಾಜವಾದಿ ಪಕ್ಷ ಹೊರಬಂದಾಗ ತನ್ನ ಪಕ್ಷದ ೧೨ ವಿಧಾನ ಸಭೆಯ ಸದಸ್ಯರೊಂದಿಗೆ ಚರ್ಚಿಸಿ ಎಲ್ಲರೂ ಸಾಮೂಹಿಕವಾಗಿ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ರಾಜಕಾರಣದಲ್ಲಿ ನೈತಿಕತೆಯನ್ನು ಎತ್ತಿಹಿಡಿದು ಆದರ್ಶ ಮೇಲ್ಪಂಕ್ತಿಯನ್ನು ಹಾಕಿದರು.

ಆಚಾರ್ಯರು ಜಾತಿವ್ಯವಸ್ಥೆಯನ್ನು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ವಿಶ್ಲೇಷಿಸಿ, ಜಾತಿಗಳನ್ನು ಆರ್ಥಿಕ ದೃಷ್ಟಿಕೋನದಿಂದ ಸಂಘಟಿಸಬೇಕೆಂದು ಹೇಳಿದರು. ಉದಾಹರಣೆಗೆ, ಹೆಚ್ಚು ಕೂಲಿಕೊಡಬೇಕೆಂಬ ಬೇಡಿಕೆಯಿಟ್ಟು ಬಡ ಒಕ್ಕಲಿಗ, ಲಿಂಗಾಯತ, ಕುರುಬ, ದಲಿತ, ಗಿರಿಜನರನ್ನು ಸಂಘಟಿಸುವುದು ಬಹು ಸುಲಭ. ಆದರೆ ಕೆಳಜಾತಿಗಳು ಮೇಲು ಜಾತಿಗಳ ವಿರುದ್ಧ ಹೋರಾಟ ಮಾಡಬೇಕೆಂದು ಹೇಳಿದಾಗ ಬಡ ಒಕ್ಕಲಿಗರು, ಲಿಂಗಾಯತರು, ಕುರುಬರು ಒಟ್ಟಿಗೆ ಸೇರುವುದಿಲ್ಲ. ಹೀಗೆ ಅವರು ಜಾತಿ ವ್ಯವಸ್ಥೆಯನ್ನು ಮಾರ್ಕ್ಸ್‌ವಾದಿ ದೃಷ್ಟಿ ಕೋನದಿಂದ ವಿಶ್ಲೇಷಿಸಿದ್ದರು.

ಮಾರ್ಕ್ಸ್‌ವಾದಿಯಾದ ಆಚಾರ್ಯರು ವಿಶ್ವದಲ್ಲಿ ಮೊಟ್ಟ ಮೊದಲಿಗೆ ರೈತಾಪಿವರ್ಗದ ಕ್ರಾಂತಿಕಾರಿತನವನ್ನು ಗುರುತಿಸಿದರು. ನಂತರ ಮಾವೊ, ದಿಮಿತ್ರೋವ್ ಅವರು ರೈತಾಪಿವರ್ಗದ ಕ್ರಾಂತಿಕಾರಿತನವನ್ನು ಬಳಸಿಕೊಂಡರು. ಆದ್ದರಿಂದ ಆಚಾರ್ಯರು ಭಾರತದಲ್ಲಿ ಕಳೆದ ಮೂವತ್ತರ ದಶಕದಲ್ಲಿ ಅಖಿಲಭಾರತ ಕಿಸಾನ್ ಸಭಾಗಳನ್ನು ಕಟ್ಟಿ ಉತ್ತರಪ್ರದೇಶ ಮತ್ತು ಬಿಹಾರಗಳಲ್ಲಿ ರೈತಾಪಿವರ್ಗವನ್ನು ಸಂಘಟಿಸಿದ್ದರು. ಅವರು ರೈತರಿಗೆ ಶಿಕ್ಷಣ ನೀಡಿ, ಸಹಕಾರಿ ಕೃಷಿ ಪದ್ಧತಿಯನ್ನು ಜಾರಿಗೆ ತಂದು, ಕೃಷಿ ಉತ್ಪನ್ನಗಳನ್ನು ಸಮಾನವಾಗಿ ಹಂಚಿಕೊಳ್ಳಬೇಕೆಂಬುದು ಅವರ ಚಿಂತನೆಯಾಗಿತ್ತು.

ಆಚಾರ್ಯರು ಸಮಾಜವಾದಿ ಪಕ್ಷದಲ್ಲಿ ಹುದ್ದೆಗಳನ್ನು ಬಯಸಿದವರಲ್ಲ. ಹುದ್ದೆಗಳೇ ಅವರನ್ನು ಹುಡುಕಿಕೊಂಡು ಹೋದವು. ೧೯೫೦ರಲ್ಲಿ ಮದ್ರಾಸಿನಲ್ಲಿ ನಡೆದ ಸಮಾಜವಾದಿ ಪಕ್ಷದ ೮ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಆಚಾರ್ಯರನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಯಿತು. ಅವರು ೧೯೫೦ರಿಂದ ೧೯೫೨ರ ವರೆಗೆ ಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದರು. ಈ ಮಧ್ಯೆ ಪ್ರಜಾಸಮಾಜವಾದಿ ಪಕ್ಷವು ಒಡೆದು ಪ್ರಜಾ ಸಮಾಜವಾದಿ ಪಕ್ಷ ಮತ್ತು ಸಮಾಜವಾದಿ ಪಕ್ಷ (ಲೋಹಿಯಾ ಬಣ)ಗಳಾದವು. ಅವರು ೧೯೫೪ರಿಂದ ೧೯೫೬ರವರೆಗೆ ಪ್ರಜಾಸಮಾಜವಾದಿ ಪಕ್ಷದ ಅಧ್ಯಕ್ಷರಾಗಿದ್ದರು.

ಸಮಾಜವಾದಿ ಪಕ್ಷವು ತನ್ನ ಬಲದ ಮೇಲೆ ಹಿರಿಯರಾದ ಆಚಾರ್ಯರನ್ನು ಸಂಸತ್ತಿನ ರಾಜ್ಯಸಭೆಗೆ ಆಯ್ಕೆ ಮಾಡಿ ಕಳುಹಿಸಿತು. ಅವರು ೩-೪-೧೯೫೨ರಿಂದ ೨-೪-೧೯೫೪ರವರೆಗೆ ರಾಜ್ಯಸಭೆಯ ಸದಸ್ಯರಾಗಿದ್ದರು. ಮತ್ತೆ ಪ್ರಜಾಸಮಾಜವಾದಿ ಪಕ್ಷವು ರಾಜ್ಯಸಭೆಗೆ ಅವರನ್ನು ಆಯ್ಕೆ ಮಾಡಿ ಕಳುಹಿಸಿತು. ಅವರು ೩-೪-೧೯೫೪ರಿಂದ ತಾವು ಬದುಕಿರುವವರೆಗೆ ರಾಜ್ಯಸಭೆಯ ಸದಸ್ಯರಾಗಿದ್ದರು. ಅವರು ಏಕಕಾಲದಲ್ಲಿ ತಮ್ಮ ಅಸ್ತಮಾ ರೋಗದೊಂದಿಗೆ ಹಾಗೂ ಒಡಕಿನ ಸಮಾಜವಾದಿ ಪಕ್ಷಗಳ ಐಕ್ಯತೆಗೆ ಹೋರಾಡಿ ತಮಿಳ್ನಾಡಿನ ಈರೋಡ್‌ನಲ್ಲಿ ೧೮-೨-೧೯೫೬ರಲ್ಲಿ ಸಾವನ್ನಪ್ಪಿದರು.

**–ಪ್ರೊ. ಹನುಮಂತ**

# ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ-೩೬

-ಇಂದಿರಾ ಬಿ.ಕೃಷ್ಣಪ್ಪ

## ಕೃಷ್ಣಪ್ಪನವರಿಗೆ ಪಿತೃವಿಯೋಗ

ಏರುಜವ್ವನದಲ್ಲಿ ಶಾಶ್ವತವಾಗಿ ಹೀಗೇ ಇದ್ದು ಬಿಡುವೆನೋ ಎಂಬಂತೆ, ಯಾವುದಕ್ಕೂ ಬಾಗದೆ, ಬರಿ ಬೀಗುತ್ತಲೇ ಇರುವ ನಮಗೆ ಸೃಷ್ಟಿ ಮತ್ತು ಕಾಲ, "ಇಲ್ಲಿ ಯಾವುದೂ ಶಾಶ್ವತವಲ್ಲ; ಚಲನಶೀಲತೆಯೇ ಶಾಶ್ವತ" ಎಂಬುದನ್ನು ಹಿರಿಯರ ಜೀವನ ವಿದಾಯಗಳು ಸ್ಮರಣೆಗೆ ತಂದು ಕೊಡುತ್ತಿರುತ್ತದೆ.

ಹೆಚ್. ಬಸಪ್ಪನವರು ಕೃಷ್ಣಪ್ಪನವರ ತಂದೆಯವರು. ನಮ್ಮ ಅತ್ತೆ ಕಾಲವಶವಾದ ನಂತರ, ಅವರು ಬಹಳಷ್ಟು ಕಾಲ ನಮ್ಮೊಂದಿಗೆ ಇರುತ್ತಿದ್ದರು. ಮಕ್ಕಳ ಆಟಪಾಠ ಓಡಾಟ ಅವರಿಗೆ ತುಸು ನೆಮ್ಮದಿ ಕೊಡುತ್ತಿತ್ತು. ಬೆಳಗೆದ್ದು, ಶುಭ್ರ ಸ್ವಚ್ಛರಾಗಿ ಒಂದೆರಡು ಮೈಲು ನಡಿಗೆ ಮುಗಿಸಿ ವಾಪಾಸಾಗುತ್ತಿದ್ದರು. ಪ್ರತಿ ಹಿಂದಿನ ದಿನ ರಾತ್ರಿ ಊಟದ ವೇಳೆಯಲ್ಲಿ ಕೃಷ್ಣಪ್ಪ "ಬೆಳಿಗ್ಗೆ ವಾಕಿಂಗ್ ಬಾಳ ದೂರ ಹೋಗಬೇಡ, ಗೊತ್ತಿರೋ ಹಾದೀಲೇ ಹೋಗು" ಎಂದು ತಂದೆಗೆ ಹೇಳುತ್ತಿದ್ದರು. ಅವರು ವಾಕಿಂಗ್ ಹೋಗಿ ಬಂದ ನಂತರ ಊದಿನ ಕಡ್ಡಿಗಳನ್ನು ಹಚ್ಚಿ, ಸೂರ್ಯನ ಕಡೆ ಮುಖಮಾಡಿ, ಬೆಳಗಿ, ಅಲ್ಲೇ ಬಾಗಿಲಿಗೋ ಕಿಟಕಿಗೋ ಸಿಕ್ಕಿಸುತ್ತಿದ್ದರು. ನಮ್ಮಲ್ಲಿ ದೇವರಪಟಗಳಿಲ್ಲದ್ದು ಅವರಿಗೆ ಕೊರತೆಯಾಗಿತ್ತು. ಆಮೇಲೆ ದಿನಪತ್ರಿಕೆಗಳನ್ನು ಒಂದೂವರೆ ಗಂಟೆ ಓದುತ್ತಾ ಕುಳಿತು ಬಿಡುತ್ತಿದ್ದರು. "ನಮ್ಮಪ್ಪ ನೋಡು, ಪತ್ರಿಕೆಯ ಇಂಚಿಂಚೂ ಬಿಡದೆ ಓದ್ತಾನೆ" ಎಂದು ಕೃಷ್ಣಪ್ಪ ತಮಾಷೆ ಮಾಡ್ತಾ ಇದ್ರು. ಬೆಳಗಿನ ಉಪಹಾರದ ನಂತರ ಮನೆ ಸುತ್ತಲಿನ ತೋಟದಲ್ಲಿ ಕಳೆ ಕೀಳೋದು, ಮಡಿ ಮಾಡೋದು, ಬೀಜ ಹಾಕೋದು, ಗಿಡ ಕಟ್ಟೋದು, ಸೊಪ್ಪುಗಳನ್ನು ಕಿತ್ತುಕೊಡೋದು ಮಾಡುತ್ತಾ, ನನ್ನ ತೋಟದ ಕೆಲಸಗಳನ್ನು ಹಗುರಗೊಳಿಸುತ್ತಿದ್ದರು.

ಚಟಗಳ್ಯಾವುವನ್ನು ಹತ್ತಿರ ಬಿಟ್ಟುಕೊಳ್ಳದ ಮಾವನವರು, ೭೦ರ ಇಳಿ ವಯಸ್ಸಿನಲ್ಲೂ ಆರೋಗ್ಯವಾಗಿದ್ದರು. ಮಾವನವರು ಮನೆಯಲ್ಲಿದ್ದರಿಂದ ನಾವೆಲ್ಲ ಶಾಲೆ-ಕಾಲೇಜು-ಕಚೇರಿಯಿಂದ ಹಿಂತಿರುಗುವವರೆಗೂ ನಿರಮ್ಮಳವಾಗಿರುತ್ತಿದ್ದೆವು. ಬೇಸಿಗೆ ರಜೆಯಲ್ಲಿ ಮಕ್ಕಳೊಂದಿಗೆ ಹರಿಹರಕ್ಕೆ ಹೋಗಿ ಬರುತ್ತಿದ್ದರು. ಹಾಗೊಮ್ಮೆ ಹರಿಹರಕ್ಕೆ ಹೋಗಿದ್ದಾಗ ಹವಾಮಾನ ವೈಪರೀತ್ಯದಿಂದಾಗಿ ಆರೋಗ್ಯ ಹದಗೆಟ್ಟಿದ್ದರಿಂದ ಅಲ್ಲಿಯೇ ಉಳಿದರು. "ಭದ್ರಾವತಿಯಲ್ಲಿ ನಿತ್ಯ ಬೆಳಿಗ್ಗೆ ಎಲ್ಲರೂ, ಶಾಲೆ-ಕಾಲೇಜು-ಕಚೇರಿ ಅಂತ ಹೋಗಿಬಿಡ್ತಾರೆ. ನನ್ನೊಡನೆ ಮಾತನಾಡಲು ಯಾರೂ ಇರುವುದಿಲ್ಲ." ಎಂದು ಮಗಳು ಹಾಲಮ್ಮನೊಡನೆ ಆಗಾಗ್ಗೆ ಹೇಳುತ್ತಿದ್ದರಂತೆ. ಹರಿಹರದಿಂದ ಅವರನ್ನು ಕರೆತರಲು ಕೃಷ್ಣಪ್ಪ ಬಹಳ ಪ್ರಯತ್ನಿಸಿದರಾದರೂ, ಮಾವ ಅಲ್ಲೇ ಉಳಿಯಲು ಇಚ್ಛಿಸಿದರು. ಹಿರಿಯರಿಗೆ ದೊರಕದ ಸಹಚರ್ಯ, ಅವರ ಒಂಟಿತನ, ಸಮಾಜದಲ್ಲಿ ಈಗಲೂ ಬಹುದೊಡ್ಡ ಸಮಸ್ಯೆಯಾಗಿದೆ. ಬೆಂಗಳೂರಂಥ ನಗರ ಪ್ರದೇಶದಲ್ಲಿ ಹಿರಿಯ ನಾಗರೀಕರ ವೇದಿಕೆ - ಸಂಘಟನೆಗಳು, ಹಿರಿಯರ ಆರೋಗ್ಯ - ಆಹಾರ, ಅಭಿರುಚಿ - ಹವ್ಯಾಸ, ವ್ಯಾಯಾಮಗಳ ಕಡೆ ಗಮನ ಹರಿಸುತ್ತಾ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವರನ್ನು ತೊಡಗಿಸುತ್ತಾ ಅವರು ನೆಮ್ಮದಿ ಸಂತೋಷದಿಂದಿರುವಂತೆ ನೋಡಿಕೊಳ್ಳುತ್ತಿವೆ.

ಹಾಗೆ ಹರಿಹರದಲ್ಲೇ ಉಳಿದುಕೊಂಡ ಮಾವನವರಿಗೆ ಆಸ್ತಮಾ ಮರುಕಳಿಸಿತ್ತು. 'ಅಪ್ಪನಿಗೆ ತುಂಬಾ ಹುಷಾರಿಲ್ಲ. ತಕ್ಷಣಕ್ಕೆ ಹಣ ಕಳುಹಿಸಿ ಮತ್ತೆ ಬರುವ' ಅಂತ ತಂಗಿ ಹಾಲಮ್ಮ, ಅಣ್ಣ ಕೃಷ್ಣಪ್ಪನಿಗೆ ಪತ್ರ ಬರೆಯಿಸಿದ್ದರು. ಮುಂದಿನ ವಾರದಲ್ಲಿ ಹಾಲಮ್ಮನ ಮಗ ಗುರುಸಿದ್ದ ಬಂದು, ತಾತನಿಗೆ ಸೀರಿಯಸ್ಸು ಅಂತ ತಂಗಿ ರೇಣುಕಾಳನ್ನು ಕರೆದುಕೊಂಡು ಹೋಗಿದ್ದನು ಮತ್ತೆ ಮೂರು ದಿನಗಳ ನಂತರ, ರಾತ್ರಿ ಸುಮಾರು ಎಂಟೂವರೆ ಸಮಯ ಪೋಲೀಸರೊಬ್ಬರು ಬಂದು ನಿಮಗೆ ಹರಿಹರದಿಂದ ಫೋನ್ ಬಂದಿದೆ ಬನ್ನಿ ಎಂದು ಕೃಷ್ಣಪ್ಪನವರನ್ನು ಕರೆದುಕೊಂಡು ಹೋಗಿದ್ದರು. ಏನು ಸುದ್ದಿಯೋ ಏನೋ ಎಂದು ನಮಗೆ ದಿಗಿಲು ಹೊಡೆಯುತ್ತಿತ್ತು. ಕೃಷ್ಣಪ್ಪ ಬಂದವರೇ "ನಮ್ಮಪ್ಪಂಗೆ ತುಂಬಾ ಸೀರಿಯಸ್, ನಾನೀಗಲೇ ಹೊರಡ್ತೀನಿ ಬೇಗ ಸ್ವಲ್ಪ ಊಟಕೊಡು, ನಂತರ ಅಲ್ಲಿಂದ ಏನು ಅಂತ ಟೆಲಿಗ್ರಾಂ ಕಳಿಸ್ತೀನಿ" ಎಂದರು. ತಟ್ಟೆ ಕೈಯಲ್ಲಿದ್ದು ನಿಂತೇ ಊಟಮಾಡಿ, ಸ್ವೆಟರ್-ಟೋಪಿ ಧರಿಸಿ, ಹೆಗಲಿಗೆ ಕಿಟ್‌ಬ್ಯಾಗ್ ಏರಿಸಿ ಹೊರಟೇಬಿಟ್ಟರು. ಮೈತ್ರೇಯಿ ಓಡಿಬಂದು ತಾನೂ ಬರುವುದಾಗಿ ಅಳುತ್ತಾ ನಿಂತಳು. 'ಹೂಂ ಸರಿ' ಎಂದು ಅವಳಿಗೊಂದು ಶಾಲು ಹೊದಿಸಿಕೊಂಡು, ಅವಳನ್ನೂ ಕರೆದುಕೊಂಡು ಹೊರಟೇಬಿಟ್ಟರು.



ಮಕ್ಕಳು, ಮೊಮ್ಮಕ್ಕಳೊಂದಿಗೆ
ಕೃಷ್ಣಪ್ಪನವರ ತಂದೆ ಬಸಪ್ಪನವರು

ಮರುದಿನ ಎಂದಿನಂತೆ ಶಾಲೆ-ಕಚೇರಿಗೆ ಹೋಗಿದ್ದ ನಮಗೆ, ವಾಪಾಸಾದಾಗ "ಸ್ಟಾರ್ಟ್ ಇಮ್ಮಿಡೇಟ್‌ಲಿ" ಎಂಬ ಟೆಲಿಗ್ರಾಂನ್ನು ತಿಪ್ಪೇಶ (ತಮ್ಮನ ಮಗ) ತೋರಿಸಿದ. ರಾತ್ರಿ ನಾನು ಮಕ್ಕಳನ್ನು ಕಟ್ಟಿಕೊಂಡು ಹೊರಡುವುದು ಸಾಧ್ಯವಿಲ್ಲವೆಂದು ಮರುದಿನ ಬೆಳಿಗ್ಗೆ ಹೊರಟೆವು. ನಾವು ನಾಲ್ಕು ಮಂದಿ ಹರಿಹರ ತಲುಪಿದಾಗ, ಇಳಿಹೊತ್ತು. ಸಂಸ್ಕಾರದ ವಿಧಿಗಳೆಲ್ಲಾ ಪೂರ್ಣಗೊಂಡು ಮಾವ ತನ್ನ ಗಮ್ಯ ನೆಲೆಗೆ ಹೊರಟಿದ್ದರು. ಎಲ್ಲರೂ ಕೊನೆಯ ನಮಸ್ಕಾರ ಹೇಳಿದ ನಂತರ ಅವರ ಕಡೆಯ ಪಯಣ ಸಾಗಿತ್ತು. ಆ ಮನೆಗೆ ನಾನು ಬಂದಾಗಿನಿಂದ ನನ್ನನ್ನು ಮಗಳಂತೆ ಕಂಡ ಹಿರಿಜೀವವೊಂದು ನಮ್ಮೊಡನೆ ಆ ಕ್ಷಣದಿಂದ 'ಇಲ್ಲ' ವೆಂಬ ಅರಿವು, ಬದುಕು ಕುರಿತು ಹಲವು ಜಿಜ್ಞಾಸೆಗಳನ್ನು ನಮ್ಮಲ್ಲಿ ಹುಟ್ಟಿಹಾಕಿತ್ತು.

ಮಾವನವರು ಮಲಗಿದ್ದ ಜಾಗದಲ್ಲಿ ಹಚ್ಚಿಟ್ಟ ಹಣತೆಯ ಮುಂದೆ ನಾವೆಲ್ಲ ಕುಳಿತಾಗ, ಹಾಲಮ್ಮ ತಂದೆಯ ಕೊನೆ ಕ್ಷಣಗಳನ್ನು ನೆನೆಯುತ್ತಾ, "ಮುಸ್ಸಂಜೆ ಆಯ್ತು, ಮನೆ ದೀಪ ಹಚ್ಚು, ಬಾಗಿಲಿಗೆ ನೀರು ಹಾಕು ಅಂದಿದ್ದರು. ಅದೆಲ್ಲಾ ಮಾಡಿದ ನಂತರ, ಯಾಕೋ ಎದೆಯಲ್ಲಿ ಉರಿ' ಎಂದು ಪಕ್ಕದ ದಾನಮ್ಮನ ಅಂಗಡಿಯಿಂದ ತಂದ ಪೆಪ್ಪರ್‌ಮಿಂಟ್ ಬಾಯಿಗೆ ಹಾಕಿ, ನೀರು ಕುಡಿಸಿದ್ದೆ. ಸುತ್ತಮುತ್ತಲಿನ ಮನೆಯವರು ಬಂದು ನೋಡಿಹೋಗಲು ಆರಂಭಿಸಿದ್ದರು. ಅಪ್ಪ ಮತ್ತೆ 'ಉರಿಉರಿ' ಎಂದರು. ಆತನಿಗೆ ಎದೆಯೊಳಗೆ ಏನೇನು ಹಾಲಾಹಲವಿತ್ತೋ, ನಾಕಾಣೆ ಶಿವನೆ! ಅಣ್ಣ, ಅಪ್ಪನ ತಲೆಯನ್ನು ನನ್ನ ತೊಡೆಯ ಮೇಲಿಟ್ಟು ಮಲಗಿಸಿದರು. ನೀರು ಕುಡಿಸಿದರು. ಅಪ್ಪಂಗೆ ನಾನು, "ಗುರುದೀಕ್ಷೆ ತಕ್ಕೊಂಡಿದ್ದಿ, "ಶಿವಶಿವ" ಎಂದು ಹೇಳು ಅಂತ ಹೇಳ್ದೆ, ಆತ ಭಾಳ ಕಷ್ಟಪಟ್ಟು "ಶಿವ.... ಶಿವಾ.. ಶಿವಾ.... ಶಿವಾ ಎಂದು ಹೇಳಿದಷ್ಟೇ ಮತ್ತೆ ಉಸಿರಿಲ್ಲ" ಎಂದು ಬಿಕ್ಕಿಬಿಕ್ಕಿ ಅಳಲಾರಂಭಿಸಿದರು. ಕೃಷ್ಣಪ್ಪ, "ಯಾಕ ಅಳತಿ, ತೆಗಿ, ಎಲ್ಲ್ರೂ ಒಂದಿನ ಹೋಗಬೇಕು" ಎಂದು ಹೇಳುತ್ತಾ, ಹೊರಗೆ ಜಗುಲಿ ಮೇಲೆ ಹೋಗಿ ಕುಳಿತರು. ಎಲ್ಲರೂ ಹಣತೆಯ ಬೆಳಕಿಗೆ ವಂದಿಸಿದರು. ಮೊದಲು ಅತ್ತೆ ಚೌಡಮ್ಮ ನಂತರ ಬಸಪ್ಪ ಪ್ರಕೃತಿಯ ಮಡಿಲು ಸೇರಿದರು. ಆ ಕ್ಷಣ ನಮಗೆ ಸ್ಮಶಾನ ವೈರಾಗ್ಯ ಬಂದರೂ ಮತ್ತೆ ಮರುದಿನ ಎಲ್ಲಾ ಆಸೆ-ಆಸಕ್ತಿಗಳು, ನಿರೀಕ್ಷೆಗಳಲ್ಲಿ ತೊಡಗಿಕೊಳ್ಳುತ್ತೇವೆ. ತಂದೆ ತಾಯಿಯರಿಬ್ಬರಿಗೂ ವಿದಾಯ ಹೇಳಿದ ಕೃಷ್ಣಪ್ಪ, ಕೆಲಸವಿಲ್ಲದ ಮದುವೆಯಾಗದ, ತಮ್ಮ ತಂಗಿಯರ ಜವಾಬ್ದಾರಿಗಳನ್ನು ಮನದಲ್ಲಿ ತುಂಬಿಕೊಂಡು ಅಂತರ್ಮುಖಿಯಾಗುತ್ತಿದ್ದಂತೆ ಕಾಣುತ್ತಿದ್ದರು.

ಶಾಲಾ-ಕಾಲೇಜುಗಳ ಬಿಡುವಿನ ದಿನಗಳಲ್ಲಿ ಮಕ್ಕಳಿಬ್ಬರನ್ನು ತೊಡೆ ಮೇಲೆ ಕೂರಿಸಿಕೊಂಡು ಮತ್ತೆ ಕೆಲವು ವೇಳೆ, ಎಣ್ಣೆ ಹಚ್ಚುತ್ತಾ, ರಾಮಾಯಣ, ಮಹಾಭಾರತದ ಘಟೋದ್ಗಜ, ಹನುಮಂತ, ಭೀಮ ಅರ್ಜುನರ ಸಾಹಸಗಳು, ಕರ್ಣ-ಏಕಲವ್ಯರ ಸಾಧನೆಗಳು, ಜಟಾಯುವಿನ ಸಾಮರ್ಥ್ಯ, ಬಾಲಕೃಷ್ಣನ ಆಟಪಾಠಗಳು, ಶಕುನಿಯ ಕುತಂತ್ರಗಳು, ಯುದ್ಧಗಳು, ಬುದ್ಧನ ಕಥೆ, ಭರತ ಬಾಹುಬಲಿ, ಪಂಚತಂತ್ರ ಕಥೆಗಳನ್ನು ಸಂಭಾಷಣೆ, ಅಭಿನಯಗಳೊಂದಿಗೆ ಹೇಳುತ್ತಾ ರಂಜಿಸುತ್ತಿದ್ದರು. ಮಕ್ಕಳ ಶಾಲೆಯ ಕಂಠಪಾಠ ಸ್ಪರ್ಧೆಗಳಿಗೆ, ಪೂರ್ವತಯಾರಿ ನನ್ನದಾಗಿದ್ದರೆ, ಅಂತಿಮ ಸಿದ್ಧತೆ ಅವರದಾಗಿರುತ್ತಿತ್ತು.

(ಮುಂದುವರೆಯುವುದು)

**ಯುವ ಸಮಾಜವಾದಿ ಚಿಂತನ ವೇದಿಕೆ**

# ಸಮಾನ ಶಿಕ್ಷಣ ಎಂಬ ಗಗನ ಕುಸುಮ

**–ಅಕ್ಷತಾ ಹುಂಚದಕಟ್ಟೆ**



ನಮ್ಮ ಸಂವಿಧಾನದ ಪೀಠಿಕೆಯಲ್ಲಿ "ಇಂಡಿಯಾ ದೇಶವನ್ನು ಸ್ವಾಯತ್ತ, ಸಮಾಜವಾದಿ, ಸೆಕ್ಯುಲರ್, ಗಣರಾಜ್ಯ ಪ್ರಜಾಪ್ರಭುತ್ವ ದೇಶವನ್ನಾಗಿ ರಚಿಸಬೇಕಾಗಿದೆ. ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ, ರಾಜಕೀಯ ನ್ಯಾಯ ಸಮಾಜದ ಎಲ್ಲಾ ಜಾತಿ ವರ್ಗಗಳಿಗೆ ಸಮಾನವಾಗಿ ತಲುಪಬೇಕು" ಎಂದು ಸ್ಪಷ್ಟವಾಗಿ ಬರೆಯಲಾಗಿದೆ. ಈ ಎಲ್ಲ ಆಶಯಗಳು ಕಾರ್ಯರೂಪಕ್ಕೆ ಬರಬೇಕೆಂದರೆ ಶೈಕ್ಷಣಿಕ ಅವಕಾಶಗಳಲ್ಲಿ ಸಮಾನತೆ ಸಾಧಿಸುವಂತಾಗಬೇಕು. ಸಮಾನ ಶಿಕ್ಷಣವೇ ಈ ಆಶಯಗಳ ಈಡೇರಿಕೆಗೆ ಇರುವ ರಹದಾರಿ. ಶಿಕ್ಷಣವು ಕೆಲವೇ ಜನರ ಸ್ವತ್ತಾದರೆ ಅವರು ಉಳಿದ ಬಹುಸಂಖ್ಯಾತ ದುರ್ಬಲ ವರ್ಗದ ಮೇಲೆ ಅಧಿಕಾರ ಚಲಾಯಿಸಲು ಅದನ್ನು ಬಳಸುತ್ತಾರೆನ್ನುವುದನ್ನು ಭಾರತದ ಚರಿತ್ರೆ ಸಾಬೀತು ಮಾಡಿದೆ. ಆದ್ದರಿಂದ ಪ್ರಜಾತಂತ್ರ ವ್ಯವಸ್ಥೆಯನ್ನು ಒಪ್ಪಿಕೊಂಡ ಮೇಲಾದರೂ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಗೂ ಶಿಕ್ಷಣದಲ್ಲಿ ಸಮಾನ ಅವಕಾಶಗಳು ಲಭ್ಯವಾಗಬೇಕಿತ್ತು. ಆದರೆ ಹಾಗಾಗಲಿಲ್ಲ ಎಂಬುದೇ ಇಲ್ಲಿನ ದುರಂತ. ದಿನ ದಿನಕ್ಕೂ ಶಿಕ್ಷಣ ಎಂಬುದು ಸಮಾಜದಲ್ಲಿ ದೊಡ್ಡ ಕಂದರವನ್ನು ನಿರ್ಮಿಸುತ್ತಿದೆ. ಐಸಿಎಸ್ಸಿ, ಸಿಬಿಎಸ್ಸಿ ಶಾಲೆಗಳು, ಇಂಗ್ಲಿಷ್ ಕಾನ್ವೆಂಟ್ಗಳು ಪೋಷಕರಿಂದ ಲಕ್ಷಾಂತರ ರೂ ವಸೂಲಿ ಮಾಡಿ ಶಿಕ್ಷಣದ ವ್ಯಾಪಾರೀಕರಣ ಮಾಡುತ್ತಿದ್ದರೆ, ಮತ್ತೊಂದೆಡೆ ಸರ್ಕಾರಿ ಕನ್ನಡ ಶಾಲೆಗಳು ಮಕ್ಕಳಿಲ್ಲ ಎಂಬ ಕಾರಣಕ್ಕಾಗಿ ಭರದಿಂದ ಮುಚ್ಚುತ್ತಿವೆ. ಈ ವಿದ್ಯಮಾನದಲ್ಲಿ ಶಿಕ್ಷಣ ಎನ್ನುವುದು ಬಡವರು, ಹಳ್ಳಿಗಾಡಿನ ಮತ್ತು ಕೂಲಿ ಕಾರ್ಮಿಕರ ಮಕ್ಕಳಿಗೆ ಗಗನಕುಸುಮವಾಗಿದೆ.

ಇದಕ್ಕೆ ಕಾರಣ ಕಳೆದ ೩೦ ವರ್ಷಗಳಲ್ಲಿ ವಿವಿಧ ಯೋಜನೆಗಳು/ ಶಿಕ್ಷಣ ಪದ್ಧತಿಗಳ ಕೆಳಗೆ ಸರ್ಕಾರಿ ಶಾಲಾ ವ್ಯವಸ್ಥೆಯನ್ನು ವಿಸ್ತರಿಸುವ, ಬಲಗೊಳಿಸುವ ಮಾತಾಡುತ್ತಲೇ, ಸರ್ಕಾರೀ ಶಾಲಾ ವ್ಯವಸ್ಥೆಯನ್ನು ದುರ್ಬಲಗೊಳಿಸಲಾಗಿದೆ. ೧೯೯೪ಳರಲ್ಲಿ ಇನ್ನು ಮುಂದೆ ಇಂಗ್ಲಿಷ್ ಭಾಷಾ ಮಾಧ್ಯಮಕ್ಕೆ ಅವಕಾಶವಿಲ್ಲ ಎಂದು ಹೇಳಿದರೂ, ಕೋರ್ಟ್‌ನಲ್ಲಿ ತಡೆಯಾಜ್ಞೆ ತರಲಾಯಿತು ಮತ್ತು ಹಿಂದಿನ ಇಂಗ್ಲಿಷ್ ಮಾಧ್ಯಮದ ಶಾಲೆಗಳು ಯಥಾಸ್ಥಿತಿಯಲ್ಲಿ ಮುಂದುವರೆದವು. ಇದಕ್ಕೆ ವ್ಯತಿರಿಕ್ತವಾದ ತೀರ್ಪು ಬೇರೊಂದು ಮೊಕದ್ದಮೆಯಲ್ಲಿ ಸುಪ್ರೀಂಕೋರ್ಟ್‌ನಲ್ಲೇ ಬಂದದ್ದನ್ನು ಇಟ್ಟುಕೊಂಡು, ಹಳೆಯ ತಡೆಯಾಜ್ಞೆಯನ್ನು ತೆಗೆಸುವ ಕೆಲಸವನ್ನು ಸರ್ಕಾರ ಇದುವರೆಗೂ ಮಾಡಿಲ್ಲ. ಏಕೆಂದರೆ ಬಹುತೇಕ ರಾಜಕಾರಣಿಗಳು ಮತ್ತು ಮಠಗಳ ಕೈಯಲ್ಲೇ ಶಿಕ್ಷಣ ಸಂಸ್ಥೆಗಳ ಸೂತ್ರವಿದೆ. ಶೇ ೮೦ ರಷ್ಟು ಖಾಸಗಿ ಶಾಲೆಗಳ ಮಾಲೀಕರು ಅವರೇ ಆಗಿದ್ದಾರೆ.

ಇವತ್ತು ಕೆಳ ಮಧ್ಯಮವರ್ಗ ಮತ್ತು ಮಧ್ಯಮವರ್ಗದ ಶೇ ೬೦ ರಷ್ಟು ಪೋಷಕರು ಸರ್ಕಾರಿ ಶಾಲೆಗೆ ಮಕ್ಕಳನ್ನು ಕಳಿಸುವ ಸಾಧ್ಯತೆಯನ್ನೇ ಅಲ್ಲಗಳೆಯುತ್ತಾರೆ. ಯಾಕೆಂದರೆ ಅಲ್ಲಿ ಪಾಠ–ಪ್ರವಚನ ಸರಿಯಾಗಿ ನಡೆಯುವುದಿಲ್ಲ, ಇಂಗ್ಲಿಷ್ ಕಲಿಸುವುದಿಲ್ಲ, ಅಗತ್ಯ ಸೌಕರ್ಯಗಳಿಲ್ಲ ಎಂಬುದು ಮುಖ್ಯ ಕಾರಣವಾಗಿದೆ. ಇವತ್ತು ಸರ್ಕಾರಿ ಶಾಲೆಯ ಅಧ್ಯಾಪಕರು ಸಹ ತಾವು ಕೆಲಸ ಮಾಡುತ್ತಿರುವ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸದೇ ಖಾಸಗಿ ಶಾಲೆಗಳಿಗೆ ಕಳಿಸುತ್ತಾರೆ ಎನ್ನುವುದರಲ್ಲಿ ಮೇಲಿನ ನಂಬಿಕೆಗಳು ಎಷ್ಟು ಬಲವಾಗಿ ಬೇರೂರಿವೆ ಎಂಬುದು ತಿಳಿಯುತ್ತದೆ. ಪ್ರಾಥಮಿಕ ಶಾಲೆಯ ಅಧ್ಯಾಪಕಿಯ ಮಗಳಾದ ನಾನು ಓದಿದ್ದು ಹಳ್ಳಿಯ ಸರ್ಕಾರಿ ಶಾಲೆಯಲ್ಲೇ, ನನ್ನ ಅಮ್ಮ ಆಗಾಗ ಆಡುತ್ತಿದ್ದ ಮಾತೊಂದು ನನ್ನ ಮನಸ್ಸಿನಲ್ಲಿ ಆಳವಾಗಿ ಬೇರೂರಿದೆ. ಅಮ್ಮ ಯಾವಾಗಲೂ ಹೇಳುವುದಿತ್ತು "ನನ್ನ ಶಾಲೆಯ ಮಕ್ಕಳಿಗೆ ಕಲಿಸಿಕೊಡುವುದರಲ್ಲಿ ನಾನು ಸೋಮಾರಿತನ ತೋರಿಸಿ ಸರಿಯಾಗಿ ಕರ್ತವ್ಯ ನಿರ್ವಹಿಸದಿದ್ದರೆ ಇನ್ನೊಂದು ಸರ್ಕಾರಿ ಶಾಲೆಯಲ್ಲಿ ಓದುವ ನನ್ನ ಸ್ವಂತದ ಮಕ್ಕಳಿಗೆ ಅನ್ಯಾಯ ಮಾಡಿದಂತೆ" ಈ ರೀತಿಯ ಪಾಪಪ್ರಜ್ಞೆ ಇವತ್ತು ಯಾವ ಸರ್ಕಾರಿ ಶಾಲೆಯ ಸರ್–ಟೀಚರುಗಳನ್ನೂ ಕಾಡುವುದಿಲ್ಲ. ಏಕೆಂದರೆ ಅವರೆಲ್ಲ ಹಣ ಕಟ್ಟಿ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಕಳಿಸುವ ವ್ಯವಸ್ಥೆ ಮಾಡಿರುತ್ತಾರೆ. ಈ ಯಾವ ಬೆಳವಣಿಗೆಗಳನ್ನು ಇಂದು ತಡೆಯಲು ಸಾಧ್ಯವೇ ಇಲ್ಲದ ಹಾಗೆ ಗೋಚರಿಸುತ್ತಿರುವುದು ನಮ್ಮೆಲ್ಲರ ದುರಂತ.

ಇವೆಲ್ಲದರ ಮಧ್ಯೆಯು, ಒಂದೆಡೆ ಮಕ್ಕಳ ಹಾಜರಾತಿ ಇಲ್ಲ ಎಂಬ ನೆಪವೊಡ್ಡಿ ಒಂದೆಡೆ ಸರ್ಕಾರಿ ಶಾಲೆಗಳು ಮುಚ್ಚುತ್ತಿರುವ ಹಾಗೂ ಮತ್ತೊಂದೆಡೆ ಖಾಸಗಿ ಶಾಲೆಗಳಿಗೆ ನೂಕು ನುಗ್ಗಲು ಏರ್ಪಡುತ್ತಿರುವ ಈ ಸಂಕೀರ್ಣ ಸಂದರ್ಭದಲ್ಲಿ ನಮಗೆ ಬೆಳಕಿಂಡಿಯಂತೆ ಸಮಾನಶಿಕ್ಷಣ ನೀತಿ ಗೋಚರಿಸುತ್ತದೆ. "ಸಾಮಾಜಿಕ ನ್ಯಾಯ" ಪರಿಕಲ್ಪನೆಯ ನೀತಿಯ ಕಡ್ಡಾಯ ಅನುಷ್ಠಾನ, ಪ್ರತ್ಯೇಕತೆ ಮತ್ತು ತಾರತಮ್ಯ ನೀತಿಗಳಿಗೆ ಅಂತ್ಯ ಹಾಡುವುದು, ಪ್ರತಿಯೊಂದು ಮಗುವೂ ಸಮುದಾಯ, ಜಾತಿ, ವರ್ಗ, ಲಿಂಗಗಳ ಭೇದಭಾವವಿಲ್ಲದೆ ಒಂದೇ ಸೂರಿನಡಿ, ಸಮಾನ ಪಠ್ಯಗಳನ್ನು, ಸಮಾನ ಭಾಷಾ ನೀತಿ, ಸಮಾನ ಗುಣಮಟ್ಟದ ಶಿಕ್ಷಣವನ್ನು ಅಧ್ಯಯನ ಮಾಡುವುದು ಮತ್ತು ಪ್ರಮುಖವಾಗಿ ಸಮಾನ ಶಾಲಾ ವ್ಯವಸ್ಥೆ (common Schooling system) ಸಮಾನ ಶಿಕ್ಷಣ ನೀತಿಯ ಪ್ರಮುಖ ಆಶಯಗಳಾಗಿದೆ. "ಸರ್ಕಾರಿ ಶಾಲೆಗಳು, ಅನುದಾನ ಪಡೆಯುವ, ಅನುದಾನ ರಹಿತ ಎಲ್ಲಾ ಶಾಲೆಗಳು ಒಂದೇ ರೀತಿಯ ಪಠ್ಯಕ್ರಮ ಅಳವಡಿಸಿಕೊಳ್ಳಬೇಕು ಮತ್ತು ಎಲ್ಲರನ್ನು "ಒಳಗೊಳ್ಳುವ" ಶಿಕ್ಷಣ ಪದ್ಧತಿಯ, ಬಹುತ್ವದ ಆಶಯಗಳು **ಸಮಾನ ಶಿಕ್ಷಣ ನೀತಿಯ** ಮೂಲ ಅಡಿಪಾಯಗಳೆಂದು" ಶಿಕ್ಷಣ ತಜ್ಞ ಅನಿಲ್ ಸದ್ಗೋಪಾಲ್ ವಿವರಿಸುತ್ತಾರೆ.

ಪೂರ್ವ ಪ್ರಾಥಮಿಕ ಹಂತವಾದ ೦–೬ ವಯಸ್ಸಿನ ಹಂತವು ಈ ಸಂದರ್ಭದಲ್ಲಿ ತುಂಬಾ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಪ್ರಸ್ತುತ ವ್ಯವಸ್ಥೆಯಲ್ಲಿ ಮಕ್ಕಳು ಶಿಶು ವಿಹಾರ, ಮತ್ತು ಕೆಜಿ ಶಾಲೆಗಳನ್ನು ಸಂಪೂರ್ಣವಾಗಿ ಖಾಸಗಿ ಸಂಸ್ಥೆಗಳಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಯುತ್ತಾರೆ. ನಂತರ ೬ನೇ ವಯಸ್ಸಿನಲ್ಲಿ ೧ನೇ ತರಗತಿಗೆ ಕನ್ನಡ ಮಾಧ್ಯಮಕ್ಕೆ ಸೇರಿಸಲು ಪೋಷಕರು ಹಿಂದೇಟು ಹಾಕುತ್ತಾರೆ. ಸರ್ಕಾರವೇ ೦–೬ ವಯಸ್ಸಿನ ಮಕ್ಕಳಿಗಾಗಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕು. ಅಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಸಬೇಕು. ನಂತರ ಸರಾಗವಾಗಿ ೧ನೇ ತರಗತಿಗೆ ಕನ್ನಡ ಮಾಧ್ಯಮಕ್ಕೆ ಮಕ್ಕಳನ್ನು ಕಳುಹಿಸಲು ಪೋಷಕರು ಆಸಕ್ತಿ ವಹಿಸುವ ಸಾಧ್ಯತೆಗಳು ಹೆಚ್ಚಿರುತ್ತವೆ. ಈ ಹಿನ್ನೆಲೆಯಲ್ಲಿ ಪೂರ್ವ ಪಾಥಮಿಕ ವಿಭಾಗವನ್ನು ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಆರಂಭಿಸಬೇಕು. ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು; ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸಬೇಕು, ಶಿಕ್ಷಕರ ಮೇಲೆ ಹೊರೆ ತಗ್ಗಿಸಬೇಕು. ಎಲ್ಲಾ ಸರ್ಕಾರಿ ಶಾಲೆಗಳನ್ನು ಕೇಂದ್ರೀಯ ವಿದ್ಯಾಲಯಗಳ ಗುಣಮಟ್ಟಕ್ಕೆ ಏರಿಸಬೇಕು.

ಸರ್ಕಾರ ತನ್ನ ಶಿಕ್ಷಣ ನೀತಿಯನ್ನು ಪ್ರಕಟಿಸಬೇಕು. ಸರ್ಕಾರಿ ಶಾಲೆಗಳು ಮತ್ತು ಖಾಸಗಿ ಶಾಲೆಗಳಿಗೆ ಸಮಾನ ನಿಯಮಾವಳಿಗಳನ್ನು ಜಾರಿಗೊಳಿಸಬೇಕು ಸರ್ಕಾರೀ ಶಾಲೆಗಳು ಕನ್ನಡ ಮಾಧ್ಯಮ, ಖಾಸಗಿ ಶಾಲೆಗಳು ಇಂಗ್ಲಿಷ್ ಮಾಧ್ಯಮ ಎಂಬ ನೀತಿ ಹೋಗಬೇಕು. ಸರ್ಕಾರೀ ಮತ್ತು ಖಾಸಗಿ ವಲಯಕ್ಕೆ ಒಂದೇ ಭಾಷಾ ನೀತಿ ಇರಬೇಕು ಇವೆಲ್ಲ ಸಮಾನ ಶಿಕ್ಷಣದ ಆಶಯಗಳಾಗಿದ್ದು, ಇವು ಬರಿಯ ಆಶಯದ ನೆಲೆಯಲ್ಲಿ ಉಳಿಯದಂತೆ ಕಾರ್ಯ ರೂಪಕ್ಕೆ ಬಂದರೆ ಆಗ ಶಿಕ್ಷಣ ಎನ್ನುವುದು ಗಗನ ಕುಸುಮವಾಗದೇ ಎಲ್ಲರ ಪಾಲಿನ ಹಕ್ಕಾಗುತ್ತದೆ.



**(ಪ್ರಗತಿಪರ ಚಳುವಳಿಗಳಲ್ಲಿ ಭಾಗವಹಿಸುವ ಶಿವಮೊಗ್ಗದ ಅಕ್ಷತಾ ಹುಂಚದಕಟ್ಟೆ, ಇಂಗ್ಲಿಷ್ ಸಾಹಿತ್ಯದ ಸ್ನಾತಕೋತ್ತರ ಪದವೀಧರೆಯಾಗಿದ್ದು ಕವಿತೆಗಳನ್ನು ಬರೆಯುತ್ತಾರಲ್ಲದೆ ಅಹಿರ್ನಿಶಿ ಪ್ರಕಾಶನವನ್ನೂ ನಡೆಸುತ್ತಿದ್ದಾರೆ.)**

# ಸಮಕಾಲೀನ

# ಸಾಮಾಜಿಕ ನ್ಯಾಯ ರಾಜಕಾರಣ ಎತ್ತ ಸಾಗಿದೆ?



ನಮ್ಮ ದೇಶ ವಸಾಹತುಶಾಹಿಯಿಂದ ಬಿಡುಗಡೆಗೊಂಡು ಪ್ರಜಾಪ್ರಭುತ್ವ ರಾಷ್ಟ್ರವಾಗಲು ಕಾರಣವಾದ ರಾಷ್ಟ್ರೀಯ ಹೋರಾಟ ಅನೇಕ ಕ್ರಾಂತಿಕಾರಿ ಆಲೋಚನೆಗಳಿಗೆ, ಜನರ ವೈವಿಧ್ಯಮಯ ಆಶೋತ್ತರಗಳಿಗೆ ಕಾರಣವಾಯಿತು. ಅವೆಲ್ಲವೂ ರಾಷ್ಟ್ರೀಯ ಹೋರಾಟದ ಸಮಷ್ಟಿ ಮನಸ್ಸಿನಲ್ಲಿ ಪರಿಷ್ಕಾರಗೊಂಡು ನಮ್ಮ ಸಂವಿಧಾನವಾಗಿ ಹರಳುಗಟ್ಟಿದೆ. ಹಾಗೆ ಮೂಡಿಬಂದದ್ದು ಸಾಮಾಜಿಕ ನ್ಯಾಯದ ಕಲ್ಪನೆ. ಪ್ರಜಾಪ್ರಭುತ್ವವೆಂದ ಮೇಲೆ ಆ ಪ್ರಭುತ್ವದಲ್ಲಿ ಪ್ರಜಾ ವರ್ಗದ ಸಕಲ ಸಮುದಾಯಗಳೂ ಪಾಲ್ಗೊಳ್ಳುವಂತಾಗಬೇಕು. ಅದಕ್ಕಾಗಿ, ಐತಿಹಾಸಿಕ ಕಾರಣಗಳಿಂದಾಗಿ(ಮುಖ್ಯವಾಗಿ ಜಾತಿ ವ್ಯವಸ್ಥೆಯ ಕಾರಣದಿಂದಾಗಿ) ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದ ಸಮುದಾಯಗಳಿಗೆ ರಾಷ್ಟ್ರಜೀವನದ ಎಲ್ಲ ಕ್ಷೇತ್ರಗಳಲ್ಲಿ ನ್ಯಾಯಬದ್ಧ ಪ್ರಾತಿನಿಧ್ಯವನ್ನು ಖಚಿತಗೊಳಿಸಿಕೊಳ್ಳಬೇಕು. ಈ ನ್ಯಾಯಸಾಧನೆಗೆ ಪರಿಣಾಮಕಾರಿ ಸಾಧನವಾಗಿ ಜಾರಿಗೆ ಬಂದದ್ದೇ ಮೀಸಲಾತಿ. ಅದನ್ನು ರಾಷ್ಟ್ರೀಯ ಹೋರಾಟದ ಉದಾತ್ತ ಮೌಲ್ಯಗಳಿಂದ ಸ್ಫೂರ್ತಿಗೊಂಡಿದ್ದ ರಾಷ್ಟ್ರ, ಪಶ್ಚಾತ್ತಾಪಪೂರ್ವಕವಾಗಿ ಮತ್ತು ಸೋದರತೆಯ ಪ್ರತೀಕವಾಗಿ ಒಪ್ಪಿಕೊಂಡಿತೆಂದೇ ಹೇಳಬೇಕು.

ಈಗ ಈ ಮೀಸಲಾತಿ ಕೆಲ ಸಮುದಾಯಗಳಿಗೆ ಜಾರಿಗೆ ಬಂದು ೬೦ ವರ್ಷಗಳಾಗಿದ್ದರೆ, ಇನ್ನು ಕೆಲವು ಸಮುದಾಯಗಳಿಗೆ ನಮ್ಮ ರಾಜ್ಯದಲ್ಲಿ ಜಾರಿಗೆ ಬಂದು ನಲವತ್ತು ವರ್ಷಗಳಾಗಿವೆ. ಇದರ ಪರಿಣಾಮಗಳಾದರೂ ಏನು? ಸಾಮಾಜಿಕ ಅಸಮಾನತೆಯ ಸಮೀಕರಣಗಳು ಈ ಅವಧಿಯಲ್ಲಿ ಬದಲೇ ಆಗಿಲ್ಲವೇ? ಇತ್ತೀಚಿನ ದಿನಗಳಲ್ಲಿ ಏಕೆ ರಾಷ್ಟ್ರದ ಅಲ್ಲಲ್ಲಿ ಆಗಾಗ್ಗೆ ಮೀಸಲಾತಿ ವಿರೋಧಿ ಆಂದೋಲನಗಳು ಚಿಮ್ಮುತ್ತವೆ? ಮೀಸಲಾತಿಯಿಂದ ಹೊರಗಿಟ್ಟ ಸಮುದಾಯಗಳು ಮೀಸಲಾತಿ ವ್ಯಾಪ್ತಿಗೆ ಸೇರಲು ಹೋರಾಟ ನಡೆಸಲಾರಂಭಿಸಿವೆ ಏಕೆ? ಯಾರಾದರೂ ಮೀಸಲಾತಿ ನೀತಿಯ ಪರಿಷ್ಕರಣೆಯ(ರದ್ದತಿಯ ಅಲ್ಲ) ಮಾತಾಡಿದ ಕೂಡಲೇ ಮೀಸಲಾತಿ ಫಲಾನುಭವಿ ಸಮುದಾಯಗಳು ಏಕೆ ಹಾಹಾಕಾರ ಮಾಡುತ್ತವೆ? ಹಾಗಾದರೆ ಮೀಸಲಾತಿ ಒಂದು ಶಾಶ್ವತ ವ್ಯವಸ್ಥೆಯಾಗಬೇಕೆ? ಅಂದರೆ, ಸಾಮಾಜಿಕ ಅಸಮಾನತೆ ಪರಿಹಾರವಾಗದ ಸಮಸ್ಯೆಯೆ? ಅಂದರೆ ಮೀಸಲಾತಿ ತನ್ನ ಉದ್ದೇಶದಲ್ಲಿ ವಿಫಲವಾಗಿದೆಯೇ? ಆ ಕಾರಣದಿಂದಲಾದರೂ ಅದರ ಪುನರಾವಲೋಕನ ಅಗತ್ಯವಿದೆಯಲ್ಲವೆ? ಉದಾಹರಣೆಗೆ ಮೀಸಲಾತಿಯ ತಾತ್ವಿಕತೆಗೆ ಕಾರಣವಾದ ಜಾತಿ ವ್ಯವಸ್ಥೆಯನ್ನು ನಾವು ಅರ್ಥ ಮಾಡಿಕೊಂಡ ರೀತಿಯೇ ದೋಷಪೂರ್ಣವಾಗಿದೆಯೇ? ಮೀಸಲಾತಿಯ ಮಗ್ಗುಲಲ್ಲೇ ನಡೆದ ನಮ್ಮ ಜಾತಿ ವಿರೋಧಿ ಆಂದೋಲನಗಳು (ಉದಾ: ದಲಿತ ಚಳುವಳಿ) ದಾರಿ ತಪ್ಪಿದ ಕಾರಣದಿಂದಾಗಿ ಮೀಸಲಾತಿ ಎಂಬುದು ಒಂದು ಪಟ್ಟಭದ್ರ ಹಿತಾಸಕ್ತಿಯಾಗಿ ಪರಿವರ್ತಿತವಾಗಿ ಜಾತಿ ವ್ಯವಸ್ಥೆಯನ್ನು ಇನ್ನೊಂದು ರೂಪದಲ್ಲಿ ಪುನರುತ್ಪಾದಿಸತೊಡಗಿದೆಯೇ? ಹಾಗಿದ್ದಲ್ಲಿ ಮೀಸಲಾತಿಯ ಬದಲಾಗಿ ಸಾಮಾಜಿಕ ಸಮಾನತೆಗಾಗಿ ಬೇರೊಂದು ಸಾಧನವನ್ನು ರೂಪಿಸುವ ಬಗ್ಗೆ ಯೋಚನೆ ಮಾಡುವುದು ಲೇಸಲ್ಲವೆ? ಅಥವಾ ಮೀಸಲಾತಿಯಿಂದ ಸಾಮಾಜಿಕ ಸಮಾನತೆ ಎಷ್ಟು ಸಾಧಿತವಾಗಿದೆಯೋ ಅಷ್ಟರಮಟ್ಟಿಗಾದರೂ ಮೀಸಲಾತಿ ಕಾರ್ಯಕ್ರಮವನ್ನು ಪುರ್ನವಿನ್ಯಾಸಗೊಳಿಸಬೇಕಲ್ಲವೆ? ಜಾತಿ ವ್ಯವಸ್ಥೆ ಮೇಲ್ಜಾತಿಗಳವರಿಂದ ಮಾತ್ರ ಉಳಿದಿದೆಯೇ? ಕೆಳಜಾತಿಗಳಿಗೆ ತಮ್ಮ ಜಾತಿಕಟ್ಟಳೆ-ನಂಬಿಕೆ-ಆಚರಣೆಗಳಲ್ಲಿ ನಂಬಿಕೆಯಿಲ್ಲವೆ? ಸಾಮಾಜಿಕ ನ್ಯಾಯ ಕೇವಲ ಮೀಸಲಾತಿಯ ಜಾತಿಗಳಿಗೆ ಮಾತ್ರ ಸಂಬಂಧಿಸಿದ ವಿಷಯವೇ? ಈಗ ಜಾರಿಯಲ್ಲಿರುವ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳ ಪರಿಣಾಮ ಇಡೀ ಸಮಾಜದ ಮೇಲೆ ಯಾವ ರೀತಿ ಆಗಿದೆ ಎಂಬುದರ ಬಗ್ಗೆ ಯಾರೇ ಆದರೂ ಯೋಚಿಸಬಹುದಲ್ಲವೆ? ಒಬ್ಬ ಅಂತಾರಾಷ್ಟ್ರೀಯ ಮಟ್ಟದ ಭಾರತೀಯ ಸಮಾಜಶಾಸ್ತ್ರಜ್ಞನಿಗೆ ಒಂದು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅಂಬೇಡ್ಕರ್‌ರನ್ನು ಮೂರ್ಖನೆಂದೂ, ಮೀಸಲಾತಿ ಪಡೆದು ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾದವರನ್ನು ಕತ್ತೆಗಳು ಎಂದು ಕರೆಯುವಷ್ಟು ಧೈರ್ಯ ಇಂದು ಏಕೆ ಬಂದಿದೆ? ಕೇವಲ ಈತನನ್ನು ಶಪಿಸುವ ಮೂಲಕ ಈ ಪ್ರಶ್ನೆಗೆ ಉತ್ತರ ದೊರೆಯಲಾರದಲ್ಲವೆ?

ದಲಿತ ಚಳುವಳಿಯ ಮುಖ್ಯ ಚಿಂತಕರೂ, ನಾಯಕರೂ ಆಗಿರುವ ದೇವನೂರ ಮಹಾದೇವ ಕೆಲ ಕಾಲದ ಹಿಂದೆ ಜಾತಿ ವಿರೋಧಿ ಹೋರಾಟದ ಬಗ್ಗೆ ಒಂದು ಹಿನ್ನೋಟ ಬೀರುತ್ತಾ, ಈ ಹೋರಾಟ ಜಾತಿಯನ್ನು ಗಟ್ಟಿಗೊಳಿಸಿರಬಹುದೇ ಎಂಬ ಅನುಮಾನದಲ್ಲಿ ಹೇಳಿದ ಈ ಮಾತುಗಳು ಇಲ್ಲಿ ನೆನಪಾಗುತ್ತಿವೆ. ಜಾತಿ ವಿರುದ್ಧದ ಕಾರ್ಯಕ್ರಮಗಳಲ್ಲಿ ಒಂದು ಕಾಲನ್ನು ಜಾತಿಯ ಒಳಗೂ, ಇನ್ನೊಂದು ಕಾಲನ್ನು ಜಾತಿಯ ಹೊರಗೂ ಇಡುವ ಎಚ್ಚರ ನಮಗಿರಬೇಕಿತ್ತು ಎಂದವರು ಹೇಳಿದ್ದರು. ಇದನ್ನು ನಮ್ಮ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳಲ್ಲಿ, ಮುಖ್ಯವಾಗಿ ಮೀಸಲಾತಿ ಜಾರಿಯಲ್ಲಿ ಅಳವಡಿಸಿಕೊಳ್ಳುವ ಕಾರ್ಯವಿಧಾನವಾವುದು? ಈ ಬಗ್ಗೆ ವ್ಯಾಪಕ ಮತ್ತು ಮುಕ್ತ ಚರ್ಚೆ ನಡೆಯಬೇಕಿದೆ.

ಇಂದು ನಮ್ಮ ಮುಂದಿರುವ ಈ ಎಲ್ಲ ಪ್ರಶ್ನೆಗಳ ಹಿನ್ನೆಲೆಯಲ್ಲಿ ನಾವು ಈ ಸಮಕಾಲೀನ ಪುಟಗಳನ್ನು ಆಯೋಜಿಸಿದ್ದೇವೆ. ಸಾಮಾಜಿಕ ನ್ಯಾಯ, ನಿರ್ದಿಷ್ಟವಾಗಿ ಮೀಸಲಾತಿ ಕುರಿತಂತೆ ನಮ್ಮ ಜನಪ್ರಿಯ ಮತಬ್ಯಾಂಕ್ ರಾಜಕಾರಣ ಮತ್ತು ಜಾತಿಲೋಭದ ಜಾತೀಯವಾದಿ ಗುಂಪುಗಳು ಕಟ್ಟಿರುವ ಭಾವನಾತ್ಮಕ ವಾತಾವರಣದಲ್ಲಿ ಜಾತಿ ವ್ಯವಸ್ಥೆ ಮತ್ತು ಅದರ ಪರಿಣಾಮವಾದ ಸಾಮಾಜಿಕ ನ್ಯಾಯ ಕುರಿತಂತೆ ಒಂದು ಶಾಸ್ತ್ರೀಯ, ವಸ್ತುನಿಷ್ಠ ಚರ್ಚೆ ಸ್ವಲ್ಪ ದುಸ್ಸಾಹಸದ ಕೆಲಸವೇ. ಆದರೂ ಅದನ್ನು ಕರ್ತವ್ಯವೆಂಬಂತೆ ಪತ್ರಿಕೆ ಮಾಡಿದೆ. ಇಲ್ಲಿನ ಎರಡು ಮುಖ್ಯ ಲೇಖನಗಳನ್ನೂ, ನಂತರದ ಹಲವರ ಅಭಿಪ್ರಾಯ ಮಾಲೆಯನ್ನೂ ಗಮನಿಸಿ ಓದುಗರು ಪ್ರತಿಕ್ರಿಯಿಸಬಹುದಾಗಿದೆ-ಸಂ.

## ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ

-ಡಿ.ಎಸ್.ನಾಗಭೂಷಣ

ಭಾರತದ ಜಾತಿ ವ್ಯವಸ್ಥೆ ಕುರಿತಂತೆ ನಿರಂತರವಾಗಿ ಅಧ್ಯಯನ-ಸಂಶೋಧನೆಗಳು ನಡೆದೇ ಇವೆ. ಜಾತಿ ವ್ಯವಸ್ಥೆಗೆ ರಾಮಾಯಣ-ಮಹಾಭಾರತಗಳಷ್ಟು ಪ್ರಾಚೀನ ಕಾಲದಿಂದಲೂ ಒಂದಿಲ್ಲ ಒಂದು ರೀತಿಯ ಪ್ರತಿರೋಧ ವ್ಯಕ್ತವಾಗುತ್ತಾ ಬಂದಿದೆ. ಇದು, ಜಾತಿವ್ಯವಸ್ಥೆಯು ಇತಿಹಾಸದುದ್ದಕ್ಕೂ ವಿವಾದಾಸ್ಪದವಾಗಿಯೇ ಉಳಿದುಬಂದಿದೆ ಎಂಬುದನ್ನು ವೇದ್ಯವಾಗಿಸುತ್ತದೆ. ಆದರೆ ಅದು ಈವರೆಗೂ ಉಳಿದು ಬಂದಿದೆ ಎಂಬುದು ಇಲ್ಲಿ ಮುಖ್ಯ ಸಂಗತಿ. ಉಳಿದು ಬಂದಿದೆ ಎಂದರೆ, ಗಟ್ಟಿಯಾಗೇ ಉಳಿದು ಬಂದಿದೆ. ಎಷ್ಟು ಗಟ್ಟಿಯಾಗಿ ಎಂದರೆ, ಅದನ್ನು ನಾಶ ಮಾಡಲು, ನಿಷ್ಪ್ರಯೋಜಕಗೊಳಿಸಿ ಅಪ್ರಸ್ತುತಗೊಳಿಸಲು ಬಳಸಲಾಗುತ್ತಿರುವ ಆಧುನಿಕ ಶಸ್ತ್ರಾಸ್ತ್ರಗಳೆಲ್ಲವೂ ವಿಫಲವಾಗುತ್ತಿರುವಂತೆ ತೋರುವಷ್ಟರ ಮಟ್ಟಿಗೆ. ಈ ಸಂಗತಿ ಎತ್ತುವ ಎರಡು ಮುಖ್ಯ ಪ್ರಶ್ನೆಗಳೆಂದರೆ, ಅದು ಅಷ್ಟು ಗಟ್ಟಿಯಾಗಿ ಏಕೆ ಮತ್ತು ಹೇಗೆ ಉಳಿದು ಬಂದಿದೆ ಮತ್ತು ಅದನ್ನು ನಾಶ ಮಾಡುವ ಪ್ರಯತ್ನಗಳಾದರೂ ಏಕೆ ಮತ್ತು ಹೇಗೆ ಎಂಬುದು.

ಜಾತಿ ಮೂಲತಃ ಒಂದು ಸಮಾಜಕ್ಕೆ ಅಗತ್ಯವಾದ ಸೇವಾ ಸೌಲಭ್ಯಗಳ ಹಿನ್ನೆಲೆಯಲ್ಲಿ ಒಬ್ಬ ಮನುಷ್ಯನ ಕೌಶಲ್ಯ-ಸಾಮರ್ಥ್ಯಗಳನ್ನು ಆಧರಿಸಿ ನಿರ್ಣಯವಾಗುತ್ತಿದ್ದ ಸಂಗತಿ; ಇದನ್ನು ವರ್ಣ ಧರ್ಮ ಎಂದು ಕರೆಯಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಅದು ಕ್ರಮೇಣ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವಿಂಗಡಣೆಯಲ್ಲಿ ಪರಿಣಮಿಸಿತು ಎಂದು ನಂಬಲಾಗಿದೆ. ಆದರೆ ಅದು ನಮ್ಮ ಕಣ್ಣಿಗೆ ಕಾಣುವ ಇತಿಹಾಸದುದ್ದಕ್ಕೂ ಹುಟ್ಟಿನ ಆಧಾರದ ಮೇಲೇ-ಬಹುಶಃ ಸಮಾಜದ ಅಗತ್ಯಗಳು ಮತ್ತು ಮನುಷ್ಯನ ಹೊಸ ಕೌಶಲ್ಯ ಮತ್ತು ಸಾಮರ್ಥ್ಯಗಳ ನಡುವಣ ಪರಸ್ಪರ ಪ್ರಭಾವದಿಂದ ಉಂಟಾದ ಸಂಕೀರ್ಣ



ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಯ ಗತಿಗಳಿಗೆ ಹೊಂದಿಕೊಳ್ಳಲಾಗದೆ– ನಿರ್ಣೀತವಾಗುತ್ತಿರುವುದನ್ನೂ, ಅದರ ಸುತ್ತ ದಾಖಲಾಗಿರುವ ಎಲ್ಲ ವಿವಾದಗಳ ಮೂಲ ಇದೇ ಆಗಿರುವುದನ್ನೂ ನಾವು ಕಾಣುತ್ತಿದ್ದೇವೆ. ಆಕಸ್ಮಿಕವಾದ ತಮ್ಮ (ಹುಟ್ಟು)ಜಾತಿ ಕಾರಣದಿಂದಾಗಿಯೇ; ಅಂದರೆ, ವರ್ಣ ಧರ್ಮದ ಅನುಲ್ಲಂಘನೀಯ ನಿಯಮಗಳಿಂದಾಗಿಯೇ ಭಾರತದ ಇತಿಹಾಸದಲ್ಲಿ ಹಲವು ಸಮರ್ಥರು–ಪ್ರತಿಭಾಶಾಲಿಗಳು ಬದುಕಿನಲ್ಲಿ ಪಡೆಯಬೇಕಾದ ಸ್ಥಾನಮಾನಗಳನ್ನು– ಅಂದರೆ ಸಾಮಾಜಿಕ ನ್ಯಾಯವನ್ನು–ಪಡೆಯದೇ ಹೋಗಿದ್ದಾರೆ. ಅಷ್ಟೇ ಅಲ್ಲ, ಹಲವು ಜನಸಮುದಾಯಗಳು ಇತಿಹಾಸದುದ್ದಕ್ಕೂ ಹಲವು ರೀತಿಯ ಅವಕಾಶಗಳಿಂದ ವಂಚಿತರಾಗಿ ಈಗ ಹೊಸ ಕಾಲದ ಪ್ರಯೋಜನ ಮತ್ತು ಸೌಲಭ್ಯಗಳನ್ನು ಪಡೆಯುವ ಸಾಮರ್ಥ್ಯಗಳನ್ನು ರೂಢಿಸಿಕೊಳ್ಳಲಾಗದ ಮತ್ತು ಅದರಿಂದಾಗಿ ಸಮಕಾಲೀನ ಸ್ಪರ್ಧೆಯಲ್ಲಿ ಹಿಂದೆ ಬೀಳುವಂತಾಗುವ ಅಸಹಾಯಕ ಸ್ಥಿತಿ ತಲುಪಿದರು. ಇದರಿಂದ ಅವರನ್ನು ಪಾರು ಮಾಡುವ ಸಾಹಸದ ಭಾಗವಾಗಿಯೇ, ಇದಕ್ಕೆ ಕಾರಣವಾಗಿರುವ ಜಾತಿ ವ್ಯವಸ್ಥೆಯನ್ನು ಅಸಿಂಧುಗೊಳಿಸುವ(ಇದರ ಜ್ವಲಂತ ಉದಾಹರಣೆಯಂತಿದ್ದ ಡಾ. ಅಂಬೇಡ್ಕರ್‌ರ ಭಾಷೆಯಲ್ಲಿ ಹೇಳುವುದಾದರೆ ಜಾತಿ ವಿನಾಶ ಮಾಡುವ) ಪ್ರಯತ್ನ. ಈ ಅರ್ಥದಲ್ಲಿ ಇದು ಇತಿಹಾಸದ ವಕ್ರತೆಗಳ, ಅನ್ಯಾಯ, ಅಮಾನವೀಯತೆಗಳ ವಿರುದ್ಧ ನಡೆದಿರುವ ಹೋರಾಟ.

ಆದರೆ ಈ ಸಾಮಾಜಿಕ ಹೋರಾಟ, ಆರಂಭದಲ್ಲಿ ಸೂಚಿಸಿದ ಹಾಗೆ ವಿಫಲವಾಗುತ್ತಿರುವ ಸೂಚನೆಗಳು ಕಾಣಬರುತ್ತಿವೆ. ಯಾವ ವಂಚಿತ ಜನಸಮುದಾಯಗಳ ಒಳಿತಿಗಾಗಿ ಈ ಹೋರಾಟವನ್ನು ಆರಂಭಿಸಲಾಯಿತೋ ಆ ಜನ ಸಮುದಾಯಗಳು ಈ ಹೋರಾಟದಿಂದ ಪ್ರಯೋಜನ ಪಡೆದಿರುವ ಸಾಕಷ್ಟು ಸಾಕ್ಷ್ಯಗಳು ನಮ್ಮ ಮುಂದಿದೆ. ಆದರೆ ಈ ಜನ ಸಮುದಾಯಗಳಿಗೆ ಐತಿಹಾಸಿಕವಾಗಿ ಅನ್ಯಾಯಕ್ಕೆ ಕಾರಣವಾದ ಜಾತಿ ವ್ಯವಸ್ಥೆಯೆಂಬುದು ಅಸಿಂಧುಗೊಳ್ಳುವ/ನಾಶವಾಗುವ ಸೂಚನೆಗಳು ಕಾಣಬರುತ್ತಿವೆಯೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ಹೇಳುವುದು ಇಂದು ಕಷ್ಟವೆನಿಸುತ್ತಿದೆ. ಈ ಪ್ರಶ್ನೆಯನ್ನು ಕೇಳುವುದು ಏಕೆ ಅಗತ್ಯ ಮತ್ತು ಮುಖ್ಯವೆಂದರೆ, ಒಂದು ರೀತಿಯ ಅನ್ಯಾಯದ ಜಾತಿ ವ್ಯವಸ್ಥೆ ಇನ್ನೊಂದು ರೀತಿಯ ಅನ್ಯಾಯದ ಜಾತಿ ವ್ಯವಸ್ಥೆಯಾಗಿ ಮಾರ್ಪಾಡಾಗುತ್ತಿರುವ ಎಲ್ಲ ಅಪಾಯದ ಸೂಚನೆಗಳು ಇಂದು ಕಾಣತೊಡಗಿವೆ. ಇದು, ಜಾತಿ ವ್ಯವಸ್ಥೆ ಎಂಬುದು ಕೇವಲ ಆರ್ಥಿಕ ಮತ್ತು ಸಾಮಾಜಿಕ ಅನ್ಯಾಯ ಅಥವಾ ಉನ್ನತಿಯ ಪ್ರಶ್ನೆಗಳನ್ನು ಮೀರಿದ ಒಂದು ವಿದ್ಯಮಾನವಾಗಿದೆ ಎಂಬ ಅರಿವನ್ನು ಮೂಡಿಸತೊಡಗಿದೆ. ಇದು ಹೊಸ ಅಥವಾ ಆಧುನಿಕ ಎಂದು ಕರೆಯಲಾಗುವ ಕಾಲದ ಮನಸ್ಸು ಜಾತಿ ವಿರೋಧಿ ಹೋರಾಟಕ್ಕೆ ಆಧಾರವಾಗಿ, ಸ್ಫೂರ್ತಿಯಾಗಿ ಜಾತಿ ವ್ಯವಸ್ಥೆ ಕುರಿತು ಕಟ್ಟಿಕೊಂಡ ಸಂಕಥನದತ್ತ ಮರುನೋಟ ಹಾಯಿಸುವಂತೆ ನಮ್ಮನ್ನು ಪ್ರೇರೇಪಿಸುತ್ತಿದೆ. ಸಾಮಾಜಿಕ ನ್ಯಾಯ ಹೋರಾಟದಿಂದ ಪ್ರಯೋಜನ ಪಡೆದ ಜನವರ್ಗಗಳಿರುವಂತೆಯೇ ಇನ್ನೂ ಪ್ರಯೋಜನ ಪಡೆಯದ ಜನವರ್ಗಗಳು ಸಾಕಷ್ಟಿವೆ; ಹೀಗಿರುವಾಗ ಈ ಮಧ್ಯಂತರದಲ್ಲೇ ಜಾತಿ ವ್ಯವಸ್ಥೆ ನಾಶವಾಗುತ್ತಿಲ್ಲ ಅಥವಾ ಗಟ್ಟಿಕೊಳ್ಳುತ್ತಿದೆ ಎಂದು ವಾದಿಸುವುದು ತಪ್ಪಾಗುತ್ತದೆ ಎಂದೂ ಕೆಲವರು ಹೇಳಬಹುದು. ಆದರೆ ಈ ಹೋರಾಟದ ಈವರೆಗಿನ ರೂಪಗಳು ಮತ್ತು ಅದನ್ನು ಮುಂದುವರೆಸಲು ಮುಂದಿಡಲಾಗುತ್ತಿರುವ ತರ್ಕವನ್ನು ಗಮನಿಸಿದರೆ, ಈ ಸಾಮಾಜಿಕ ನ್ಯಾಯ ಹೋರಾಟ ಮುಂದಿನ ದಾರಿ ಮತ್ತು ಪರಿಣಾಮ ಏನೆಂಬುದು ನಿಚ್ಚಳವಾಗುತ್ತದೆ. ಹಾಗಾಗಿ ಸಾಮಾಜಿಕ ನ್ಯಾಯ ಹೋರಾಟವು ಜಾತಿ ವ್ಯವಸ್ಥೆಯನ್ನು ಅದರ ಯಾವ ಸ್ವರೂಪದಲ್ಲಿ ಗ್ರಹಿಸಿದೆ ಮತ್ತು ಜಾತಿ ಅನ್ಯಾಯಗಳನ್ನು ಹೇಗೆ ಪರಿಕಲ್ಪಿಸಿಕೊಂಡಿದೆ ಎಂಬುದನ್ನು ಅರಿಯುವುದು ಮುಖ್ಯವಾಗುತ್ತದೆ.

–೨–

ಭಾರತದ ಆಧುನಿಕ ಕಾಲದ ಆರಂಭವೆಂದರೆ ವಸಾಹತುಶಾಹಿಯ ಕಾಲ. ಅಲ್ಲಿಯವರೆಗೆ ಭಾರತೀಯ ಸಮಾಜವನ್ನು ಆಳುತ್ತಿದ್ದ ಮಾನಸಿಕತೆ ಬದಲಾದ ಕಾಲವದು. ಭಾರತ ಜಗತ್ತಿಗೆ ವಿಶೇಷವಾಗಿ ಪಶ್ಚಿಮದ 'ಜ್ಞಾನಯುಗ'ದ ಉದಾರವಾದಿ ಮೌಲ್ಯಗಳಿಗೆ ತೆರೆದುಕೊಂಡು ಜಾತಿ ವ್ಯವಸ್ಥೆಯನ್ನು ಪ್ರಶ್ನಿಸುವ ಛಾತಿ ಪಡೆದುಕೊಂಡ ಕಾಲವದು. ಆಗ ರೂಪುಗೊಳ್ಳುತ್ತಿದ್ದ 'ಸಾಮಾಜಿಕ ಅಧ್ಯಯನ' ಎಂಬ ಹೊಸ ಜ್ಞಾನಶಾಖೆಯಡಿಯಲ್ಲಿ ಜಾತಿ ವ್ಯವಸ್ಥೆಯನ್ನು ಅದರ ಉಗಮ, ವಿಕಾಸ ಮತ್ತು ಪರಿಣಾಮಗಳೊಂದಿಗೆ ವಿಶ್ಲೇಷಿಸುವ ಪ್ರಯತ್ನ ಆರಂಭವಾದ ಕಾಲವದು. ಇಂತಹ ಅಧ್ಯಯನಗಳು ವಸ್ತುನಿಷ್ಠವಾಗಿ ಆರಂಭವಾದುವಾದರೂ ಇವುಗಳಲ್ಲಿ ಹಲವು ಸಹಜವಾಗಿಯೇ ವಸಾಹತುಶಾಹಿ ರಾಜಕಾರಣದ ಭಾಗವಾಗಿಯೂ ನಡೆಯಲಾರಂಭಿಸಿದ್ದೂ ನಿಜ. ಅಂತಹವು ಜಾತಿ ವ್ಯವಸ್ಥೆಗೂ ಹಿಂದೂ ಧರ್ಮಕ್ಕೂ ತಳಕು ಹಾಕಿ, ಅವನ್ನು ಕ್ರಿಶ್ಚಿಯನ್ ಮತ ಪ್ರಸಾರಕ್ಕೆ ಬಳಸಿಕೊಳ್ಳುವ ಪ್ರಯತ್ನಗಳೂ ನಡೆದವು. ಜಾತಿ ವ್ಯವಸ್ಥೆ ಒಂದು ಶ್ರೇಣೀಕೃತ ವ್ಯವಸ್ಥೆಯಷ್ಟೇ ಅಲ್ಲ, ಮೇಲಿಂದ ಕೆಳಗಿನವರೆಗೆ ಈ ಶ್ರೇಣಿ ರೂಪುಗೊಂಡಿರುವುದೇ ಮೇಲಿನ ಶ್ರೇಣಿ ಕೆಳಗಿನ ಶ್ರೇಣಿಯನ್ನು ತುಳಿಯುವ/ ಶೋಷಿಸುವ ಮೂಲಕ ಎಂದು ವಿಶ್ಲೇಷಿಸಲಾಯಿತು. ಇದಕ್ಕಾಗಿ ಮನುಧರ್ಮ ಶಾಸ್ತ್ರ ಸೇರಿದಂತೆ ಹಲವು ಸಂಹಿತೆಗಳನ್ನೂ ಹಲವು ಐತಿಹ್ಯ ಮತ್ತು ಆಖ್ಯಾಯಿಕೆಗಳನ್ನು ಉಲ್ಲೇಖಿಸಲಾಯಿತು.

ಜಾತಿ ವ್ಯವಸ್ಥೆ ಕುರಿತ ಈವರೆಗಿನ ಸಂಕಥನ ರೂಪುಗೊಂಡಿರುವುದು ಆಧುನಿಕ ಪರಿಪ್ರೇಕ್ಷದಲ್ಲೇ ಅಥವಾ ಈ ಚಿಂತನಾ ಎರಕದಲ್ಲೇ. ಇದರ ಒಟ್ಟು ಕಾರ್ಯಶೀಲ ರೂಪ ಎಂದರೆ, ಜಾತಿ ವ್ಯವಸ್ಥೆ ಎಂಬುದು ಮೂಲತಃ ವಿಭಜನಶೀಲ, ಶೋಷಣಾತ್ಮಕ ವ್ಯವಸ್ಥೆಯಾಗಿದ್ದು ಇದನ್ನು ನಾಶ ಮಾಡುವುದು ಅಥವಾ ಅಮಾನ್ಯ ಮಾಡುವುದು ಪ್ರಗತಿಪರ ಕೆಲಸವಾಗಿದೆ. ಮತ್ತು ಅದಕ್ಕಾಗಿ ಜಾತಿ ಶ್ರೇಣಿಯನ್ನು ಮೇಲ್ಜಾತಿಗಳು(ಶೋಷಕರು) ಮತ್ತು ಕೆಳಜಾತಿಗಳು(ಶೋಷಿತರು) ಎಂದು ವಿಂಗಡಿಸಿ ಕೆಳಜಾತಿಗಳಿಗೆ ಸಾರ್ವತ್ರಿಕ ಜೀವನದಲ್ಲಿ ವಿಶೇಷ ಪ್ರಾಶಸ್ತ್ಯದ ಆಧಾರದ ಮೇಲೆ ಅವಕಾಶಗಳನ್ನು ಮೀಸಲಿಡುವುದು; ಅಂದರೆ, ಜಾತಿ ವ್ಯವಸ್ಥೆಯನ್ನು ಕಟ್ಟಿರುವವೆಂದು ಹೇಳಲಾಗುವ ನಿಯಮಗಳನ್ನು ಉಲ್ಲಂಘಿಸುವುದು. ಇದಕ್ಕೆ ಬೆಂಬಲವಾದ ಇತರ ಕ್ರಮಗಳೆಂದರೆ, ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮಗಳು, ಸಹಭೋಜನ, ಅಂತರ್ಜಾತೀಯ ವಿವಾಹ, ಭೂ ಸುಧಾರಣೆ ಇತ್ಯಾದಿ. ಇದನ್ನು ಇಂದು ಸಮಾನತೆಯ ರಾಜಕಾರಣ ಅಥವಾ ಸಾಮಾಜಿಕ ನ್ಯಾಯ ರಾಜಕಾರಣ ಎಂದು ಕರೆಯಲಾಗಿದೆ.

ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಸಂಕಥನದ ಬಗ್ಗೆ ಸಂಶೋಧನೆ– ಅಧ್ಯಯನ ಕ್ಷೇತ್ರಗಳಿಂದಲೇ ಹಲವು ಭಿನ್ನ ಧ್ವನಿಗಳು ಕೇಳಿ ಬರಲಾರಂಭಿಸಿವೆ. ಇವುಗಳಿಗೆ ಕಾರಣ ಸಮಾನತೆಯ ರಾಜಕಾರಣ ಅಥವಾ ಸಾಮಾಜಿಕ ನ್ಯಾಯ ಹೋರಾಟದ ಕೆಲವು ಪ್ರತಿಕೂಲ ಅಥವಾ ವಕ್ರವೆನ್ನಬಹುದಾದ ಸಾಮಾಜಿಕ ಪರಿಣಾಮಗಳು ಎಂದರೆ ತಪ್ಪಾಗಲಾರದು. ಎದ್ದು ಕಾಣತೊಡಗಿರುವ ಇಂತಹ ದೊಡ್ಡ ಪರಿಣಾಮವೆಂದರೆ, ಭಾರತೀಯ ಸಮಾಜ ಹಲವು ನೆಲೆಗಳಲ್ಲಿ ಹೆಚ್ಚೆಚ್ಚು ಜಾತಿ ಬಂಧಿತವಾಗುತ್ತಿರುವ ಲಕ್ಷಣಗಳು ಗೋಚರವಾಗತೊಡಗಿರುವುದು. ಇದರ ಸಾಮಾಜಿಕ–ರಾಜಕೀಯ ಪರಿಣಾಮಗಳು ಒಟ್ಟು ಸಮಾಜದ ದೃಷ್ಟಿಯಿಂದ ವಿಘಟನಕಾರಿ ಮತ್ತು ವಿಚ್ಛಿದ್ರಕಾರಿಯಾಗುತ್ತಿರುವುದು. ಇನ್ನೂ ಅನಾಹುತಕಾರಿ ಅಂಶವೆಂದರೆ, ಭಾರತದಲ್ಲಿ ಸಾಮಾಜಿಕ ನ್ಯಾಯ ಕುರಿತಂತೆ ಒಂದು ಪರಿಣಾಮಕಾರಿ ತಾತ್ವಿಕತೆ ಕಟ್ಟಿಕೊಟ್ಟ ಡಾ. ಅಂಬೇಡ್ಕರ್ ಮತ್ತು ಆ ತಾತ್ವಿಕತೆಯ ಪ್ರಾಣರೂಪಿ ಕಾರ್ಯಕ್ರಮವಾದ 'ಜಾತಿ ವಿನಾಶ' (Annihilation of caste) ಎಂಬುದೇ ಸಾಮಾಜಿಕ ನ್ಯಾಯ ರಾಜಕಾರಣದ ನಕ್ಷೆಯಿಂದಲೇ ಹೊರದೂಡಲ್ಪಡುತ್ತಿರುವುದು.

ಹಿಂದಿನ ಜಾತಿ 'ವ್ಯವಸ್ಥೆ'ಯಲ್ಲಿ–ಈಗ ಆಧುನಿಕ ಪರಿಪ್ರೇಕ್ಷ್ಯದಲ್ಲಿ ಅದು ಎಷ್ಟೇ ಶ್ರೇಣೀಕೃತ ಮತ್ತು ಶೋಷಣಾತ್ಮಕವಾಗಿ ಕಾಣತೊಡಗಿದ್ದರೂ– ಒಂದು



ಸಾಮಾಜಿಕ ಸ್ಥಿರತೆಯ ಅಂತರ್ಗತ ಆಶಯ-ಆದೇಶವಿತ್ತು. ಒಂದೊಂದು ಜಾತಿಯೂ-ಸಮಾಜದ ಒಂದೊಂದು ಸಾಮಾಜಿಕ ಜಾಗವನ್ನು ಆಕ್ರಮಿಸಿಕೊಂಡು ತನ್ನದೇ ಕೌಶಲ್ಯಗಳ 'ಹೆಮ್ಮೆ'ಯಲ್ಲಿ ತಮ್ಮವೇ ಪೌರಾಣಿಕ ನಂಬಿಕೆಗಳನ್ನು ರೂಢಿಸಿಕೊಂಡು ಒಂದರ ಜಾಗವನ್ನು ಇನ್ನೊಂದು ದುರಾಕ್ರಮಿಸಿಕೊಳ್ಳದಂತೆ 'ವ್ಯವಸ್ಥೆ'ಯ ಸಮತೋಲನ ತಪ್ಪಿಸದಂತೆ ತಮ್ಮ 'ತೃಪ್ತಿ'ಯಲ್ಲಿ ತಾವಿದ್ದವು. (ಜಾತಿ ಅಸಮಾನತೆಯ ಜಾಗೃತಿ ಉಂಟಾಗಿರುವ ಇಂದು ಕೂಡ ಅತಿಕೆಳ ಜಾತಿಗಳೂ ಸೇರಿದಂತೆ ಎಲ್ಲ ಜಾತಿಗಳ ಶೇ ೯೯ರಷ್ಟು ಜನ ಜಾತಿ ಸಂಕರವನ್ನು ಒಪ್ಪದೆ ತಮ್ಮ ಮನೆಯ ಮದುವೆಗಳನ್ನು ತಮ್ಮ ಜಾತಿ-ಉಪಜಾತಿಗಳೊಳಗೇ ಮಾಡಿಕೊಳ್ಳಬಯಸುವುದನ್ನು ಇಲ್ಲಿ ಗಮನಿಸಬೇಕು) ಹೀಗೆಂದ ಮಾತ್ರಕ್ಕೆ ಜಾತಿ ವ್ಯವಸ್ಥೆಯ ಚರಿತ್ರೆಯಲ್ಲಿ ಅಸಮಧಾನಗಳು, ಸ್ಪರ್ಧೆಗಳು, ಬಂಡಾಯಗಳು ಇರಲಿಲ್ಲವೆಂದರ್ಥವಲ್ಲ. ಜಾತಿಗಳು ಒಂದು ಶ್ರೇಣಿಯಿಂದ ಇನ್ನೊಂದು ಶ್ರೇಣಿಗೆ ಚಲಿಸಿವೆ. (ಉದಾ: ಶೂದ್ರ ಕ್ಷತ್ರಿಯನಾಗುವುದು, ಕ್ಷತ್ರಿಯ ಬ್ರಾಹ್ಮಣನಾಗುವುದು ಹಾಗೂ ಇವುಗಳ ತಿರುಗು ಮುರುಗು) ಆದರೆ ಕಾಲಾಂತರದಲ್ಲಿ ಈ ಒಳಚಲನೆಗಳನ್ನು ಜಾತಿ ವ್ಯವಸ್ಥೆ ಜೀರ್ಣಿಸಿಕೊಂಡು ಅದರ ಮೂಲ ಶ್ರೇಣಿ ವ್ಯವಸ್ಥೆ ಹಾಗೇ ಸಂರಕ್ಷಿತವಾಗುತ್ತಿತ್ತು.* ಆದರೀಗ ತೃಪ್ತಿ ಎಂಬುದು ಚಾರಿತ್ರಿಕ ಅನ್ಯಾಯಗಳನ್ನು ಮರೆಸಿದ ಪ್ರಜ್ಞೆಯ ಮಂಪರು ಮಾತ್ರವೆಂದು ಹೇಳುವ ಆಧುನಿಕ ಚಾರಿತ್ರಿಕವಾದಗಳು ಜನಸಮುದಾಯಗಳನ್ನು ಆ ಮಂಪರಿನಿಂದ ಎಬ್ಬಿಸಿ ಮಾನವ ಹಕ್ಕುಗಳ ಆಗ್ರಹದೊಂದಿಗೆ ಪ್ರಗತಿ ಚಕ್ರವನ್ನು ಉರುಳಿಸುತ್ತಾ ಬಂದಿವೆ. ಅತೃಪ್ತಿಯನ್ನೇ ತನ್ನ ಪ್ರೇರಕ ಶಕ್ತಿಯನ್ನಾಗಿ ಮಾಡಿಕೊಂಡಿರುವ ಆಧುನಿಕ ಕಾಲದ ಬೀಜಶಕ್ತಿಯಾಗಿರುವ ಈ ಪ್ರಗತಿಪರತೆಯ ಪರಿಣಾಮವಾಗಿ ಇಂದಿನ ಜಾತಿ 'ವ್ಯವಸ್ಥೆ'ಯು ಸಾಮಾಜಿಕ ನ್ಯಾಯದ ಅನೇಕ ಉಪಕ್ರಮಗಳ ಹೊರತಾಗಿಯೂ ತನ್ನ ಮೂಲ ರಾಚನಿಕತೆಯನ್ನು ಕಳೆದುಕೊಳ್ಳಲು ನಿರಾಕರಿಸುತ್ತಿದೆ. ಅಂದರೆ, ಅದು ತೆರೆದುಕೊಂಡ ವರ್ಗ ವ್ಯವಸ್ಥೆಯಾಗಲು(ಅಂದರೆ ಜಾತಿರಹಿತವಾಗಲು; ಅಂದರೆ ಜಾತಿ 'ವ್ಯವಸ್ಥೆ'ಯ ಅದರ ವಿಭಜನಶೀಲತೆ ಮತ್ತು ಸಂಕುಚಿತ ಒಗ್ಗಟ್ಟಿನ ರಾಜಕಾರಣದಿಂದ ಹೊರಗೆ ಬರಲು) ನಿರಾಕರಿಸುತ್ತಿದೆ. ಬದಲಿಗೆ, ಪರಸ್ಪರ ಅನುಮಾನ ಮತ್ತು ಸ್ಪರ್ಧೆಗಳ ಮೂಲಕ ಹೆಚ್ಚೆಚ್ಚು ಬಿಗುವುಗಳೊಂದಿಗೆ ಹೆಚ್ಚೆಚ್ಚು ಪ್ರತ್ಯೇಕಗೊಳ್ಳುತ್ತಿರುವ ಜನ ಸಮುದಾಯಗಳಿಂದ ಒಡಗೂಡಿ, ಸಾಮಾಜಿಕ ಅಸ್ಥಿರತೆ, ಅನೈಕ್ಯತೆ, ಆತಂಕ ಮತ್ತು ಅಶಾಂತಿ ಹುಟ್ಟಿಸುವಂತಹ ಮುಚ್ಚಿಕೊಂಡ ಸಮಾಜವನ್ನು ನಿರ್ಮಿಸತೊಡಗಿದೆ: ಜಾತಿ ಅಪ್ರಸ್ತುತಗೊಳ್ಳುವ ಬದಲು ಹೊಸ ಆರ್ಥಿಕ-ಸಾಮಾಜಿಕ-ರಾಜಕೀಯ ಸಬಲೀಕರಣದ ಆಯುಧಗಳೊಂದಿಗೆ ಸಜ್ಜಾಗಿ ಹೆಚ್ಚು ಪ್ರಸ್ತುತ, ಅನಿವಾರ್ಯ ಮತ್ತು 'ಪ್ರಯೋಜನಕಾರಿ' ಎನ್ನಿಸತೊಡಗಿದೆ!

ಎಲ್ಲಕ್ಕಿಂತ ಮುಖ್ಯವಾಗಿ ಜಾತಿಯ ಈ 'ಪ್ರಯೋಜನಕಾರಿತ್ವ' ಜಾತಿ ವಿರೋಧಿ ಹೋರಾಟದ ಹಿಂದಿನ ರಾಜಕೀಯ ದರ್ಶನವನ್ನೇ ಅಸಂಗತ ಮಾಡಿಬಿಟ್ಟಿದೆ. ಹೊಸ ಜಾತಿ ಸಂಘಟನೆಗಳ, ಹೊಸ ಜಾತಿ ಗುರುತು ಮತ್ತು ಪೌರಾಣಿಕ ಶ್ರೇಷ್ಠತೆಗಳ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮತ್ತು ಅಪಾಯಕಾರಿಯಾಗಿ ಜಾತಿ ಆಧಾರಿತ ಹೊಸ ರಾಜಕೀಯ ಸಂಯೋಜನೆ ಮತ್ತು ಪಕ್ಷಗಳ ಉದಯ ಸಮಾನತೆಯ ಮತ್ತು ಸಾಮಾಜಿಕ ನ್ಯಾಯ ರಾಜಕಾರಣದ ಉದ್ದೇಶಗಳನ್ನೇ ಭಂಗಗೊಳಿಸಿದೆ. ಸಬಲೀಕರಣಗೊಂಡ ಜಾತಿ ಸಮುದಾಯಗಳು ವರ್ಗಗಳಾಗಿ ವಿಸರ್ಜನೆಗೊಳ್ಳದೆ ತಮ್ಮ ಸಾಂಸ್ಕೃತಿಕ ಅಸ್ಮಿತೆಗಳನ್ನು ಸಬಲ ಜಾತಿಗಳಾಗಿಯೇ ಇನ್ನಷ್ಟು ಹರಳುಗಟ್ಟಿಕೊಳ್ಳುವ ಪ್ರವೃತ್ತಿಗಳನ್ನು ತೋರತೊಡಗಿವೆ. ಕೂಸೇ ತಾಯಿಯನ್ನು ನುಂಗತೊಡಗಿದೆ! ಹೀಗೇಕಾಯಿತು? ನನ್ನ ಪ್ರಕಾರ ಜಾತಿರಹಿತ ಸಮಾಜವೆಂಬ ಆಧುನಿಕ ಸಮಾಜವನ್ನು ನಿರ್ಮಿಸಲು ಅತೃಪ್ತಿಯನ್ನು ಒಂದು ಅಸ್ತ್ರವನ್ನಾಗಿ ಬಳಸುತ್ತಿರುವುದೇ ಇದಕ್ಕೆ ಕಾರಣವಿರಬಹುದು. ಹಾಗಾಗಿ ಜಾತಿರಹಿತ ಸಮಾಜವನ್ನು ಆಧುನಿಕತೆಯ ಒಂದು ಭಾಗವಾಗಿ ಪರಿಕಲ್ಪಿಸಿಕೊಂಡಿದ್ದರಲ್ಲೇ ಮೂಲದೋಷವಿದ್ದಂತೆ ನನಗೆ ಕಾಣುತ್ತದೆ. ಜಾತಿ ವ್ಯವಸ್ಥೆ ಕುರಿತ ಅಂಬೇಡ್ಕರ್ ಮತ್ತು ಗಾಂಧಿಯವರ ಚಿಕಿತ್ಸಕ ನೋಟಗಳಲ್ಲಿನ ಮೂಲಭೂತ ವ್ಯತ್ಯಾಸಗಳೂ ಇಲ್ಲಿ ಕಾಣತೊಡಗುತ್ತವೆ ಎಂದು ನನಗನ್ನಿಸುತ್ತದೆ. ಮುಖ್ಯವಾಗಿ ಆಧುನಿಕತೆ ನಮ್ಮನ್ನು ತಲುಪಿದ ವಸಾಹತು ವಿರೋಧಿ ಮತ್ತು ಕೈಗಾರಿಕೀಕರಣ ಪರವಾದ ಆವೃತ್ತಿಗಳ ರೂಪಗಳಲ್ಲಿ, ಚರಿತ್ರೆಯ ಎಲ್ಲ ಅನ್ಯಾಯಗಳನ್ನೂ ಸರಿಪಡಿಸುವ ಹೊಣೆಯನ್ನು ಸಂಪೂರ್ಣವಾಗಿ ಸರ್ಕಾರದ ಮೇಲಷ್ಟೇ ಹೊರಿಸಿತು. ಆಧುನಿಕ ಆಡಳಿತ ರೂಪ 'ಪ್ರಜಾ-ಪ್ರಭುತ್ವ'ವೆನಿಸಿದ್ದೂ, ಅದರ ಪ್ರಗತಿಪರತೆ ಇಡೀ ಸಮಾಜವನ್ನು ಸಾರಾಸಗಟಾಗಿ ಶೋಷಕ ಮತ್ತು ಶೋಷಿತವೆಂದು ವಿಂಗಡಿಸಲು ಅನುವು ಮಾಡಿಕೊಟ್ಟದ್ದೂ ಮತ್ತು ಈ ಹೊಸ ರಾಜಕಾರಣದಲ್ಲಿ ಮುನ್ನೆಲೆಗೆ ಬಂದ ಹಕ್ಕುಗಳ ಮಹತ್ವ ಕರ್ತವ್ಯಗಳ ಮಹತ್ವವನ್ನು ಹಿನ್ನೆಲೆಗೆ ಸರಿಸಿದ್ದೂ ಇದಕ್ಕೆ ಪೂರಕ ಕಾರಣಗಳಾದವು.

ಅದೇನೇ ಇರಲಿ, ಜಾತಿ ವ್ಯವಸ್ಥೆಯ ನಾಶದ ಉದ್ದೇಶವು ಇಂದು ಜಾತಿ ಸಮಾನತೆಯ ಉದ್ದೇಶವಾಗಿ ಮಾರ್ಪಾಡಾಗಿ, ಇದೇ ಸಮಾನತೆಯ ಹೋರಾಟ ಎನಿಸಿಕೊಳ್ಳುತ್ತಿದೆ. ಈ ಕಾರಣದಿಂದಾಗಿ 'ಸಮಾನತೆ' ಎಂಬ ಪರಿಕಲ್ಪನೆಯ ಅರ್ಥವೇ ಸೀಮಿತಗೊಂಡು ವಿಕಿಪ್ತಗೊಂಡಿದೆ. ಸಮಾನತೆಯ ಪರಿಕಲ್ಪನೆಯೊಳಗೆ ಐಕ್ಯತೆ, ಸಹಬಾಳ್ವೆ, ಶಾಂತಿ-ಸಂತೋಷ, ಸಮತೋಲನ, ಸಾಂಸ್ಕೃತಿಕ ಮಾರ್ದವತೆಗಳ ಅಂಶಗಳೂ ಇವೆ. ಸಮಾನತೆ ಎಂಬುದು ಕೇವಲ ಸಾಮೂಹಿಕ ನೆಲೆಯ ವಿದ್ಯಮಾನವಾಗಿರದೆ; ವೈಯುಕ್ತಿಕ ನೆಲೆಯಲ್ಲೂ ಕ್ರಿಯಾಶೀಲವಾಗಿರುವ ವಿದ್ಯಮಾನವಾಗಿರುತ್ತದೆ. ಸಮಾಜವಾದಿ ಚಿಂತಕ ಡಾ. ರಾಮಮನೋಹರ ಲೋಹಿಯಾ ಹೇಳಿದಂತೆ ಸಮಾನತೆಯ ಮೂಲ ಆಶಯ ಸಾಮೂಹಿಕ ಮತ್ತು ವೈಯುಕ್ತಿಕ-ಈ ಎರಡೂ ನೆಲೆಗಳಲ್ಲಿನ ಸಮತೋಲನವಾಗಿದ್ದು, ಅದು ಬಾಹ್ಯ ಬಂಧುತ್ವ ಮತ್ತು ಆಂತರಿಕ ಪ್ರಶಾಂತಿಯಲ್ಲಿ ಪರಿಣಮಿಸುವಂತಹದ್ದು. ಹಾಗಾಗಿ ಕೆಲವು ಅಥವಾ ಹಾಗೆ ನೋಡಿದರೆ ಎಲ್ಲ ಜನಸಮುದಾಯಗಳ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣವಷ್ಟೇ ಸಾಮಾಜಿಕ 'ನ್ಯಾಯ'ದ, ಸಮಾನತೆಯ ಅಥವಾ ಸಮಾಜವಾದದ ರಾಜಕಾರಣ ಅನ್ನಿಸಿಕೊಳ್ಳುವುದಿಲ್ಲ. ಅಂದರೆ ಸಮಾನತೆ ಎಂಬುದು ಅಂಕಿ-ಅಂಶಗಳಿಂದ ಸಜ್ಜಾದ ವಾದಗಳಿಗೆ ಒದಗುವ ಹೊರನೋಟವಾಗಿರದೆ, ವೈಯಕ್ತಿಕ ಮತ್ತು ಸಾಮುದಾಯಿಕ ಅನುಭವವಾಗಿರುತ್ತದೆ.

---

*** ಈ ಮಾತುಗಳನ್ನು ಅಸ್ಪೃಶ್ಯ ಜಾತಿಗಳಿಗೆ ಸಾರಾ ಸಗಟಾಗಿ ಅನ್ವಯಿಸಿ ಹೇಳಬಹುದೇ ಎಂಬ ಬಗ್ಗೆ ನನಗೇ ಕೆಲವು ಅನುಮಾನಗಳಿವೆ. ಕಾರಣ, ಅಸ್ಪೃಶ್ಯತೆ ಆಚರಣೆಯ ಉಗಮ ಮತ್ತು ಬೆಳವಣಿಗೆಗಳ ಈವರೆಗೆ ಯಾವ ಸಮಾಜಶಾಸ್ತ್ರಜ್ಞರೂ ಅಥವಾ ಚಿಂತಕರೂ-ಅಂಬೇಡ್ಕರ್‌ರ ವಿಶ್ಲೇಷಣೆಗಳಿಂದ ಹಿಡಿದು ದೇವನೂರ ಮಹಾದೇವ ಅವರ ಭಾಷಣಗಳವರೆಗೆ-ವಿಶ್ವಾಸಾರ್ಹ ವಾದ ಮಂಡಿಸಿದಂತಿಲ್ಲ. ಹಾಗೇ, ರಾಜಕೀಯ-ಧಾರ್ಮಿಕ ಪಲ್ಲಟಗಳಿಗನುಗುಣವಾಗಿ ಉಂಟಾಗುತ್ತಿದ್ದ ಸಾಮಾಜಿಕ ಪಲ್ಲಟಗಳ ಪರಿಣಾಮವಾಗಿ, ಅಸ್ಪಶ್ಯ ಜಾತಿಗಳು ಕಾಲಾನುಕಾಲಕ್ಕೆ ಹೊಸದಾಗಿ ಸೃಷ್ಟಿಯಾಗುತ್ತಿದ್ದುವೆ? ಹಾಗಾಗಿ ಅಸ್ಪೃಶ್ಯತಾ ಆಚರಣೆ (ಅದು ಸಮಾಜಕ್ಕೆ ಅಗತ್ಯವಾದ ಶೌಚ ಮತ್ತು ಚರ್ಮ ಸಂಸ್ಕರಣೆಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾಗಿ ಬರುತ್ತಿದ್ದ ಆರೋಗ್ಯ ಮುನ್ನೆಚ್ಚರಿಕೆಗಳ ಪರಿಣಾಮವಾಗಿ ಜಾರಿಗೆ ಬಂತೆ? ಎಂಬ ಚರ್ಚಾಸ್ಪದ ಪ್ರಶ್ನೆಯೂ ಇದೆ.) ಜಾತಿ ವ್ಯವಸ್ಥೆಯ ಸಂಹಿತೆಗೆ ಬಾಹ್ಯವಾದದ್ದು ಆಗುತ್ತದಲ್ಲವೆ ಎಂಬ ಪ್ರಶ್ನೆಗಳೂ ಇವೆ. ಅದೇನೇ ಇರಲಿ, ಭಾರತೀಯ ಸಮಾಜ ತನ್ನ ಸಾಮಾಜಿಕ ಅಗತ್ಯಗಳು ಮತ್ತು ಸ್ಥಿರತೆಗಾಗಿ ಕಂಡುಕೊಂಡ ಜಾತಿ ವ್ಯವಸ್ಥೆಯ ಆತ್ಯಂತಿಕ ತಾರ್ಕಿಕ ರೂಪ ಅಸ್ಪಶ್ಯತೆ ಎನ್ನಬಹುದೇನೋ. ಹಾಗಾಗಿ ಇದನ್ನು ಜಾತಿ ವ್ಯವಸ್ಥೆಯ ಭಾಗವಾಗಿ ನೋಡಲೂ ಸಾಧ್ಯವಿದೆ.**

**ಆದರೆ ಜಾತಿ ವಿರೋಧಿ ಅಥವಾ ಸಾಮಾಜಿಕ ಹೋರಾಟದ ಒಂದು ದೊಡ್ಡ ಪರಿಣಾಮವೆಂದರೆ ಅಸ್ಪೃಶ್ಯ ಜಾತಿಗಳನ್ನು ಕುರಿತ ಒಟ್ಟು ಸಮಾಜದ ನಿಲುವು ಯುಗಪಲ್ಲಟದ್ದೆನಿಸುವಷ್ಟು ನಿರ್ಣಾಯಕವಾಗಿ ಬದಲಾಯಿತು. ಜಾತಿ ವ್ಯವಸ್ಥೆಯಲ್ಲಿದ್ದ 'ತೃಪ್ತಿ' ಅಸ್ಪೃಶ್ಯ ಜಾತಿಗಳ ಮೇಲೆ ವಿಧಿಸಲಾಗಿದ್ದ ಅವಮಾನ ಮತ್ತು ದೌರ್ಜನ್ಯಗಳ ಮೇಲೂ ನಿಂತಿದೆ; ಹಾಗಾಗಿ ಈ ವ್ಯವಸ್ಥೆ ಬುಡದಲ್ಲೇ ಅನ್ಯಾಯದ ಮೇಲೆ ನಿಂತಿದೆ ಎಂಬುದರ ಅರಿವಾಗಿ, ಜಾತಿ ಸಮಾಜದ ಆತ್ಮಸಾಕ್ಷಿಯ ಕಣ್ಣು ದೊಡ್ಡದಾಗಿ ತೆರೆದುಕೊಂಡಿತು. ಹೀಗೆ ತೆರೆದುಕೊಂಡ ಕಣ್ಣು ಇತ್ತೀಚಿನ ವರ್ಷಗಳಲ್ಲಿ ಮತ್ತೆ ಮುಚ್ಚಿಕೊಳ್ಳತೊಡಗಿದ್ದರೆ, ಅದಕ್ಕೆ ಸಾಮಾಜಿಕ ನ್ಯಾಯ ಹೋರಾಟ ಅಥವಾ ಕಾರ್ಯಕ್ರಮಗಳು ಭಾವನೆಯ ನೆಲೆಯಲ್ಲಿಯೂ ಪರಿಣಾಮಗಳ ನೆಲೆಯಲ್ಲೂ ದಾರಿ ತಪ್ಪುತ್ತಿರುವುದೂ ಕಾರಣವಿರಬಹುದು.**

ಸಾಮಾಜಿಕ ನ್ಯಾಯ ರಾಜಕಾರಣ ಹೀಗೆ ತನ್ನ ತಾತ್ವಿಕ ಮತ್ತು ತಾರ್ಕಿಕ ಅಂತ್ಯವನ್ನು ಸಮಾಜವಾದಿ ರಾಜಕಾರಣದಲ್ಲಿ ಕಂಡುಕೊಳ್ಳಲಾಗದಿರಲು ಕಾರಣ, ನಾನು ಮೊದಲಿನಿಂದಲೂ ಹೇಳುತ್ತಾ ಬರುತ್ತಿರುವ ಹಾಗೆ ಸಾಮಾಜಿಕ ನ್ಯಾಯ ಎನ್ನುವುದು ಜಾತಿ ನ್ಯಾಯ ಮಾತ್ರವಾಗಿ ಅವನತಿಗೊಂಡಿರುವುದು. (ಭಾರತೀಯ)ಸಮಾಜ ಎಂದರೆ ಕೇವಲ ಜಾತಿಗಳ ಗುಂಪು ಅಲ್ಲ. ಹಿಂದೆಯೂ ಹಾಗೇನೂ ಇರಲಿಲ್ಲ. ಜಾತಿಯನ್ನು ಒಳಗೊಂಡೂ, ಅದನ್ನು ಮೀರಿದ ಕಾಲಾನುಕಾಲದ ಸಾಮಾಜಿಕ ವಿವೇಕವೊಂದು ಅದನ್ನು ಕಟ್ಟಿದೆ. ಹಾಗಿಲ್ಲದಿದ್ದರೆ, ಅದು ಇತಿಹಾಸದ ಎಲ್ಲ ಹೊಡೆತಗಳನ್ನು ತಡೆದುಕೊಂಡು, ಅವುಗಳೊಂದಿಗೆ ಅನುಸಂಧಾನಿಸುತ್ತಾ ಹೀಗೆ ಉಳಿದು–ನಾಶವಾಗಲು ನಿರಾಕರಿಸುತ್ತಾ–ಬರುತ್ತಿರಲಿಲ್ಲ. ಈ ವಿವೇಕ ಇಂದಿನ ಬದಲಾದ ಪರಿಪ್ರೇಕ್ಷ್ಯದಲ್ಲಿ ಅಪ್ರಸ್ತುತ, ಅಸಂಗತ, ಅನ್ಯಾಯ ಮತ್ತು ಕ್ರೂರ ರೂಪಗಳಲ್ಲಿ ಮಾತ್ರ ನಮಗೆ ಕಾಣುವಂತಾಗಿರಲು, ಪಶ್ಚಿಮದ ಕೈಗಾರಿಕಾ ಕ್ರಾಂತಿಯ ಹೊಸ ರಾಜಕೀಯ ಪರಿಪ್ರೇಕ್ಷ್ಯದಲ್ಲಿ ಮೂಡಿದ ('ಕರ್ತವ್ಯ'ಗಳು ಎಂಬ ಪರಿಕಲ್ಪನೆಯ ನೆನಪೇ ಇಲ್ಲದ) 'ಹಕ್ಕುಗಳು' ಮತ್ತು 'ಶೋಷಣೆ' ಎಂಬ ಪರಿಕಲ್ಪನೆಗಳನ್ನು ಸಾರಾಸಗಟಾಗಿ ಜಾತಿ ವ್ಯವಸ್ಥೆಗೆ ಅನ್ವಯಿಸಿಕೊಂಡು ಅದರ ಆಧಾರದ ಮೇಲೆ ಇಲ್ಲಿ ಕಟ್ಟಿಕೊಂಡ ಸಮಾನತೆಯ ರಾಜಕಾರಣವನ್ನು ಜಾರಿಗೆ ತರುವಲ್ಲಿ ತೋರಿದ ಕುರುಡು ಆಧುನಿಕತೆಯ ಆವೇಶವೇ ಕಾರಣವೆಂದು ತೋರುತ್ತದೆ. ಇದೇ ಈ ಜಾತಿ ವಿರೋಧಿ ರಾಜಕಾರಣ ಮತ್ತು ಹೋರಾಟ ಇಂದು ಜಾತಿ ವ್ಯವಸ್ಥೆಯನ್ನು ಹೊಸ ರೂಪ, ತರ್ಕ ಮತ್ತು ವೀರಾವೇಶಗಳಲ್ಲಿ ಕಾಣಿಸಿಕೊಳ್ಳುತ್ತಿರುವುದಕ್ಕೂ ಕಾರಣವೆಂದು ನಾನು ಭಾವಿಸಿದ್ದೇನೆ.

–೩–

ಈ ಮೊದಲೇ ನಾನು ಪ್ರಸ್ತಾಪಿಸಿದಂತೆ, ಜಾತಿ ವ್ಯವಸ್ಥೆ ಕುರಿತಂತೆ ಇಂದು ಹೊಸ ನೆಲೆಗಳ ಸಂಶೋಧನೆಗಳು, ಅಧ್ಯಯನಗಳು ಆರಂಭವಾಗಿವೆ. ಇವುಗಳಲ್ಲಿ ಕೆಲವು ನವಪುರೋಹಿತಶಾಹಿ ರಾಜಕಾರಣದ ಭಾಗವಾಗಿ ಆಯೋಜಿತವಾಗಿರುವಂತೆ ತೋರುವವಾದರೂ, ಇವುಗಳ ಮಧ್ಯೆ ಇಂದು ಸಾಮಾಜಿಕ ನ್ಯಾಯ ರಾಜಕಾರಣ ಬಂದು ಮುಟ್ಟಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ ನೋಡಿದಾಗ ಎದ್ದು ಕಾಣುವ ಒಂದು ಸಂಗತಿ ಎಂದರೆ ಜಾತಿ ವ್ಯವಸ್ಥೆ ಕುರಿತ ನಮ್ಮ ಗ್ರಹಿಕೆ ಆಧುನಿಕತೆಯ ಅಂತರ್ಗತ ದೋಷಗಳೊಡನೆ ತಳುಕು ಹಾಕಿಕೊಂಡಿದೆ ಎಂಬುದು. ಮುಖ್ಯವಾಗಿ ಆಧುನಿಕತೆಯನ್ನು ನಾವು ಯಾವುದರ ಭಾಗವಾಗಿ ಮುಖಾಮುಖಿಯಾದೆವೋ ಆ ವಸಾಹತುಶಾಹಿ ರಾಜಕಾರಣ ಈ ಗ್ರಹಿಕೆಯ ತರ್ಕದ ಹಿಂದೆ ಇದ್ದಂತೆ ತೋರುತ್ತದೆ. ಜಾತಿ ವ್ಯವಸ್ಥೆ ಹಿಂದೂ ಧರ್ಮದ ಅಧಿಕೃತ ಸಾಮಾಜಿಕ ವ್ಯವಸ್ಥೆ ಎಂದು ಹೇಳುವುದು ಜಾತಿ ವ್ಯವಸ್ಥೆಯನ್ನು ಕುರಿತ ನಮ್ಮ ಗ್ರಹಿಕೆಯನ್ನು ಸೀಮಿತಗೊಳಿಸಿಬಿಟ್ಟಿದೆ. ಹೆಚ್ಚೆಂದರೆ ಇದು ಅರ್ಧ ಸತ್ಯ ಮಾತ್ರ. ಅಥವಾ ಹೊರ(ನೋಟದ) ಸತ್ಯ ಮಾತ್ರ. ಏಕೆಂದರೆ, ಹಿಂದೂ ಎನ್ನುವುದು ಎಂದೂ ಏಕಶಿಲಾಖಂಡ ರೂಪದ ಧರ್ಮವಾಗಿರಲಿಲ್ಲ. ಅದೊಂದು ವೈದಿಕ–ಅವೈದಿಕ ಸಂಪ್ರದಾಯಗಳ ವೈವಿಧ್ಯಮಯ ಆವೃತ್ತಿಗಳ ಕಲಸುಮೇಲೋಗರ. ಅದು ತನ್ನ ಈ ಸ್ವರೂಪದಲ್ಲಿ ಜಾತಿ ವ್ಯವಸ್ಥೆಯನ್ನು – ಈ ಹಿಂದೆಯೇ ಸೂಚಿಸಿದಂತೆ–ಒಂದು ಸಂಹಿತೆಯಾಗಿ ಕಟ್ಟುನಿಟ್ಟಾಗಿ ಒಪ್ಪುವ, ಪರಿವರ್ತಿಸುವ, ಪ್ರಶ್ನಿಸುವ, ನಿರಾಕರಿಸುವ ಪ್ರವೃತ್ತಿಗಳನ್ನು ಕಾಲಾನುಕಾಲಕ್ಕೆ ತೋರುತ್ತಾ ಬಂದಿದೆ. ಜೊತೆಗೆ ಅದು ಭಾರತೀಯ ಸಮಾಜವೆಂಬ ಒಂದು ಅತಿ ಪ್ರಾಚೀನ, ಸ್ಥೂಲ, ವಿಶಾಲ ಮತ್ತು ಸಂಕೀರ್ಣ ಸಮಾಜದಲ್ಲಿ ಎಲ್ಲ ಕಾಲದಲ್ಲೂ ನಾವಿಂದು ಅರ್ಥೈಸಿಕೊಳ್ಳುತ್ತಿರುವ ಸಾರಾ ಸಪಾಟಾದ ರೀತಿಯ ಶ್ರೇಣಿ ಅಥವಾ ಶೋಷಣೆಯ ವ್ಯವಸ್ಥೆಯಾಗಿ, ಅಂದರೆ ಒಂದು ಸುಸ್ಥಿರವಾದ ಯೋಜಿತ ಪಿತೂರಿಯಾಗಿ ಬಾಳುತ್ತಾ ಬಂತು ಎಂದು ಹೇಳುವುದು ಕಷ್ಟ.

ಭಾರತ ಹಾದು ಬಂದ, ಮುಖಾಮುಖಿಯಾದ ಷಡ್ದರ್ಶನಗಳು ಮತ್ತು ಅನ್ಯ ಜನಾಂಗಗಳ, ಅವುಗಳ ಮತಗಳ ಆಗಮನ, ಆಕಮಣ ಮತ್ತು ಅನುಸಂಧಾನಗಳು ರೂಪಿಸಿದ ವಿವಿಧ ಜೀವನ ಕ್ರಮ ಮತ್ತು ಸಾಮಾಜಿಕ ವ್ಯವಸ್ಥೆಗಳಲ್ಲಿ ಜಾತಿ ಸದ್ಯದ ರೂಪದಲ್ಲಿಯೇ ಇದ್ದು, ಅವಿಚಲಿತವಾಗಿ ಉಳಿದು ಬಂದಿದೆ ಎಂದು ಹೇಳಲಾಗದು. ಏಕೆಂದರೆ, ಅನೇಕ ರೀತಿಯ ಅನುಸಂಧಾನಗಳ ಸುಳಿವು–ಸಾಕ್ಷ್ಯಗಳು ನಮಗಿಂದು ಸಿಗುತ್ತವೆ. ಈ ಅನುಸಂಧಾನಗಳ ಇತಿಹಾಸ, ಅನುಭವ ಮತ್ತು ವಿವೇಕವನ್ನು ಸಾಮಾಜಿಕ ನ್ಯಾಯದ ರಾಜಕಾರಣ ಗಮನಿಸುವ, ವಿಶ್ಲೇಷಿಸುವ ಮತ್ತು ನಂತರ ತನ್ನೊಳಕ್ಕೆ ಸಂಶ್ಲೇಷಿಸಿಕೊಳ್ಳುವ ಸೂಕ್ಷ್ಮತೆಯನ್ನಾಗಲೀ, ಅದಕ್ಕೆ ಬೇಕಾದ ವ್ಯವಧಾನವನ್ನಾಗಲೀ ಪ್ರದರ್ಶಿಸಲೇ ಇಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಾಮಾಜಿಕ ನ್ಯಾಯ ರಾಜಕಾರಣವೆಂಬುದು ತನ್ನ ಆರಂಭದ ಹೊರತಾಗಿ ಹಾದಿಯಲ್ಲೆಲ್ಲೂ ಒಂದು ಬೌದ್ಧಿಕ ನೆಲಗಟ್ಟನ್ನು ಕಂಡುಕೊಳ್ಳಲೇ ಇಲ್ಲ. ಹಾಗಾಗಿ ವರ್ಣಾಶ್ರಮ ಧರ್ಮದ ಪರಿಭಾಷೆಯಲ್ಲಿ ನಮ್ಮ ಜಾತಿಗಳನ್ನು ಇಂದು ಬ್ರಾಹ್ಮಣ, ಕ್ಷತ್ರಿಯ, ಶೂದ್ರ (ಮತ್ತು ಪಂಚಮ) ಎಂದು ವಿಂಗಡಿಸುವುದು, ಅದರ ಆಧಾರದ ಮೇಲೆ ನಮ್ಮ ಜಾತಿ ಸಂಕಥನವನ್ನು ಕಟ್ಟಿಕೊಳ್ಳುವುದು ಮತ್ತು ಅದರ ಭಾಗವಾಗಿ ಸಾಮಾಜಿಕ ನ್ಯಾಯ ಹೋರಾಟವನ್ನು ರೂಪಿಸುವುದು ಐತಿಹಾಸಿಕ ದೃಷ್ಟಿಯಿಂದ ಒಂದು ವಾರೆಯಾದ, ಒಂದು ಹೊಸ ಪಟ್ಟಭದ್ರ ಹಿತಾಸಕ್ತಿ ಮೂಲವಾದ(ವಸಾಹತುಶಾಹಿ ಮೂಲವೂ ಸೇರಿದಂತೆ) 'ಯೋಜನೆ'ಯಂತೆ ಇಂದು ಯಾರಿಗಾದರೂ ಕಾಣತೊಡಗಿದ್ದರೆ ಆಶ್ಚರ್ಯವಿಲ್ಲ. (ಈ ವಿಂಗಡಣೆಯಲ್ಲಿ ಜಾತಿ ವ್ಯವಸ್ಥೆಗೆ ಹೊರತಾದವರೆಂದು ಹೇಳಲಾಗುವ 'ಪಂಚಮ'ರನ್ನೂ ಸೇರಿಸಿರುವುದು, ಅವರು ಇಂದು ಅನುಭವಿಸುತ್ತಿರುವ ಅವಮಾನ–ದೌರ್ಜನ್ಯಗಳನ್ನು ಮತ್ತು ಅದರಿಂದಾಗಿ ಅವರಿಗೆ ವಿಶೇಷ ರಕ್ಷಣೆ ಅಗತ್ಯ ಎಂಬುದನ್ನು ನಿರ್ಲಕ್ಷಿಸಿ ಅಲ್ಲ; ಬದಲಿಗೆ, ಪಂಚಮ ಕುಲಗಳೇನಕವು ಶೂದ್ರ ಜಾತಿಗಳ ಉಪ ಉತ್ಪನ್ನಗಳು ಮತ್ತು ಅವುಗಳಲ್ಲಿ ಕೆಲವಾದರೂ ಕೆಲವು ಕಾಲಘಟ್ಟಗಳಲ್ಲಿ ಕೆಲವು ಪ್ರದೇಶಗಳಲ್ಲಿ ಆಳುವ ವರ್ಗವಾಗಿದ್ದವು ಎಂಬ ಉಲ್ಲೇಖಗಳನ್ನು ಇಂದಿನ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಕಾಣಬಹುದು ಎಂಬುದು.)

ಈ ಸಂಕಥನದ ಇನ್ನೊಂದು ಸಮಸ್ಯೆಯೆಂದರೆ, ಈ ವಿಂಗಡಣೆಯಲ್ಲಿ 'ಶೂದ್ರ' ಎನ್ನುವುದನ್ನು ಬಹು ಸ್ಥೂಲಗೊಳಿಸಿ ಅದರಲ್ಲಿ ಸಾಂಪ್ರದಾಯಿಕ ಆಸ್ತಿವಂತ ಕಸುಬುದಾರ ಜಾತಿಗಳನ್ನು ಸೇರಿಸುವ ಮೂಲಕ ಜಾತಿ ವ್ಯವಸ್ಥೆಯ 'ಅನ್ಯಾಯ'ದ ಇತಿಹಾಸವನ್ನು ವಸಾಹತುಶಾಹಿ ರಾಜಕಾರಣದ ಕಾಲಘಟ್ಟದ ಪರಿಪ್ರೇಕ್ಷ್ಯದಲ್ಲಷ್ಟೇ ಸ್ಥಿತಗೊಳಿಸಿ ನೋಡಿ(ಅಂದರೆ ಅಕ್ಷರ ಜ್ಞಾನ ವಂಚನೆಯೇ ಹೊಸ ವ್ಯವಸ್ಥೆಯಲ್ಲಿ ಸಮ ಪಾಲುದಾರರಾಗಲು ತಡೆದಿರುವ ಏಕೈಕ ಅಂಶ ಎಂಬಂತೆ) ಅದನ್ನು ಕೇವಲ ಮೇಲ್ಜಾತಿ ವಿರೋಧಿ ನೋಟದ ಸಂಕಥನವಾಗಿ ಕಟ್ಟಲಾಗಿದೆ ಎಂಬುದು. ಇದರಿಂದಾಗಿ ಇಡೀ ಜಾತಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿದ್ದ ಶ್ರೇಣೀಕರಣ ಮತ್ತು ಶೋಷಣೆಯ ವಿನ್ಯಾಸ ಮತ್ತು ಇತಿಹಾಸದ ಹಲವು ಸೂಕ್ಷ್ಮಗಳು(ಸಂದುಗೊಂದುಗಳು) ಮರೆಯಾಗಿ ಹೋದದ್ದು. ಹಾಗೇ, ಪುರೋಹಿತಶಾಹಿ ಮತ್ತು ಊಳಿಗಮಾನ್ಯಶಾಹಿ ಎಂಬುವುಗಳು ಜಾತಿಗಳಿಗಿಂತ ಹೆಚ್ಚಾಗಿ; ಸಾಮಾಜಿಕ ರಾಜಕಾರಣದ ಪ್ರವೃತ್ತಿಗಳಾಗಿ ಜೊತೆ ಜೊತೆಯಾಗಿ ನಮ್ಮ ಜಾತಿ ವ್ಯವಸ್ಥೆಯ ಶೋಷಣಾತ್ಮಕತೆಯನ್ನು ರೂಪಿಸಿದವು ಎಂಬುದು ನಮ್ಮ ಗಮನಕ್ಕೆ ಬಾರದೇ ಹೋದದ್ದು. ಈ ವ್ಯವಸ್ಥೆಯಲ್ಲಿನ ಮಹಿಳೆಯರ ಅಸಮಾನತೆಯ ಇತಿಹಾಸದ ಮರ್ಮವನ್ನು ನಾವು ಇಲ್ಲಿ ಗುರುತಿಸಬಹುದು ಎಂದು ಕಾಣುತ್ತದೆ.

ಇದನ್ನೇ ನೇರವಾಗಿ, ಸ್ಪಷ್ಟವಾಗಿ ಹೇಳುವುದಾದರೆ, ಜಾತಿ ವ್ಯವಸ್ಥೆಯ ಮೂಲಕ ನಮ್ಮವರೆಗೆ ಹರಿದುಬಂದ ಅನ್ಯಾಯಗಳಿಗೆ ಇಂದು ಮೇಲ್ಜಾತಿಗಳೆಂದು ಗುರುತಿಸಲಾಗುವ ಜಾತಿಗಳು ಎಷ್ಟು ಕಾರಣವೋ ಅಷ್ಟೇ ಇಂದು ಇತರ ಹಿಂದುಳಿದ ಜಾತಿಗಳೆಂದು ಕರೆಯಲಾಗುವ ಜಾತಿಗಳಲ್ಲಿ ಬಹಳಷ್ಟು ಜಾತಿಗಳೂ ಕಾರಣವಾಗಿವೆ. ನಮ್ಮ ಜಾತಿ ವ್ಯವಸ್ಥೆಯ ಅಂತರ್ಗತ ಗುಣವೆಂದರೆ, ಒಂದು ಜಾತಿಗೆ ಒಂದಿಷ್ಟು ಭೂ ಅಥವಾ ಆಸ್ತಿ ಒಡೆತನ ಅಥವಾ ರಾಜಕೀಯ ಅಧಿಕಾರ(ಅದು ಯಾವುದೇ ಸ್ತರದ್ದಾಗಲಿ) ದೊರೆತೊಡನೆ ಅವು ಊಳಿಗಮಾನ್ಯಶಾಹಿ ಪ್ರವೃತ್ತಿ ತೋರತೊಡಗುತ್ತವೆ: ಅವು ತನ್ನ ಮೇಲಿನ ಜಾತಿಗಳನ್ನು ಆಕ್ರಮಣಶೀಲವಾಗಿಯೂ ತನ್ನ ಕೆಳಗಿನ ಜಾತಿಗಳನ್ನು ದಮನಶೀಲವಾಗಿಯೂ ನೋಡತೊಡಗುತ್ತವೆ. ಇದರರ್ಥ ಮತ್ತೇನಲ್ಲ; ಈ ಎಲ್ಲ ಜಾತಿಗಳೂ ಒಂದಲ್ಲ ಒಂದು ಕಾಲಘಟ್ಟದಲ್ಲಿ ಒಂದಲ್ಲ ಒಂದು ರೂಪದಲ್ಲಿನ ಆಳುವ ವ್ಯವಸ್ಥೆಯ ಭಾಗವಾಗಿದ್ದು, ಅದರ ವಾಸನೆಗಳು ಅವುಗಳಲ್ಲಿ ಹಾಗೇ ಉಳಿದು ಬಂದಿವೆ. ಅಂದರೆ ಯಾವ ರೂಪದ ಜಾತಿ ವ್ಯವಸ್ಥೆಯನ್ನು ನಾವು ಈ ಆಧುನಿಕ ಕಾಲದಲ್ಲಿ ಶ್ರೇಣೀಕೃತ–ಶೋಷಣಾತ್ಮಕ ವ್ಯವಸ್ಥೆ ಎಂದು ಗುರುತಿಸಿ ಅದನ್ನು ಶೋಷಕ ಮತ್ತು ಶೋಷಿತ ಶ್ರೇಣಿಗಳೆಂದು ವಿಂಗಡಿಸಿದೆವೋ ಅದರ ತಲೆಯಿಂದ ಬುಡದವರೆಗೆ ಊಳಿಗಮಾನ್ಯಶಾಹಿ ಗುಣ ಅಂತರ್ಗತವಾಗಿದ್ದು, ಪ್ರತಿ ಜಾತಿಯೂ ಅವಕಾಶ ಸಿಕ್ಕೊಡನೆ ತನ್ನ ಸುಸ್ಥಿರತೆಗಾಗಿ ತನ್ನದೇ ಪುರೋಹಿತಶಾಹಿಯ ಅನ್ವೇಷಣೆಯಲ್ಲಿ ತೊಡಗುತ್ತದೆ. ಇದಕ್ಕೆ ಉದಾಹರಣೆ ಅಥವಾ ವಿವರಣೆ ಅಗತ್ಯವಿಲ್ಲದಷ್ಟು ಪ್ರಮಾಣದಲ್ಲಿ ಈ ವಿದ್ಯಮಾನ ನಮ್ಮೆದುರಿಗೇ ನಡೆಯುತ್ತಿದೆ. ಇಲ್ಲಿ ಎದ್ದು ಕಾಣುವ ಒಂದು ಸಂಗತಿಯೆಂದರೆ, ಸಾಮಾಜಿಕ








ನ್ಯಾಯ ರಾಜಕಾರಣದ ನಾಯಕತ್ವ ಜಾತಿ ವ್ಯವಸ್ಥೆಯಲ್ಲಿ ಅಂತರ್ಗತವಾಗಿದ್ದ ಅಸಮಾನತೆಯ ರಾಜಕಾರಣವನ್ನು ಬಹಳ ಸರಳೀಕರಿಸಿ ಆ ಸರಳೀಕರಣದ ಆಧಾರದ ಮೇಲೆ ಶೋಷಿತ ಜಾತಿಗಳೆಂದು ವಿಂಗಡಿಸಲ್ಪಟ್ಟ ಜಾತಿಗಳ ತಾತ್ಪೂರ್ತಿಕ ಲೌಕಿಕ ಲಾಭಗಳಿಗಷ್ಟೇ ತನ್ನ 'ಹೋರಾಟ'ವನ್ನು ಸೀಮಿತಗೊಳಿಸಿಕೊಂಡಿತು ಎಂಬುದು. ಈ ನಾಯಕತ್ವ ಈ ಜನಸಮುದಾಯಗಳ ಮುಂದಿತ್ತೇ ಹೊರತು ಮಧ್ಯದಲ್ಲಲ್ಲ.

–೪–

ಈ ವಾಸ್ತವ ಸತ್ಯ–ಸಂಕೀರ್ಣಕ್ಕೆ ಕಣ್ಣು ಮುಚ್ಚಿಕೊಂಡಿರುವುದೇ ಇಂದಿನ ಸಾಮಾಜಿಕ ನ್ಯಾಯ ಅಥವಾ ಸಮಾನತೆಯ ರಾಜಕಾರಣದ ದುರಂತವಾಗಿದೆ. ಸಾಮಾಜಿಕ ನ್ಯಾಯ ರಾಜಕಾರಣದಡಿಯಲ್ಲಿ ಯಾವ ಸಮುದಾಯಗಳು ಇತಿಹಾಸದ ಬಂಧನಗಳಿಂದ ಬಿಡುಗಡೆಗೊಂಡವೋ(ಅಥವಾ ಬಿಡುಗಡೆಗೊಳ್ಳುತ್ತಿವೆಯೋ) ಆ ಸಮುದಾಯಗಳು ಇಂದು ಹೇಗೆ ಆ ಸಾಮಾಜಿಕ ನ್ಯಾಯ ರಾಜಕಾರಣವನ್ನು ತಂತಮ್ಮ ಜಾತಿಗಳ ಅನಿರ್ಬಂಧಿತ ಮತ್ತು ಅನೈತಿಕ ಸಬಲೀಕರಣಕ್ಕಾಗಿ ಬಳಸಿಕೊಳ್ಳಲು (ಉದಾ: ಯಾವ ಎಗ್ಗೂ ಇಲ್ಲದೆ ತಮ್ಮನ್ನು ತಾವೇ 'ತಬ್ಬಲಿ'ಗಳು ಎಂದು ಕರೆದುಕೊಳ್ಳುತ್ತಾ) ಆರಂಭಿಸುವ ಮೂಲಕ ಅದರ ಮುಂದಿನ ಘಟ್ಟವಾದ ಸಮಾನತೆಯ ಹೊಸ ಸಮಾಜವನ್ನು ರೂಪಿಸುವ ಸಮಾಜವಾದಿ ರಾಜಕಾರಣವನ್ನೇ ಇಲ್ಲವಾಗಿಸಿವೆ ಎಂಬುದನ್ನು ನಾವಿಂದು ನೋಡುತ್ತಿದ್ದೇವೆ. ನಮ್ಮ ಜಾತಿ ವ್ಯವಸ್ಥೆಯಲ್ಲೇ ಅಂತರ್ಗತವಾಗಿದ್ದ ಜಾತಿಗಳ ಊಳಿಗಮಾನ್ಯ ಗುಣಗಳು ಅವುಗಳಲ್ಲಿ ಹಾಗೇ ಉಳಿದಹೋದ ಕಾರಣದಿಂದಾಗಿ ಸಾಮಾಜಿಕ ನ್ಯಾಯ ರಾಜಕಾರಣವೆಂಬುದು ಹೆಚ್ಚು ಬಲಶಾಲಿ ಮತ್ತು ಕಡಿಮೆ ಬಲಶಾಲಿ ಊಳಿಗಮಾನ್ಯಶಾಹಿ 'ಜಾತಿ'ಗಳ ನಡುವಣ ಸ್ಪರ್ಧೆಯ ರಾಜಕಾರಣವಾಗಿ ಮಾರ್ಪಟ್ಟಿದೆ. (ಜಾತಿ ವ್ಯವಸ್ಥೆಯ ಅನ್ಯಾಯಗಳಿಗೆ ಒಳಗಾದವರೆಂದು ಹೇಳಲಾಗುವ ಜಾತಿಗಳಿಂದ ಮೂಡಿದ ರಾಜಕೀಯ ನಾಯಕತ್ವ ಇಂದು ಎಂತಹ ರಾಜಕಾರಣಕ್ಕೆ ಹೆಸರಾಗಿವೆ ಗಮನಿಸಿ) ಬೆಳೆದ ನೆಹ್ರೂ ವಂಶ ರಾಜಕಾರಣದ ವಿರುದ್ಧ ಮಾತಾಡುತ್ತ ಬೆಳೆದ ಮಧ್ಯಮಜಾತಿಗಳ ನಾಯಕರು ಮತ್ತವರು ಇಂದು ಕಟ್ಟಿಕೊಂಡಿರುವ ಜಾತಿ ರಾಜಕೀಯದ ಪರಿಣಾಮವಾಗಿ ಒಟ್ಟು ಸಮಾಜದಲ್ಲಿ ದುರಾಸೆ. ಈರ್ಷೆ, ಕ್ರೌರ್ಯಗಳು ಹೆಚ್ಚುತ್ತಾ, ಸಹಾನುಭೂತಿ, ಅನುಕಂಪ, ಸೋದರತೆ ಮುಂತಾದ ಐಕ್ಯತೆ ಮತ್ತು ಸಹಬಾಳ್ವೆಯ ಮೌಲ್ಯಗಳು ಹಿನ್ನೆಲೆಗೆ ಸರಿಯುತ್ತಿವೆ. ಸರ್ವಾಧಿಕಾರಿ ಮತ್ತು ಕುಟುಂಬ ರಾಜಕಾರಣ ಪ್ರಶ್ನಾತೀತವಾಗತೊಡಗಿದೆ. ಈ ಮುಕ್ತ ಮಾರುಕಟ್ಟೆ ಕಾಲದಲ್ಲಂತೂ ಜಾತಿ ಜಾತಿಗಳ ನಡುವಣ ಸ್ಪರ್ಧೆಯು, ಸ್ಪರ್ಧೆಯ ಎಲ್ಲ ಶೀಲಗಳಿಂದ ಮುಕ್ತವಾಗಿ ನಡೆದಿರುವಾಗ ಸಮಾಜ ಹೆಚ್ಚು ಭ್ರಷ್ಟ ಮತ್ತು ದುಷ್ಟವಾಗುತ್ತಿದೆ. ಇದರಿಂದಾಗಿ ಸಾರ್ವಜನಿಕ ಜೀವನದಲ್ಲಿ ಇಂದು ಹಿಂಸೆ, ಅಶಾಂತಿ ಹೆಚ್ಚುತ್ತಾ ತೀವ್ರತರವಾದ ಸಾಮಾಜಿಕ ಅಸ್ಥಿರತೆಯ ಆತಂಕ ತಲೆದೋರಿದೆ.

ಅಸಮಾನತೆಯ ಬಂಧನಗಳಿಂದ ತಾವು ವಿಮೋಚನೆಗೊಳ್ಳುವ ಮೂಲಕ ಇಡೀ ಸಮಾಜವನ್ನು ವಿಮೋಚನೆಗೊಳಿಸಬೇಕಿದ್ದ ಸಮುದಾಯಗಳು ಇಂದು ಯಾವ, ಎಂತಹ ರಾಜಕಾರಣದೊಂದಿಗೆ ಗುರುತಿಸಿಕೊಂಡಿವೆ ಎಂಬುದನ್ನು ಒಮ್ಮೆ ಗಮನಿಸಿದರೆ ಚಿತ್ರ ಗಾಬರಿಯಾಗುವಂತಿದೆ. ಸಾಮಾಜಿಕ ನ್ಯಾಯದ ಆಶಯವನ್ನು ಹೋರಾಟವನ್ನಾಗಿ ಮಾಡಿಕೊಂಡು ಬೆಳೆದ ರಾಜಕೀಯ ಪಕ್ಷಗಳು(ಉದಾ: ಡಿಎಂಕೆ ಮತ್ತು ಅದರ ವಿವಿಧ ಆವೃತ್ತಿಗಳು, ಸಮಾಜವಾದಿ ಪಕ್ಷ, ಬಿಎಸ್ಪಿ, ಅಕಾಲಿದಳ, ರಾಷ್ಟ್ರೀಯ ಜನತಾ ದಳ, ತೆಲಂಗಾಣ ಕಾಂಗ್ರೆಸ್ ಮುಂತಾದವು) ಯಾವ ಶಕ್ತಿಗಳ ವಿರುದ್ಧ ತಮ್ಮ ಹೋರಾಟವನ್ನು ಆರಂಭಿಸಿದವೋ ಅವೇ ಯಥಾಸ್ಥಿತಿವಾದಿ ಮತ್ತು ಪಟ್ಟಭದ್ರ ಶಕ್ತಿಗಳನ್ನು ಪ್ರತಿನಿಧಿಸುವ ಪಕ್ಷಗಳ ಬಾಲಂಗೋಚಿಗಳಾಗಿ ಇಂದು ಅತ್ಯಂತ ನಿರ್ಲಜ್ಜ ಮತ್ತು ಸಮಯಸಾಧಕ ರಾಜಕಾರಣ ಮಾಡಿಕೊಂಡು ಬದುಕುತ್ತಿರುವುದನ್ನು ನಾವು ವಿಷಾದ ಜಿಗುಪ್ಸೆಗಳಿಂದ ಗಮನಿಸುವಂತಾಗಿದೆ. ಅಷ್ಟೇ ಅಲ್ಲ, ಅವುಗಳ ಊಳಿಗಮಾನ್ಯ ಗುಣ ಅವು ಕಟ್ಟಿಕೊಳ್ಳುತ್ತಿರುವ ಕುಟುಂಬ ರಾಜಕಾರಣದಲ್ಲಿ ನಿಚ್ಚಳವಾಗಿ ಕಾಣುತ್ತದೆ. ಏಕೆ? ಶೋಷಿತ ಜಾತಿ ಶ್ರೇಣಿಗೆ ಸೇರಿದವರೆಂದು ಹೇಳಲಾದ ನರೇಂದ್ರ ಮೋದಿ ಎತ್ತಿ ಹಿಡಿಯುತ್ತಿರುವ ರಾಜಕಾರಣದ ಮೌಲ್ಯಗಳು ಮತ್ತು ಉದ್ದೇಶ; ಹಾಗೂ ಜಾತಿ ವ್ಯವಸ್ಥೆಯ ಮೌಲ್ಯಗಳನ್ನು ತಾತ್ವಿಕವಾಗಿ ವಿರೋಧಿಸದ ಬಿಜೆಪಿಯ ಇತ್ತೀಚಿನ ಪ್ರಾಬಲ್ಯದ ಹಿಂದಿರುವ ಶಕ್ತಿಗಳ ಸಾಮಾಜಿಕ ಸ್ವರೂಪವು ಸಾಮಾಜಿಕ ನ್ಯಾಯ ಹೋರಾಟದ ಹಿಂದಿರುವವೆಂದು ಹೇಳಲಾಗುತ್ತಿರುವ ಮೌಲ್ಯಗಳನ್ನು ಧಿಕ್ಕರಿಸಿ ನಿಂತಂತಿರುವವಲ್ಲಾ ಏಕೆ?

ಏಕೆಂದರೆ ನಮ್ಮ ಜಾತಿ ವಿರೋಧಿ ಅಥವಾ ಸಾಮಾಜಿಕ ನ್ಯಾಯ ರಾಜಕಾರಣ ತನ್ನ ತಾತ್ವಿಕ ಏಕಾಗ್ರತೆಯನ್ನು ಕಳೆದುಕೊಂಡು ತಾನು ಎದುರಿಸಬೇಕಾದದ್ದು ಜಾತಿ–'ವ್ಯವಸ್ಥೆ'ಯನ್ನೇ ಹೊರತು ಜಾತಿ–'ಸಮುದಾಯ'ಗಳನ್ನಲ್ಲ ಎಂಬುದನ್ನು ಮರೆತು ಒಳತೋಟಿಯಿಲ್ಲದ ಕೇವಲ ಹೊರ ಹೋರಾಟವಾಗಿ ಬೆಳೆಯಿತು. ಅದು ಹೀಗೆ ತನ್ನ ಅಧ್ಯಾತ್ಮಿಕತೆಯನ್ನು ಕಳೆದುಕೊಂಡು ಅಲ್ಪಕಾಲಿಕ ಲಾಭ ಮತ್ತು ಆಕರ್ಷಣೆಗಳಿಗೆ ಈಡಾಯಿತು. ಇದರ ಒಟ್ಟು ಪರಿಣಾಮವೆಂದರೆ ಸಮಾಜ ಭಾವನಾತ್ಮಕವಾಗಿ ಛಿದ್ರವಾಗಿದೆ; ತನ್ನ ಸಂವೇದನಾಶೀಲತೆಯನ್ನು ಕಳೆದುಕೊಂಡು ಹಣ ಮತ್ತು ಸಂಪತ್ತಿನ ದುಷ್ಟ ಆಟವಾಗಿರುವ ಈ ರಾಜಕಾರಣವೆಂಬ ಅಶ್ಲೀಲ ಸ್ಪರ್ಧೆಯಲ್ಲಿ ಭಾಗವಹಿಸಲಾಗದ ಜನಸಮುದಾಯಗಳನ್ನು ನಿರ್ದಾಕ್ಷಿಣ್ಯವಾಗಿ ಅಂಚಿಗೆ ತಳ್ಳುತ್ತಿದೆ. ಆ ಮೂಲಕ ಜಾತಿ ವ್ಯವಸ್ಥೆಯ ವಿರುದ್ಧದ ಜಾಗೃತಿ ಮತ್ತು ಹೋರಾಟ ಯಾವುದರ ಅಮಾನವೀಯತೆಯಿಂದ ಕೆರಳಿ ಆರಂಭವಾಯಿತೋ ಆ ಅಸ್ಪೃಶ್ಯತೆಯ ಹೊಸ ಸಂಯೋಜನೆಯೊಂದಕ್ಕೆ ದಾರಿ ಮಾಡಿಕೊಡುತ್ತಿದೆ. ಅಲ್ಲಿಗೆ ಜಾತಿ ಪದ್ಧತಿಯ ಹೊಸ ವಿನ್ಯಾಸದ ಎರಕ ಸಿದ್ಧಗೊಂಡಿದೆ ಎಂದೇ ಅರ್ಥ.

ಅಸ್ಪೃಶ್ಯತೆ ಎಂಬುದು ಜಾತಿ ವ್ಯವಸ್ಥೆಯ ಹೊರಗಿನ ವ್ಯವಸ್ಥೆಯಲ್ಲವೇನೋ. ಅಸ್ಪೃಶ್ಯತೆ ಎಂಬುದು ಜಾತಿ ವ್ಯವಸ್ಥೆ ಎಂಬ ಯಂತ್ರ ನಡೆಯಲು ಬೇಕಾದ ಮೂಲ ಇಂಧನ ಇದ್ದಂತೆ. ಇಂಧನದ ಕಲ್ಪನೆ ಇಲ್ಲದೆ ಯಾವುದೇ ಯಂತ್ರ ರೂಪುಗೊಳ್ಳಲಾರದು. ಅಥವಾ ಹೀಗೂ ಹೇಳಬಹುದೇನೋ: ಜಾತಿ ಒಂದು ವ್ಯವಸ್ಥೆಯಾಗಿ ತನ್ನ ಪೂರ್ಣತೆಯನ್ನು ಕಂಡುಕೊಂಡದ್ದೇ ಬಹುಶಃ ಅದು ತನ್ನ ಅಸ್ಪೃಶ್ಯತೆಯ ಕಲ್ಪನೆಯನ್ನು ಕಂಡುಕೊಂಡಾಗಲೇ. ಆ ಕಂಡುಕೊಳ್ಳುವ ಪ್ರಕ್ರಿಯೆಯಲ್ಲಿ ಕ್ರಿಯಾಶೀಲವಾಗಿರುವ, ಅದಕ್ಕೊಂದು ವಿಧ್ಯುಕ್ತ ಮಾನ್ಯತೆಯ ರೂಪಗಳನ್ನು ನೀಡುವ ಮಿದುಳನ್ನೇ ಪುರೋಹಿತಶಾಹಿ ಎಂದು ಗುರುತಿಸುವುದು. ಊಳಿಗಮಾನ್ಯಶಾಹಿ ಅದರ ಕೈಗಳು. ಇಂದು ಈ ಮೂರೂ ಹೊಸ ತರ್ಕ, ಹೊಸ ಸಾಧನ–ಸಲಕರಣೆ ಮತ್ತು ಹೊಸ ವೇಷಗಳಲ್ಲಿ ಕಾಣಿಸಿಕೊಂಡಿರುವುದನ್ನು ನಾವು ಗಮನಿಸಬಹುದು. ಅಥವಾ ಹೀಗೂ ಹೇಳಬಹುದು: ಸಮಾಜ ಎನ್ನುವ ಕಲ್ಪನೆಯೇ ನಶಿಸುತ್ತಾ ಅದು ಇಡಿಯಾಗಿ ಎಲ್ಲ ನೆಲೆಗಳಲ್ಲೂ ಕಾರ್ಪೋರೇಟ್‌ಶಾಹಿ ರೂಪ ತಾಳುತ್ತಿರುವುದರಿಂದ ಅದರ ಪರಿಭಾಷೆಯ ಮರೆಯಲ್ಲಿ ಈ ಜಾತಿ ವ್ಯವಸ್ಥೆ ಎಂಬುದು ತನ್ನ ಹಳೆಯ ಚಾಲೂ–ಚಹರೆಗಳೊಂದಿಗೆ ಕಾಣದೇ ಹೋಗಿದೆಯಷ್ಟೆ. ಹಾಗೇ, ಜಾತಿ ವಿರೋಧಿ ಹೋರಾಟದ ಪ್ರಬಲ ಅಸ್ತ್ರವೆಂದು ಹೇಳಲಾಗುವ ಜಾತಿ ಸಂಕರದ ಪ್ರಯೋಗಗಳೂ ಇಂದು ಈ ಕಾರ್ಪೋರೇಟ್ ಜಗತ್ತಿನ ಮಾಯೆಗೆ ಸಿಕ್ಕಿ ಹೊಸ ಜಾತಿ ವ್ಯವಸ್ಥೆಯೊಳಕ್ಕೆ ಲೀನವಾಗುತ್ತಿರುವ ಪರಿಯನ್ನೂ ನಾವು ಇಲ್ಲಿ ಗಮನಿಸಬೇಕು.

–೫–

ಹೀಗೆ ಸಾಮಾಜಿಕ ನ್ಯಾಯ ರಾಜಕಾರಣ ತನ್ನ ವಿಪರ್ಯಾಸದ ಕೊನೆಯ ಹಂತವನ್ನು ಮುಟ್ಟುತ್ತಿರುವಂತಿದೆ: ಊಳಿಗಮಾನ್ಯಶಾಹಿಯ ಹೊಸ

ಅವತಾರಗಳೊಂದಿಗೆ ಜಾತಿ ವ್ಯವಸ್ಥೆ ಇಂದು ಹೆಚ್ಚು 'ಬಲ'ಶಾಲಿಯೂ, ಅಶ್ಲೀಲವೂ ಆಗಿ ಸಾರ್ವಜನಿಕ ಜೀವನವನ್ನು ಹಿಂದಿಗಿಂತ ಹೆಚ್ಚು ಅಧಿಕಾರದೊಂದಿಗೆ ಆಳತೊಡಗಿದೆ. ಹಾಗಾಗಿ ಅದರ ಹಿಂಸೆ ಹೆಚ್ಚು ಆತ್ಮವಿಶ್ವಾಸದೊಡನೆ–ಅಂದರೆ ಯಾವುದೇ ನೈತಿಕತೆಯ ಭಯವಿಲ್ಲದೆ ನಿಸ್ಸಂಕೋಚವಾಗಿ–ಪ್ರಕಟವಾಗತೊಡಗಿದೆ. ಕೆಲವೇ ಸೂಚನೆಗಳನ್ನು ನೀಡುವುದಾದರೆ, ಹತ್ಯೆ ಈಗ ಒಂದು ಕಡೆ (ಸಾಮೂಹಿಕ) 'ಆತ್ಮಹತ್ಯೆ'ಗಳ ರೂಪವನ್ನೂ ಇನ್ನೊಂದು ಕಡೆ 'ಮರ್ಯಾದೆ'ಯ ರೂಪವನ್ನೂ ಪಡೆಯಲಾರಂಭಿಸಿದೆ. ಮಹಿಳೆ ಮತ್ತು ಅತಿ–ಕೆಳಜಾತಿಗಳವರು ಹಿಂಸೆಗೆ ಹೆಚ್ಚು ಅಗ್ಗವಾಗತೊಡಗಿದ್ದಾರೆ. ಜಾತಿ ವಿರೋಧೀ ಆಂದೋಲನದ ಆರಂಭದಲ್ಲಿ ಬಳಲಿಹೋಗಿದ್ದ ನಮ್ಮ ಪುರೋಹಿತಶಾಹಿ ಈಗ ಹೊಸ ನಯ–ನಾಜೂಕುಗಳೊಂದಿಗೆ ಹೊಮ್ಮುತ್ತಿರುವ ಊಳಿಗಮಾನ್ಯಶಾಹಿಯ ಬೆಂಬಲದೊಂದಿಗೆ ಹೊಸ ಮತ್ತು ಶ್ರೀಮಂತ ರೂಪಗಳಲ್ಲಿನ ಮಾನ್ಯತೆ ಪಡೆದು ಹೊಸ ಹೊಸ ದೇವರು–ದಿಂಡರು–ಹಬ್ಬ–ವ್ರತ–ಸಂಕಷ್ಟಿ–ಯಾಗ–ಯಜ್ಞ–ಶ್ಲೋಕ–ಧ್ಯಾನ–ಯೋಗ–ಪ್ರಾರ್ಥನೆ–ಮಂತ್ರಗಳೊಂದಿಗೆ ಈ ಹೊಸ ಜಾತಿ ವ್ಯವಸ್ಥೆಯನ್ನು ತನ್ನ ಹತ್ತೂ ಬೆರಳುಗಳಲ್ಲಿನ ಚಿನ್ನದ ಉಂಗುರಗಳೊಂದಿಗೆ ಆಶೀರ್ವದಿಸುತ್ತಿದೆ.

ಮತ್ತೆ ಲೋಹಿಯಾರ ಮಾತುಗಳು ನೆನಪಿಗೆ ಬರುತ್ತಿವೆ: 'ಜಾತಿ ವ್ಯವಸ್ಥೆಯಿಂದಾಗಿ ಬ್ರಾಹ್ಮಣ ಶೂದ್ರರಿಬ್ಬರೂ ಅರೆ ಜೀವವಾಗಿ ಬಿದ್ದಿದ್ದಾರೆ. ನಿಜವಾದ ಸಮಾನತೆಗಾಗಿ ಒಬ್ಬರು ಇನ್ನೊಬ್ಬರನ್ನು ಕೈಹಿಡಿದೆತ್ತಿ ಸಮಾಜವಾದಿ ರಾಜಕಾರಣದಲ್ಲಿ ಪಾಲ್ಗೊಳ್ಳಬೇಕಿದೆ.' ಜಾತಿ ವಿರೋಧಿ ಅಥವಾ ಜಾತಿ ವಿನಾಶದ ಹೋರಾಟ ಈ ಮಾತನ್ನು ಅದರ ಸಮಗ್ರತೆ ಮತ್ತು ಸೂಕ್ಷ್ಮತೆಗಳೊಂದಿಗೆ–ಬ್ರಾಹ್ಮಣ ಮತ್ತು ಶೂದ್ರರಿಬ್ಬರೂ ಎಂಬುದನ್ನು ಇಡೀ ಸಮಾಜ ಮಾನಸಿಕವಾಗಿ ಮತ್ತು ದೈಹಿಕವಾಗಿ ಎಂಬರ್ಥದಲ್ಲಿ–ಅರ್ಥ ಮಾಡಿಕೊಳ್ಳದೇ ಹೋದರೆ ಅದು ನಮ್ಮ ಜಾತಿ ವ್ಯವಸ್ಥೆಯನ್ನು ಪುನರುತ್ಪಾದಿಸುತ್ತಾ ಹೋಗುತ್ತದಷ್ಟೆ ಇದರ ಆತ್ಯಂತಿಕ ಬಲಿಪಶುಗಳು ಅಸ್ಪೃಶ್ಯ ಜಾತಿಗಳೇ ಆಗಿರುತ್ತವೆ ಎಂಬುದನ್ನೂ ನಾವು ಇಲ್ಲಿ ಗಮನಿಸಬೇಕಾಗುತ್ತದೆ.

ಇನ್ನು ಕೊನೆಯ ಮಾತು: ಸಾಮಾಜಿಕ ನ್ಯಾಯವೆಂಬುದು ಕೇವಲ 'ಶೋಷಿತ' ಜಾತಿಗಳಿಗೆ ಸಂಬಂಧಿಸಿದ ರಾಜಕೀಯ ಪ್ರಕ್ರಿಯೆಯಲ್ಲ. ಅದು ಇಡೀ ಸಮಾಜದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಗ್ರಹೀತವಾದ ಮತ್ತು ಚಾಲ್ತಿಗೆ ಬಂದ ಪ್ರಕ್ರಿಯೆ. ಹಾಗಾಗಿ ಸಾಮಾಜಿಕ ನ್ಯಾಯದಿಂದ ಆಗಿರಬಹುದಾದ ಒಳ್ಳೆಯದನ್ನು ಅಳೆಯಬೇಕಾದದ್ದು ಕೆಲವು ಜಾತಿಗಳನ್ನು ದೃಷ್ಟಿಯಿಟ್ಟುಕೊಂಡಲ್ಲ. ಇಡೀ ಸಮಾಜವನ್ನು ದೃಷ್ಟಿಯಿಟ್ಟುಕೊಂಡು. ಹಾಗಾಗಿ ಈ ಸಂಬಂಧ ಆತ್ಯಂತಿಕವಾಗಿ ಕೇಳಬೇಕಾದ ಪ್ರಶ್ನೆಯೆಂದರೆ: ಈವರೆಗಿನ ಸಾಮಾಜಿಕ ನ್ಯಾಯ ರಾಜಕಾರಣದಿಂದ ಸಮಾಜದ ಸಾರ್ವತ್ರಿಕ ದಕ್ಷತೆ ಹೆಚ್ಚಿದೆಯೆ? ಸಾರ್ವಜನಿಕ ಸೇವೆಗಳ ಗುಣಮಟ್ಟ ಹೆಚ್ಚಿದೆಯೇ? ಹಾಗಾಗಿ ಸಾಮಾಜಿಕ ಸುಖ–ಶಾಂತಿಗಳು ಹೆಚ್ಚಿವೆಯೇ? ಮನುಷ್ಯ ಹೆಚ್ಚು ನ್ಯಾಯಶೀಲನಾಗಿದ್ದಾನೆಯೇ? ಎಂಬುವಾಗಿವೆ.

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದಿರಲಿ, ಈ ಪ್ರಶ್ನೆಗಳನ್ನು ಕೇಳಲಾದರೂ ಇಂದು ಅವಕಾಶವಿದೆಯೇ? ಸಾಮಾಜಿಕ ನ್ಯಾಯ ರಾಜಕಾರಣದ ಫಲಾನುಭವಿಗಳು ಈ ಪ್ರಶ್ನೆಯ ಉತ್ತರಕ್ಕೆ ಬಾಧ್ಯಸ್ಥರಾಗಿದ್ದಾರೆ.



**(ಸಾಹಿತ್ಯ ವಿಮರ್ಶಕರೂ ಸಮಾಜವಾದಿ ಚಿಂತಕರೂ ಆದ ಡಿ.ಎಸ್. ನಾಗಭೂಷಣ ಆಕಾಶವಾಣಿಯ ನಿವೃತ್ತ ಸಹಾಯಕ ನಿರ್ದೇಶಕರು)**

# (ಸಾಮಾಜಿಕ) ನ್ಯಾಯ–ಅನ್ಯಾಯಗಳ ಗೊಂದಲಗಳ ನಡುವೆ...

**–ಎನ್. ಎಸ್. ಶಂಕರ್**

ದಲಿತ ಸಂಘಟನೆಯ ಒಡಲ ಕಿಚ್ಚೆಷ್ಟು ಎಂದು ಯಾರಿಗೂ ಇನ್ನೂ ಅಂದಾಜಿರದ ದಿನಗಳು. ಬೇರೆಯವರಿಗಿರಲಿ, ಸ್ವತಃ ಮುಖಂಡರಿಗೇ ಚಳವಳಿಯ ದಿಕ್ಕೇನು, ಅಂತಿಮವಾಗಿ ಎಲ್ಲಿಗೆ ತಲುಪಬಹುದು ಯಾವ ಕಲ್ಪನೆಯೂ ಇರಲಿಲ್ಲ. ಅವರೆಲ್ಲ ಕಾಲಕಾಲಕ್ಕೆ ಎದುರಾದ ಸವಾಲುಗಳನ್ನು ಕೈಗೆತ್ತಿಕೊಂಡು ಹೆಣಗುತ್ತ, ನಡೆದಿದ್ದೇ ದಾರಿಯೆಂದು ಹೊರಟಿದ್ದರು. ಒಟ್ಟು ಈವತ್ತಿನದು ಈವತ್ತಿಗೆ– ಅಷ್ಟೇ.

ಎಲ್ಲರಿಗೂ ಗೊತ್ತು– ದಲಿತ ಚಳವಳಿ ಹುಟ್ಟಿದ್ದೇ ಪ್ರತಿಭಟನೆಯ ಸೊಲ್ಲು ಹಿಡಿದು. ಬಸವಲಿಂಗಪ್ಪನವರ ಬೂಸಾ ಗದ್ದಲಕ್ಕೆ ಪ್ರತಿಕ್ರಿಯೆಯಾಗಿ. ಆಗ ಅದೊಂದು ರಾಜ್ಯವ್ಯಾಪಿ ಆಂದೋಲನವಾಗಿ ಬೆಳೆದೀತು, ಅಸಂಖ್ಯಾತ ಅಸಹಾಯಕರಿಗೆ ಜೀತವಿಮುಕ್ತಿ ದೊರಕಿಸೀತು, ಭೂಹೀನರಿಗೆ ಲಕ್ಷಾಂತರ ಎಕರೆ ಜಮೀನು ಕೊಡಿಸೀತು, ಎಲ್ಲಕ್ಕಿಂತ ಹೆಚ್ಚಾಗಿ ದಲಿತರ ಸ್ವಾಭಿಮಾನದ ಪ್ರತೀಕವಾದೀತು ಎಂದು ಯಾರೂ ಊಹಿಸಿರಲಿಲ್ಲ.

ನನ್ನ ಮಟ್ಟಿಗೆ ಅದಕ್ಕಿಂತಲೂ ಮುಖ್ಯವಾದದ್ದು, ದಲಿತ ಚಳವಳಿ ಎಲ್ಲ ಜಾತಿಗಳ ಕನಸುಗಾರರನ್ನು ತನ್ನ ಕಡೆಗೆ ಸೆಳೆದ ಪರಿ. ನನ್ನಂಥ ಲೆಕ್ಕವಿಲ್ಲದಷ್ಟು ಎಳೆ ಹುಡುಗರಲ್ಲಿ ಈ ಸಂಘಟನೆ ನಿಜಕ್ಕೂ ಈವತ್ತಲ್ಲ ನಾಳೆ ಜಾತಿರಹಿತ ಸಮಾಜ ಸೃಷ್ಟಿಸುವುದು ಖಂಡಿತ ಎಂಬ ದೊಡ್ಡ ಕನಸು ಬಿತ್ತಿದ್ದು ಸುಳ್ಳಲ್ಲ.

ರೈತ ಚಳವಳಿಯೂ ತನ್ನ ತಾತ್ವಿಕ ತಿಳುವಳಿಕೆಯಲ್ಲಿ– ವಿಶೇಷವಾಗಿ ಪ್ರೊ. ನಂಜುಂಡಸ್ವಾಮಿಯವರ ಮಾತುಗಳಲ್ಲಿ– ('ಎಲ್ಲ ಬಗೆಯ ಶೋಷಣೆಯ ನಾಶ ರೈತ ಚಳವಳಿಯ ಗುರಿ') ಇದೇ ದಿಕ್ಕಿನ ಸೂಚನೆ ಕೊಟ್ಟಿದ್ದರೂ, ನಮ್ಮಲ್ಲಿ ನಿಜವಾದ ಭರವಸೆ ಹುಟ್ಟಿದ್ದು ದಲಿತ ಚಳವಳಿಯ ಅಂಗಳದಲ್ಲಿಯೇ. ಅಂದರೆ ದಲಿತ ಚಳವಳಿ ಮೂಲತಃ ಅನ್ಯಾಯಗಳ ವಿರುದ್ಧದ ದನಿ ಎತ್ತುವುದು ಸಹಜವಾಗಿದ್ದರೂ, ಅದರ ಅಂತಿಮ ಗುರಿ ಜಾತಿವಿನಾಶ ಎಂದೇ ನಾವೆಲ್ಲ ನಂಬಿಕೊಂಡಿದ್ದೆವು. ಮತ್ತು ಆ ಹಂತದಲ್ಲಿ ಒಂದಲ್ಲ ಒಂದು ದಿನ– ನಮ್ಮ ಜೀವಿತ ಕಾಲದಲ್ಲೇ– ಜಾತಿ ನಶಿಸಿ ಹೋಗುವುದು ಸಾಧ್ಯವೆಂದೇ ದೃಢವಾಗಿ ನಂಬಿದ್ದೆವು.

ಚಳವಳಿಯ ಹಾದಿ ದುರ್ಗಮವಿತ್ತು. ಒಂದೊಂದು ಹೆಜ್ಜೆಯಿಡುವುದೂ ಕಠಿಣವಿತ್ತು. ಅಷ್ಟಾದರೂ ಒಮ್ಮೆ ಸ್ವಾತಂತ್ರ್ಯ ದಿನದಂದು ದಲಿತ ಸಂಘರ್ಷ ಸಮಿತಿ 'ಒಂದು ಲೋಟ ನೀರು' ಎಂಬ ಸರಳವಾದ ಪ್ರೀತಿಪೂರ್ವಕ ಕಾರ್ಯಕ್ರಮ ಯೋಜಿಸಿತು. ಏನಿಲ್ಲ, ದಲಿತ ಕೇರಿಯ ಹೊರಗೆ ಒಂದು ಮಣ್ಣಿನ ಮಡಕೆಯಲ್ಲಿ ನೀರು ಇಟ್ಟುಕೊಳ್ಳುವುದು– 'ನಾವು ನಿಮಗೆ ಇನ್ನೇನೂ ಕೊಡಲಾರೆವು, ಬನ್ನಿ, ನಮ್ಮ ಕೇರಿಗೆ ಬಂದು ಒಂದು ಲೋಟ ನೀರು ಕುಡಿದು ಹೋಗಿ' ಎಂದು ಸವರ್ಣೀಯರನ್ನು ಆಹ್ವಾನಿಸುವುದು. ಹೀಗೆ ಎದೆಯ ಹನಿ ಬೆರೆಸಿ ಕೊಟ್ಟ ಲೋಟ ನೀರು, ಜಾತಿ ಕಟ್ಟುಗಳನ್ನು ಕ್ಷಣವಾದರೂ ಸಡಿಲಿಸುವ ಪವಾಡ ಸಂಭವಿಸುವುದು ಸಾಧ್ಯವಿತ್ತು.




ನನ್ನ ಪ್ರಕಾರ ಇದು ದಲಿತ ಚಳವಳಿಯ ಆಧ್ಯಾತ್ಮಿಕ ಉತ್ತುಂಗದ ಕ್ಷಣಗಳಲ್ಲೊಂದು. ಮುಖ್ಯವಾಗಿ ಪ್ರತಿಭಟನೆಯನ್ನೇ ಉಸಿರಾಡುವ ಸಂಘಟನೆಯೊಂದು, ಎಲ್ಲ ಜಾತಿಗಳನ್ನೂ ತೆರೆದ ತೋಳುಗಳಿಂದ ಕರೆದು ಅಪ್ಪಿಕೊಂಡ ಆ ಆರ್ದ್ರ ಗಳಿಗೆಯೇ, ನನ್ನಲ್ಲಿ ದಲಿತ ಚಳವಳಿ ಒಂದಲ್ಲ ಒಂದು ದಿನ ಜಾತಿಯನ್ನು ತೊಡೆದು ಹಾಕುವುದು ಖಂಡಿತ ಎಂಬ ನಂಬಿಕೆ ಹುಟ್ಟಿತ್ತು. ಆಗ ನಾವು ಕೆಲವು ಗೆಳೆಯರು 'ಸುದ್ದಿ ಸಂಗಾತಿ' ವಾರಪತ್ರಿಕೆ ಹೊರತರುತ್ತಿದ್ದೆವು. ನಾನು ಈ ಒಂದು ಲೋಟ ನೀರಿನ ದಿನ ಈ ಕಾರ್ಯಕ್ರಮ ಸೋಲಬಾರದೆಂದು ಬೇಡಿಕೊಳ್ಳುತ್ತ ಯಾರಿಗೂ ಹೇಳದೆ ಇಡೀ ದಿನ ಉಪವಾಸ ಮಾಡಿದ್ದೆ!... ಮತ್ತು ನನ್ನ ಉಪವಾಸದ ಹಂಗೇ ಇಲ್ಲದೆ ಆ ಕಾರ್ಯಕ್ರಮ ಸಾಕಷ್ಟು ಯಶಸ್ವಿಯೂ ಆಯಿತು...

ಆ ಕನಸಿನ ದಿನಗಳಲ್ಲಿ ನಮಗೆ ಸಾಮಾಜಿಕ ನ್ಯಾಯ ಎಂದರೆ ಹಂಚುಣ್ಣುವ ತತ್ವವಾಗಿ ಕಾಣಿಸುತ್ತಿತ್ತು. ಜಾತಿವಿನಾಶದ ಹಾದಿಯಲ್ಲಿ ಅನಿವಾರ್ಯವಾದ ಒಂದು

ಹಂತವಾಗಿ, ಸಮಾಜದ ಪ್ರಾಯಶ್ಚಿತ್ತದ ರೂಪವಾಗಿ ಗೋಚರಿಸುತ್ತಿತ್ತು. ಅದು ಒತ್ತಟ್ಟಿಗಿರಲಿ.

ಮುಂದಕ್ಕೆ ದಲಿತ ಚಳವಳಿ ವಿಘಟನೆಯ ಇಳಿಜಾರಿನಲ್ಲಿ ಜಾರಿ ಹೋಗುವ ಸಂದರ್ಭದಲ್ಲಿ ಚಳವಳಿಯ ಒಡಲಿಂದಲೇ ನಮ್ಮೆಲ್ಲರ ಎದೆಯಿರಿಯುವ ಪ್ರಶ್ನೆಯೊಂದು ಉದ್ಭವವಾಯಿತು– ದಲಿತ ಸಂಘಟನೆಯಲ್ಲಿ ದಲಿತೇತರರಿಗೇನು ಕೆಲಸ?...! ಒಂದು ಬಗೆಯಲ್ಲಿ ಚಳವಳಿಯ ನೈತಿಕ ಪತನವನ್ನು ಸಂಕೇತಿಸುವ ಈ ಪ್ರಶ್ನೆಯೇ ವಿಘಟನೆಯ ಬೀಜಪ್ರಶ್ನೆಯೇನೋ ಎಂದೂ ಈಗ ಅನಿಸುತ್ತಿದೆ. ಯಾಕೆಂದರೆ ಎಲ್ಲ ಜಾತಿವರ್ಗಗಳ ಸಡಗರದ ವೇದಿಕೆಯಾಗಿದ್ದ ದಲಿತ ಚಳವಳಿ, ಮತ್ತೊಂದು ಜಾತಿ ಸಂಘಟನೆಯಾಗಿ ರೂಪಾಂತರಗೊಳ್ಳಲು ಇದೊಂದು ಪ್ರಶ್ನೆ ಕಾರಣವಾಯಿತು.

ಇದಕ್ಕೆ ಸ್ವಲ್ಪ ಮುಂಚೆ ದಲಿತ ಸಂಘರ್ಷ ಸಮಿತಿ ಮೊದಲ ಬಾರಿ ೧೯೮೫ರ ಚುನಾವಣೆಗಳಲ್ಲಿ ಸಕ್ರಿಯವಾಗಿ ಜನತಾ ಪಕ್ಷವನ್ನು ಬೆಂಬಲಿಸುವ ನಿರ್ಧಾರ ತೆಗೆದುಕೊಂಡಿತ್ತು. ಅದುವರೆಗೆ ದಲಿತ ಸಂಘರ್ಷ ಸಮಿತಿ ಎಂದೂ ಯಾವುದೇ ಪಕ್ಷದ ಪರ ಅಥವಾ ವಿರುದ್ಧ ನಿಂತಿರಲಿಲ್ಲ. ೧೯೮೪ರಲ್ಲಿ ಇಂದಿರಾ ಗಾಂಧಿ ಹತ್ಯೆಯಾಗಿತ್ತು. ಆಗ ದಲಿತರ 'ಕಾಂಗ್ರೆಸ್ ಜೀತ'ವನ್ನು ಕೊನೆಗಾಣಿಸಲೆಂದು ಸಂಘಟನೆ ಅದೇ ಮೊದಲ ಬಾರಿ ನಿರ್ದಿಷ್ಟ ರಾಜಕೀಯ ನಿಲುವು ತಳೆಯಿತು. ಅಷ್ಟೇ ಅಲ್ಲ, ತನ್ನ ರಾಜಕೀಯ ನಿರ್ಣಯದ ಫಲವಾಗಿ ೮೫ರ ಚುನಾವಣೆಯಲ್ಲಿ ಸಕ್ರಿಯವಾಗಿ ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿತು ಕೂಡ. ಈ ಹೊಸ ಅನುಭವ ಸಂಘಟನೆಯ ಸ್ವರೂಪದಲ್ಲಿ ಮೂಲಭೂತ ಬದಲಾವಣೆಯೊಂದನ್ನು ತಂದುಬಿಟ್ಟಿತು. ಅದೇ ಚುನಾವಣೆಯಲ್ಲಿ ಜನತಾ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದ ಮೇಲಂತೂ ಸಂಘಟನೆಯ ಸ್ವರೂಪವೇ ಬದಲಾಗಿಹೋಯಿತು.

ಸಂಘಟನೆಯ ನಾಯಕರು ಮತ್ತು ಕಾರ್ಯಕರ್ತರು, ಮೊದಲ ಬಾರಿ ಹಿಂದೆಂದೂ ಇಲ್ಲದ ಮಟ್ಟಿಗೆ ಅಧಿಕಾರ ಕೇಂದ್ರದ ಸಮೀಪ ಬಂದರು. ಆ ಅಧಿಕಾರ ಸಹಜವಾಗಿ ಇವರ ಅಸ್ಥಿಗಳಲ್ಲೇ ಸಂಚರಿಸತೊಡಗಿತು. ಫಲವಾಗಿ ಸಂಘಟನೆ ಒಂದು ಲಾಭದಾಯಕ ಹೂಡಿಕೆಯಾಗಿ, ಆಸ್ತಿಯಾಗಿ ಕಾಣತೊಡಗಿತು; ಅದನ್ನು ಹಂಚಿಕೊಳ್ಳಬಾರದೆಂಬ ಸ್ವಾರ್ಥ ಕೆಲವರಲ್ಲಾದರೂ ಮೊಳಕೆಯೊಡೆಯಿತು. ಅದರ ಪರಿಣಾಮವೇ ಆ ಪ್ರಶ್ನೆ– ದಲಿತ ಸಂಘಟನೆಯಲ್ಲಿ ದಲಿತೇತರರಿಗೇನು ಕೆಲಸ?...

ಅಲ್ಲಿಗೆ ಜಾತಿವಿನಾಶದ ಮಹಾ ಕನಸು ಶಾಶ್ವತವಾಗಿ ಕಣ್ಣು ಮುಚ್ಚಿತು.

*

ಸಾಮಾಜಿಕ ನ್ಯಾಯ ಅಂದ ಕೂಡಲೇ ನನ್ನ ಮನಸ್ಸಿನಲ್ಲಿ ಬರೀ ಗೊಂದಲಗಳೇ.

ಭಾರತೀಯ ಸಂವಿಧಾನವನ್ನು ಸ್ವೀಕರಿಸುವಾಗ ಅಂಬೇಡ್ಕರ್ ಪ್ರವಾದಿಯಂತೆ ಹೇಳಿದ ಪ್ರಸಿದ್ಧ ಮಾತುಗಳನ್ನು ಇಲ್ಲಿ ನೆನೆಯಬೇಕು:

ಇಂದು ನಾವು ವಿರೋಧಾಭಾಸದ ಯುಗವೊಂದನ್ನು ಪ್ರವೇಶಿಸುತ್ತಿದ್ದೇವೆ. ದೇಶದಲ್ಲಿ ರಾಜಕೀಯ ಸಮಾನತೆಯನ್ನು ಸಾಧಿಸಿಯಾಯಿತು. ಆದರೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಹಾಗೇ ಮುಂದುವರೆದಿದೆ. ಈ ವಿರೋಧಾಭಾಸವೇ ಭಾರತೀಯ ಸಮಾಜದ ಎದುರು ಬಹು ದೊಡ್ಡ ಸವಾಲಾಗಿ ನಿಲ್ಲಲಿದೆ...

ನಿಖರವಾಗಿ ಇವೇ ಮಾತುಗಳು ಎಂದಲ್ಲ. ಭಾವ ಇದೇ. ಒಟ್ಟಿನಲ್ಲಿ ಅಂಬೇಡ್ಕರ್ ಎತ್ತಿ ತೋರಿದ ಈ ಬೀಜರೂಪದ ವಿರೋಧಾಭಾಸವನ್ನು ನಿವಾರಿಸುವುದೇ ಸಾಮಾಜಿಕ ನ್ಯಾಯ ಎಂದು ನಾವು ಅರ್ಥ ಮಾಡಿಕೊಳ್ಳಬಹುದು.

ಆದರೆ ಅದನ್ನು ಸಾಧಿಸುವುದು ಹೇಗೆ? ಅದಕ್ಕೇ ಆರಂಭಿಕ ಕ್ರಮವಾಗಿ, ಅಂಬೇಡ್ಕರ್ ಪುಣೆ ಒಪ್ಪಂದವನ್ನು ಅಳವಡಿಸಿಕೊಂಡ ಮೀಸಲಾತಿ ನೀತಿ ತಂದರು. ಸ್ವಾತಂತ್ರ್ಯ ಬಂದ ಹೊಸದರಲ್ಲಿ ದಲಿತರಿಗೆ ಮಾತ್ರ ಮೀಸಲಾಗಿದ್ದ ಮೀಸಲಾತಿ, ಕ್ರಮೇಣ ಹಿಂದುಳಿದ ವರ್ಗಗಳಿಗೂ ವಿಸ್ತರಣೆಯಾಯಿತು. ಅದೇನು ವಿಶೇಷವೂ ಅಲ್ಲ, ಅನಪೇಕ್ಷಿತವೂ ಅಲ್ಲ. ಹಾಗೆ ನೋಡಿದರೆ ಮೈಸೂರು ಸಂಸ್ಥಾನದಲ್ಲಿ ಮೊದಲು ಮೀಸಲಾತಿ ಹೋರಾಟ ಆರಂಭಿಸಿದವರು ಸ್ಥಳೀಯ ಬ್ರಾಹ್ಮಣರು. ಅಂದರೆ ಇಡೀ ಆಡಳಿತಯಂತ್ರವನ್ನು ಆಕ್ರಮಿಸಿಕೊಂಡಿದ್ದ ತಮಿಳು ಬ್ರಾಹ್ಮಣರ ಏಕಸ್ವಾಮ್ಯದ ವಿರುದ್ಧ ಕನ್ನಡಿಗ ಬ್ರಾಹ್ಮಣರು ಮೀಸಲಾತಿಗಾಗಿ ಒತ್ತಾಯ ತಂದರು. **ಹಾಗಾಗಿ ಕನ್ನಡದ ನೆಲದಲ್ಲಿ ನಡೆದ ಮೊದಲ ಮೀಸಲಾತಿ ಚಳವಳಿ, ಕನ್ನಡಿಗ ಬ್ರಾಹ್ಮಣರದ್ದು.** ಕಾಲ ಸರಿದಂತೆ ಮಿಲ್ಲರ್ ಸಮಿತಿ ಮೂಲಕ ಆಡಳಿತ ವ್ಯವಸ್ಥೆಯಲ್ಲಿ ಬ್ರಾಹ್ಮಣೇತರರನ್ನೂ ಒಳಗೊಳ್ಳುವಂತಾದದ್ದು, ಮೀಸಲಾತಿಯ ಎರಡನೇ ಹಂತ.

ಮುಂದಕ್ಕೆ ನಾವು ಮೀಸಲಾತಿಯನ್ನೂ ಜಾತಿವಿನಾಶದ ಅಸ್ತ್ರವಾಗಿಯೇ ನೋಡುತ್ತ ಬಂದೆವು. ಆದರೆ ದಲಿತ ಚಳವಳಿ ಹುಟ್ಟಿಸಿದ್ದ ಜಾತಿವಿನಾಶದ ಕನಸು ಕಮರಿ ಹೋದ ಮೇಲೆ ಸಾಮಾಜಿಕ ನ್ಯಾಯದ ಸೊಲ್ಲು ಕೂಡ ಸಿಕ್ಕ ಸಿಕ್ಕ ದಿಕ್ಕುಗಳಲ್ಲಿ ದಿಕ್ಕೆಟ್ಟು ಅಲೆಯತೊಡಗಿತು ಅನಿಸುತ್ತದೆ. ಅದಕ್ಕೇ ಜಾತಿವಿನಾಶದ ಮಾತು ಒಂದು ಹಂತದಲ್ಲಿ ಜಾತಿಗಳ ಸಮಾನತೆಯ ಪ್ರಶ್ನೆಯಾಗಿ ಬದಲಾಯಿತು. ಆಗ ಕೆ. ರಾಮದಾಸ್ 'ಏನ್ರೀ ಇದು? ನಾವು ಜಾತಿ ಹೋಗಲಿ ಅಂತಂದ್ರೆ, ಇವರು ಜಾತಿಗಳ ನಡುವೆ ಸಮಾನತೆ ಬರಲಿ ಅಂತಿದ್ದಾರಲ್ಲ?' ಎಂದು ರೇಗಿದ್ದರು.

ಆಗಲೂ ನನಗೆ ಗೊಂದಲವುಂಟಾಗಿತ್ತು. ಜಾತಿವಿನಾಶ ಅಂದರೆ ಅದು ಜಾತಿ ಶ್ರೇಣಿಯ– ಮೇಲು ಕೀಳು ಭಾವದ– ನಾಶ ಅನ್ನುವುದಾದರೆ, ಜಾತಿಗಳ ಸಮಾನತೆ (ಅಂಥದ್ದೊಂದು ಸಾಧ್ಯವಾಗುವುದಾದರೆ) ಕೂಡ ಜಾತಿಗಳ ನಡುವಣ ಮೇಲು ಕೀಳು ಭಾವಗಳನ್ನು ತೊಡೆಯುವುದಾದ್ದರಿಂದ, ಅದೇ ನಾಳೆ ಸಂಪೂರ್ಣ ಜಾತಿವಿನಾಶಕ್ಕೆ ದಾರಿ ಮಾಡಿಕೊಡಲಾರದೇ? ನಾನು ಹೀಗೂ ಯೋಚಿಸಿದ್ದುಂಟು! ಗೆಳೆಯ ಕೆ.ಬಿ. ಸಿದ್ದಯ್ಯನವರ ಜೊತೆ ಈ ವಿಷಯ ಒಮ್ಮೆ ಚರ್ಚಿಸಿಯೂ ಇದ್ದೆ. ಒಂದು ರೀತಿ 'ಜಾತಿಗಳು ಎಂದೂ ಹೋಗಲಾರವೇನೋ' ಎಂಬ ಹತಾಶೆಯೂ ಈ ಅರೆಬರೆ ರಾಜಿ ಮನೋಭಾವದ ಹಿಂದೆ ಇದ್ದಿರಬಹುದು....

ಈಗಂತೂ ಪರಿಸ್ಥಿತಿ ಇನ್ನೂ ಹದಗೆಟ್ಟುಹೋಗಿದೆ. ಈಗ ಸಾಮಾಜಿಕ ನ್ಯಾಯದ ಮಾತಾಡುತ್ತಿರುವವರು ಯಾರೂ ಇಡೀ ಸಮಾಜವನ್ನು ಮನಸ್ಸಿನಲ್ಲಿಟ್ಟುಕೊಂಡು ತಮ್ಮ ವಾದಗಳನ್ನು ಮುಂದಿಡುತ್ತಿಲ್ಲ; ಬದಲಿಗೆ ಅಣು ಅಣುವೂ ಜಾತಿಪ್ರಜ್ಞೆಯಲ್ಲಿ ಮಿಂದೆದ್ದ ಈ ಸಮಾಜದಲ್ಲಿ ತಮ್ಮ ಜಾತಿಗೆ ಸಲ್ಲಬೇಕಾದ ನ್ಯಾಯದ ಮಾತಾಡುತ್ತಾರೆ...

ಹಾಗೆ ಸಮಾಜದ ಎಲ್ಲರಿಗೂ, ಅಂದರೆ ಎಲ್ಲ ಜಾತಿಗಳಿಗೂ ಬದುಕಿನ ಅವಕಾಶಗಳು ಸಿಗಬೇಕು ಎಂಬುದರಲ್ಲೇನೂ ಅನುಮಾನವಿಲ್ಲ. ಹಾಗಾಗಿ ಒಳ ಮೀಸಲಾತಿ ವಿರುದ್ಧ ಮಾತಾಡುವುದೂ ಕಷ್ಟವೇ. ಆದರೆ ಮೂಲತಃ ಜಾತಿವಿನಾಶವನ್ನು ಬಯಸುವ ಮನಸ್ಸು– ಅವಕಾಶಗಳನ್ನು 'ದೋಚುವ' ಬದಲು 'ಬಿಟ್ಟುಕೊಡುವ' ಅಂದರೆ 'ತ್ಯಾಗಕ್ಕೆ ಹಿಂಜರಿಯದ'– ಮನಸ್ಸಾಗಿರುತ್ತದೆ ಎಂಬುದು ನನ್ನ ಗ್ರಹಿಕೆ. ಅದು ಒಂದು ಲೋಟ ನೀರು ಹಂಚಿಕೊಳ್ಳುವ ಮನಸ್ಸು. ಅದು ಸ್ವಾರ್ಥಸಾಧನೆಯ ಜಿದ್ದಿನ ಮನಸ್ಸಾಗಿರುವುದು ಸಾಧ್ಯವಿಲ್ಲ. ಅಥವಾ ಹಾಗೆ ಅಂದುಕೊಳ್ಳುವುದೂ ತಪ್ಪಿರಬಹುದೇ?... ಮತ್ತೆ ಗೊಂದಲ!

ಆದರೆ ನಾವು ಎಂಥ ಕಾಲಘಟ್ಟದಲ್ಲಿ ಬದುಕಿದ್ದೇವೆ ನೋಡಿ: ಅಂಬೇಡ್ಕರ್ ಒಬ್ಬ ಈಡಿಯಟ್ ಎಂದು ಕರೆದು, ಮೀಸಲಾತಿಗೆ ಆತುಕೊಂಡವರನ್ನು ಮುಟ್ಠಾಳರು ಎಂದು ಜರೆಯುವವರನ್ನು 'ಸಂಶೋಧಕರು' ಅನ್ನುತ್ತಿದ್ದೇವೆ; ದೇಶ ಹಾಳಾಗಿರುವುದೇ ಮೀಸಲಾತಿಯಿಂದ ಎಂದು ನಿರ್ಭಿಡೆಯಿಂದ ತೀರ್ಪು ಬರೆಯುವ ನ್ಯಾಯಾಧೀಶರಿದ್ದಾರೆ. ನಮ್ಮ ಸಾರ್ವಜನಿಕ ಜೀವನವನ್ನು ಇಂಥವರೇ ಆವರಿಸಿಕೊಂಡಿದ್ದಾರೆ. ಅತ್ತ ಆರೆಸ್ಸೆಸ್ ಮುಖ್ಯಸ್ಥ ಮೋಹನ ಭಾಗವತ್, 'ಮೀಸಲಾತಿ ಬಗ್ಗೆ ಮರುಚಿಂತನೆ ನಡೆಯಲಿ' ಎಂದು ನಿಗೂಢವಾಗಿ ಅಪ್ಪಣೆ ಕೊಡುತ್ತಿದ್ದಾರೆ.



ಇಂಥ ವಾತಾವರಣದಲ್ಲಿ ಸಾಮಾಜಿಕ ನ್ಯಾಯದ ವ್ಯಾಖ್ಯಾನವೇ ದಾರಿ ತಪ್ಪುತ್ತಿದೆ ಎಂದು ಹಲುಬಲೋ ಅಥವಾ, ಸಾಮಾಜಿಕ ನ್ಯಾಯವನ್ನೇ ನುಂಗಿ ಹಾಕಲು ತಯಾರಾದವರ ಬಗ್ಗೆ ತಲೆ ಕೆಡಿಸಿಕೊಳ್ಳಲೋ ಗೊತ್ತಾಗುತ್ತಿಲ್ಲ. ಕ್ಷಮಿಸಿ.

**( ರಾಜ್ಯದ ದಲಿತ ಮತ್ತು ರೈತ ಚಳುವಳಿಗಳೊಂದಿಗೆ ಆಪ್ತ ಒಡನಾಟವಿಟ್ಟುಕೊಂಡಿದ್ದ ಎಸ್.ಎಸ್. ಶಂಕರ್ ಹಿರಿಯ ಪತ್ರಕರ್ತರೂ, ಚಲಚಿತ್ರ ನಿರ್ದೇಶಕರೂ ಮತ್ತು ಸೃಜನಶೀಲ ಲೇಖಕರೂ ಹೌದು)**

~~~~~~~~~~~~~~~~~~~~~~~~~~~~~~~~~~~~~~~~~~~~~

**ಹೊಸ ಚಂದಾದಾರರಿಗೆ ಸೂಚನೆ**

**ಪತ್ರಿಕೆಗೆ ಚಂದಾದಾರರಾಗಬಯಸುವವರು (ಡಿಸೆಂಬರ್, ೨೦೧೫– ಆಗಸ್ಟ್, ೨೦೧೬) ತಮ್ಮ ಚಂದಾ ಹಣವನ್ನು (ರೂ. ೧೪೦/–) ಶಿವಮೊಗ್ಗದ ಎಸ್.ಬಿ.ಎಂ.ನ (IFSC ಕೋಡ್: SBMY 0040444) ವಿನೋಬನಗರ ಶಾಖೆಯಲ್ಲಿ 'ಸಂಪಾದಕರು ಹೊಸ ಮನುಷ್ಯ' ಹೆಸರಿನಲ್ಲಿರುವ ಚಾಲ್ತಿ ಖಾತೆ ಸಂಖ್ಯೆ: 64110358330 ಇಲ್ಲಿಗೆ ವರ್ಗಾಯಿಸಿ/ಜಮಾ ಮಾಡಿ 9449242284 –ಈ ಸಂಖ್ಯೆಗೆ ಕರೆ ಮಾಡಿ ತಿಳಿಸಬೇಕು ಅಥವಾ ಸಂದೇಶ ಕಳಿಸಬಹುದು.**–ಸಂ.
~~~~~~~~~~~~~~~~~~~~~~~~~~~~~~~~~~~~~~~~~~~~~

# ಜಾತಿ ಮೀಸಲಾತಿ: ಪತ್ರಿಕೆಯ ಒಂದು ಪುಟ್ಟ ಸಮೀಕ್ಷೆ

**ಸಾ**ಮಾಜಿಕ ನ್ಯಾಯದ ಮುಖ್ಯ ಸಾಧನವಾದ ಜಾತಿ ಆಧಾರಿತ ಮೀಸಲಾತಿಯ ಸ್ವರೂಪ, ವ್ಯಾಪ್ತಿ, ಜಾರಿಯ ವಿಧಾನಗಳ ಬಗೆಗಲ್ಲದೆ ಇದರ, ಸಫಲತೆಯ ಪ್ರಮಾಣ ಮತ್ತು ಅದರ ಅವಧಿ ಹಾಗೂ ಒಟ್ಟಾರೆ ಜಾತಿ ಮೀಸಲಾತಿ ನೀತಿಯ ಒಂದು ಸಕಾಲಿಕ ಪರಿಷ್ಕರಣೆಯ ಅಗತ್ಯದ ಬಗೆಗೆ ಈಗ ಸಾಕಷ್ಟು ಮಾತುಗಳು ಕೇಳಿಬರುತ್ತಿವೆ. ಎಲ್ಲಕ್ಕಿಂತ ಮುಖ್ಯವಾಗಿ ಈ ನೀತಿ ತನ್ನ ಗುರಿಗೆ ತದ್ವಿರುದ್ಧವಾದ ಪರಿಣಾಮ ಉಂಟು ಮಾಡುತ್ತಿದೆಯೆಂಬ ಅನುಮಾನಗಳೂ ವ್ಯಕ್ತವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಪತ್ರಿಕೆ, ನಮ್ಮ ಓದುಗರ ಮಧ್ಯೆ ಜಾತಿ ಮೀಸಲಾತಿ ಕಾರ್ಯಕ್ರಮವನ್ನು ಕುರಿತ ಮೂರು ಮುಖ್ಯ ಪ್ರಶ್ನೆಗಳ ಮೂಲಕ ಒಂದು ಪುಟ್ಟ ಸಮೀಕ್ಷೆ ಮಾಡಲು ಇಲ್ಲಿ ಯತ್ನಿಸಿದೆ.

ಈ ಕೆಳಗಿನ ಮೂರು ಪ್ರಶ್ನೆಗಳನ್ನು ವಿವಿಧ ಸಾಮಾಜಿಕ ಹಿನ್ನೆಲೆಗಳ ಇಪ್ಪತ್ತು ಜನರಿಗೆ ಸಂಕ್ಷಿಪ್ತ ಉತ್ತರ ನೀಡಲು ಕಳಿಸಲಾಯಿತು. ಅವರಲ್ಲಿ ಕೆಲವರು ಮಾತ್ರ ಉತ್ತರಿಸಿದ್ದಾರೆ. ಗಮನಿಸಬೇಕಾದ ಸಂಗತಿಯೆಂದರೆ, ಪರಿಶಿಷ್ಟ ಜಾತಿ ಹಿನ್ನೆಲೆಯ ಯಾರೂ ಉತ್ತರ ಕಳಿಸಿಲ್ಲ! ವಿವಾಹದ ಮೂಲಕ ಅಂತಹ ಕುಟುಂಬಕ್ಕೆ ಸೇರಿದ ಒಬ್ಬರು ಪತ್ರಿಕೆಯ ಆಗ್ರಹದ ನಂತರವಷ್ಟೇ ಉತ್ತರಗಳನ್ನು ಕಳಿಸಿದ್ದಾರೆ. ಮಿಕ್ಕವರದ್ದು ನೀರವ ಮೌನ! ಇನ್ನು ಮೀಸಲಾತಿಯ ಫಲಾನುಭವಿಗಳಲ್ಲದ ಒಂದಿಬ್ಬರು, ತಾವು ಈ ಪ್ರಶ್ನೆಗಳಿಗೆ ಪ್ರಾಮಾಣಿಕ ಉತ್ತರ ನೀಡಿದರೆ ತಾವು ಕೂತಿರುವ ಕುರ್ಚಿ ಅಲ್ಲಾಡಿ ಹೋಗುತ್ತದೆ ಎಂಬ ಆತಂಕ ವ್ಯಕ್ತಪಡಿಸಿ ಉತ್ತರ ಕೊಡಲಾಗದ್ದರ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಅದೇನೇ ಇದ್ದರೂ, ನಮ್ಮ ಪ್ರಶ್ನೆಗಳಿಗೆ ಇಲ್ಲಿ ವೈವಿಧ್ಯಮಯ ಮತ್ತು ಆಲೋಚನೆಗೆ ಅರ್ಹವಾದ ಹಲವು ಉತ್ತರಗಳು ಬಂದಿವೆ. ಓದಿ, ಬರೆಯಿರಿ –ಸಂ

**ನಮ್ಮ ಪ್ರಶ್ನೆಗಳು**

**೧. ಈಗ ಜಾರಿಯಲ್ಲಿರುವ ಮೀಸಲಾತಿ ನೀತಿ ಒಂದು ಪಟ್ಟಭದ್ರ ಹಿತಾಸಕ್ತಿಯಾಗಿ ಮಾರ್ಪಟ್ಟು ಜಾತಿವ್ಯವಸ್ಥೆಯನ್ನು ಗಟ್ಟಿಕೊಳಿಸುತ್ತಿರುವ ಮೂಲಕ ಮೀಸಲಾತಿಯನ್ನು ಶಾಶ್ವತ ವ್ಯವಸ್ಥೆಯನ್ನಾಗಿ ಮಾಡುತ್ತಿರುವಂತೆ ತೋರುತ್ತಿಲ್ಲವೇ?**

**೨.. ಮೀಸಲಾತಿ ವ್ಯವಸ್ಥೆಯನ್ನು ಹತ್ತು ವರ್ಷಗಳ ನಂತರ ಪುನರಾವಲೋಕನ ಮಾಡಬೇಕೆಂಬ ಅಂಬೇಡ್ಕರ್ ಅವರ ಅಭಿಪ್ರಾಯ ಮತ್ತು ಮೀಸಲಾತಿ ಜಾರಿಯ ಈವರೆಗಿನ ಅನುಭವಗಳ ಹಿನ್ನೆಲೆಯಲ್ಲಿ ಮೀಸಲಾತಿ ನೀತಿಯ ಪುರ್ನವಿಮರ್ಶೆ ಅಗತ್ಯವಿದೆ ಎನಿಸುವುದಿಲ್ಲವೇ? ಹಾಗೆಂದು ಅನಿಸಿದಲ್ಲಿ ಪುರ್ನವಿಮರ್ಶೆ ಯಾವ ಚೌಕಟ್ಟಿನಲ್ಲಾಗಬೇಕಿದೆ?**

**೩. ಸಾಮಾಜಿಕ ಸಮಾನತೆಯ ಸಾಧನೆಗೆ ಮೀಸಲಾತಿಯೊಂದೇ ಪರಿಹಾರವಾಗಿದ್ದು ಇದರ ಹೊರತಾಗಿ/ಜೊತೆಯಲ್ಲಿ ಬೇರೆ ರೀತಿಯ ಪ್ರಯತ್ನಗಳು/ ಸಾಧ್ಯತೆಗಳಾವುವೂ ಇಲ್ಲವೆಂದು ನೀವು ಭಾವಿಸಿದ್ದೀರಾ? ಸಾಧ್ಯತೆಗಳು ಇದ್ದರೆ ಅವು ಯಾವುವು?**

## ಮೀಸಲಾತಿ ಪಡೆಯದ ಕುಟುಂಬಗಳಿಗೆ ಮಾತ್ರ ಸೌಲಭ್ಯ ಇರಲಿ.

೧)ಸರ್ವೋಚ್ಚ ನ್ಯಾಯಾಲಯ ಕೆಲವು ಕ್ಷೇತ್ರಗಳು ಹಾಗು ಒಟ್ಟಾರೆ ಮೀಸಲಾತಿಗೆ ಮಿತಿಯನ್ನು ಹೇರಿರದಿದ್ದರೆ ಸರಕಾರಗಳು ಇಷ್ಟರಲ್ಲೆ ಮೀಸಲಾತಿಯನ್ನು ತಮ್ಮದೇ ಪಟ್ಟಭದ್ರ ಕಾರಣಗಳಿಗಾಗಿ ಶೇ .ನೂರರಷ್ಟು ಮಾಡಿರುತ್ತಿದ್ದವು. ಆದರೂ ಸರಕಾರಗಳು ಮೀಸಲಾತಿ ಮಿತಿಯನ್ನು ಹಿಗ್ಗಿಸಲು ಹವಣಿಸುತ್ತಲೇ ಇರುತ್ತವೆ. ಮೀಸಲಾತಿ ಅನ್ನುವದು ಈಗ ದೈನಂದಿನ ವಾಸ್ತವ. ಮೀಸಲಾತಿ ಅನ್ನುವುದೇ ಇಂದು ಚರ್ಚಿಸಲಾಗದಷ್ಟು ಸೂಕ್ಷ್ಮ ವಿಷಯವಾಗಿಬಿಟ್ಟಿದೆ. ನಮ್ಮಲ್ಲಿ ಜಾತಿ ವ್ಯವಸ್ಥೆ ಇರುವವರೆಗೆ ಮೀಸಲಾತಿ ಇರಬೇಕೆಂಬ ವಾದವಿದೆ. ಜಾತಿ ವ್ಯವಸ್ಥೆ ತ್ವರಿತವಾಗಿ ನಶಿಸುವ ಸಂಭವವಿಲ್ಲ. ಅದನ್ನು ನಶಿಸಲು ಬಿಡದಿರುವ ರಾಜಕಾರಣ, ಧರ್ಮಕಾರಣಗಳು ಇದ್ದೇ ಇವೆ. ಇನ್ನೂ ಒಳ ಮೀಸಲಾತಿಗಳ ಪರ್ವ ಆರಂಭಗೊಳ್ಳಲಿದೆ. ಕೆಲವು ಬಲಿಷ್ಠ ಜಾತಿಗಳು ಮೀಸಲಾತಿಗಾಗಿ ಹೋರಾಡುತ್ತಿವೆ. ಹೀಗಾಗಿ ಜಾತಿ ಮತ್ತು ಮೀಸಲಾತಿಗಳು ಪರಸ್ಪರಾವಲಂಬಿಗಳಾಗಿ ಎರಡೂ ಇನ್ನೂ ಗಟ್ಟಿಗೊಳ್ಳುವ ಸಂಭವವೇ ಹೆಚ್ಚು.

೨) ಮೀಸಲಾತಿಯ ಪ್ರಯೋಜನ ಪಡೆದು ರಾಜ್ಯ ಅಥವಾ ಕೇಂದ್ರ ಸರಕಾರದಲ್ಲಿ ಒಂದು ಅಥವಾ ಎರಡನೆ ದರ್ಜೆ ಅಧಿಕಾರ, ಸಮಾನಂತರ ಹುದ್ದೆ ಹೊಂದಿದ ಕುಟುಂಬಗಳನ್ನು ಮೀಸಲಾತಿಯಿಂದ ಹೊರಗಿಟ್ಟು ಇನ್ನೂ ಮೀಸಲಾತಿ ಸೌಲಭ್ಯ ಪಡೆಯದ ಕುಟುಂಬಗಳಿಗೆ ಮಾತ್ರ ಮಿಸಲಾತಿ ಮುಂದುವರಿಸಬಹುದಾಗಿದೆ. ಇದು ಪ. ಜಾ.ಪ.ಪಂ.ಗಳಿಗೂ ಅನ್ವಯವಾಗಬೇಕು. ಕೆನೆ ಪದರಿನ ಕುಟುಂಬಗಳನ್ನು ಬೇರ್ಪಡಿಸುವ ಕೆಲಸ ಪರಿಣಾಮಕಾರಿಯಾಗಿ ಮಾಡಿ, ಇನ್ನು ಮೀಸಲಾತಿ ಪ್ರಯೋಜನ ಸಿಗದವರಿಗೆ ಮೀಸಲಾತಿ ಸೌಲಭ್ಯ ದೊರಕುವಂತೆ ಮಾಡುವುದೇ ಮೀಸಲಾತಿ ನೀತಿಯನ್ನು ಪುನರ್ವಿಮರ್ಶಿಸಿದಂತೆ..

೩) ಬಹಳ ಸಂಕೀರ್ಣ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸಂರಚನೆಯ ನಮ್ಮ ಸಮಾಜದಲ್ಲಿ ಮೀಸಲಾತಿ ವ್ಯವಸ್ಥೆ ಹೊರತಾದ ಸಮಾನತೆಯ ಸಾಧ್ಯತೆಗಳು ಬಹಳ ಕಡಿಮೆ ಎಂದೇ ಹೇಳಬೇಕು. ಮೀಸಲಾತಿಗಿಂತ ಕಠಿಣ ಪರಿಶ್ರಮ, ಸ್ವಾಭಿಮಾನದ ನೇರ ನಡೆ ಉನ್ನತಿಯ ಉಚಿತ ಮಾರ್ಗ. ಆದರೆ ಅದು ಯಾರಿಗೆ ಬೇಕು?



**–ವೆಂಕಟೇಶ ಮಾಚಕನೂರ,** ಶಿಕ್ಷಣ ಇಲಾಖೆಯ ನಿವೃತ್ತ ಆಯುಕ್ತರು ಮತ್ತು ಲೇಖಕರು, ಧಾರವಾಡ

## ಮೀಸಲಾತಿಯ ವಿಸರ್ಜನೆಗೆ ಮೊದಲು ಜಾತಿ ವಿಸರ್ಜನೆಯಾಗಲಿ

ಜಾತಿ ವ್ಯವಸ್ಥೆ' ಇರುವವರೆಗೆ ಮೀಸಲಾತಿ ಆಗಲಿ ಅಥವಾ ಇನ್ನಾವುದೇ ಸರಕಾರೀ ಯೋಜನೆಯಾಗಲೀ ನಮ್ಮನ್ನು ಸಾಮಾಜಿಕ ಸಮಾನತೆಯೆಡೆಗೆ ಕೊಂಡೊಯ್ಯುವುದು ಅಸಾಧ್ಯ. ಯಾವ ಕೆಳಜಾತಿಗಳಿಗೂ ಜಾತಿವ್ಯವಸ್ಥೆಯಲ್ಲಿ ಮತ್ತು ಅದರ ಶ್ರೇಣೀಕರಣದಲ್ಲಿ ನಂಬಿಕೆಯಾಗಲೀ, ಗೌರವವಾಗಲೀ ಇಲ್ಲ. ಇದು ಬೇಕಿರುವುದು ಸಮಾಜದಲ್ಲಿನ ಮೇಲ್ಜಾತಿಗಳಿಗೆ. ಹಾಗಾಗಿ ಅವುಗಳು ಈ ಜಾತಿವ್ಯವಸ್ಥೆ ಹೀಗೇ ಇರಲಿ ಎಂದು ಬಯಸುತ್ತವೆ.

ಈ ಮೇಲ್ಜಾತಿಗಳು ತಪ್ಪಿಯೂ ಮೀಸಲಾತಿಯನ್ನು ಪುನರ್‌ಪರಿಶೀಲಿಸುವುದಕ್ಕಿಂತ ಮೊದಲು ಜಾತಿಯನ್ನು ಮರುಪರೀಶೀಲಿಸುವ. ಮೀಸಲಾತಿಯನ್ನು ವಿಸರ್ಜಿಸುವ ಮೊದಲು ಜಾತಿಯನ್ನು ವಿಸರ್ಜಿಸುವ ಎಂದ ಉದಾಹರಣೆಯೇ ಇಲ್ಲ. ಭಾರತದ ಎಲ್ಲ ಮೇಲ್ಜಾತಿಗಳು ಸಾಮಾಜಿಕವಾಗಿ ತಾವಿರುವ ಉನ್ನತ ಸ್ಥಾನದ ಸುಖವನ್ನು ಕಳೆದುಕೊಳ್ಳುವುದನ್ನು ಸಾಮಾನ್ಯವಾಗಿ ಇಷ್ಟಪಡಲ್ಲ. 'ನಿನ್ನನ್ನು ಜಿಲ್ಲಾಧಿಕಾರಿಯನ್ನಾಗಿ ಮಾಡುತ್ತೇನೆ. ಆದರೆ ಅದಕ್ಕಿಂತ ಮೊದಲು ನೀನು ಮಾದಿಗನಾಗು' ಎಂದರೆ ಮುಂದೆ ಬರುವ ಒಬ್ಬನೇ ಒಬ್ಬ ತರುಣ/ತರುಣಿ ಈ ದೇಶದಲ್ಲಿ ಇನ್ನೂ ಹುಟ್ಟಿಲ್ಲ. ಪರಿಸ್ಥಿತಿ ಹೀಗಿರುವಾಗ ಎಲ್ಲಿಯವರೆಗೆ ಜಾತಿ ವ್ಯವಸ್ಥೆ ಇರುತ್ತದೋ ಅಲ್ಲಿಯವರೆಗೆ ಮೀಸಲಾತಿ ಇರುವುದೇ ಸೂಕ್ತ.

ಮೀಸಲಾತಿ ಎನ್ನುವುದು ಒಂದು ರಾಜಕೀಯ ಕಾರ್ಯಕ್ರಮ ಅಲ್ಲ. ಅದೊಂದು ನ್ಯಾಯದಾನ ಪ್ರಕ್ರಿಯೆ. ಪ್ರಕೃತಿಯಲ್ಲಿ ಸಹಜನ್ಯಾಯ ಅನ್ನುವುದೊಂದು ಇದೆ. ಆದರೆ ಸಂಸ್ಕೃತಿಯಲ್ಲಿ ಸಹಜನ್ಯಾಯ ಇಲ್ಲ. ಇಲ್ಲಿ ನ್ಯಾಯವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಅಂತಹ ನ್ಯಾಯವೊಂದನ್ನು ಒತ್ತಾಯದಿಂದಲಾದರೂ ಸಮಾಜದ ಮೇಲೆ ಹೇರಿ ಸಮಾಜವನ್ನು ಹೊರಗಿನಿಂದ ಬದಲಾಯಿಸುವಂತಹ ಒಂದು ರಾಜಕೀಯ ಕ್ರಿಯಾಚರಣೆಯನ್ನು ಪ್ರಭುತ್ವ ಕೈಗೊಂಡಿದೆ. ಇದು ರಾಜಕೀಯ ಕಾರ್ಯಕ್ರಮ ಆಗದೆ ನೈತಿಕ ಕಾರ್ಯಕ್ರಮ ಆಗಿ ಬದಲಾಗಬೇಕಿದ್ದರೆ ಮನುಷ್ಯ ಮೂಲಭೂತವಾಗಿ 'ಒಳ್ಳೆಯವನಾಗಬೇಕು'. ಈ ಒಳ್ಳೆಯತನ ಅಥವಾ ಸಾರ್ಥಕ ಜೀವನವನ್ನು ನಾವೆಲ್ಲರೂ ಮನಸಾರೆ ಒಪ್ಪಿ ನಮ್ಮದನ್ನಾಗಿಸುವವರೆಗೆ ಮೀಸಲಾತಿಯೂ, ಸಾಮಾಜಿಕ ನ್ಯಾಯವೂ ಎಲ್ಲವೂ ನಮ್ಮ ಜೊತೆಜೊತೆಗೇ ಇರಬೇಕು.



**–ಡಾ. ನಿತ್ಯಾನಂದ ಬಿ. ಶೆಟ್ಟಿ,** ಕನ್ನಡ ಅಧ್ಯಾಪಕರು, ಲೇಖಕರು ಮತ್ತು ಚಿಂತಕರು, ತುಮಕೂರು

## ಮೀಸಲಾತಿ ರಾಜಕೀಯವು ಜಾತಿವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿದೆ

೧) ಮೀಸಲಾತಿಯ ಉದ್ದೇಶ ಸಮಸಮಾಜದ ನಿರ್ಮಾಣ. ಎಂದೇ ವ್ಯಕ್ತಿಗತ ಉನ್ನತೀಕರಣಕ್ಕೆ ಉದ್ಯೋಗ/ಶಿಕ್ಷಣ ಮೀಸಲಾತಿ ಹಾಗೂ ಸಮುದಾಯ ಸಬಲೀಕರಣ ಮತ್ತು ಅಧಿಕಾರ ಹಂಚಿಕೆಗೆ ರಾಜಕೀಯ ಮೀಸಲಾತಿ ಜಾರಿಯಾದವು. ಆದರೆ ಅದರ ಫಲಾಫಲಗಳು ಅಂಬೇಡ್ಕರ್ ಕನಸಿದ್ದಕ್ಕಿಂತ ವಿರೂಪಗೊಂಡಿವೆ. ಸಾಮಾಜಿಕ ನ್ಯಾಯದ ಅರ್ಥವನ್ನು ಮೀಸಲಾತಿಗಷ್ಟೇ ಸೀಮಿತಗೊಳಿಸಿರುವುದರಿಂದ ಪ್ರಸಕ್ತ ಮೀಸಲಾತಿ ನೀತಿ ಗುರಿ ಮುಟ್ಟಲು ಸೋತಿದ್ದು ಮೀಸಲಾತಿ ರಾಜಕೀಯವು ಜಾತಿವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿದೆ.

೨) ಮತ್ತು ೩) ಮೀಸಲಾತಿಯಿಂದ ಜಾತಿಯೊಳಗೊಂದು ಮೇಲ್ವರ್ಗ ಸೃಷ್ಟಿಯಾಗಿದೆ. ಆ ಮೇಲ್ವರ್ಗದ ಜೊತೆ ಅದೇ ಜಾತಿಯ ಕೆಳವರ್ಗ ಸ್ಪರ್ಧಿಸಲಾರದು. ಬ್ರಾಹ್ಮಣವಾದ ಮತ್ತು ಬಂಡವಾಳವಾದ ದಲಿತ ವಿರೋಧಿಗಳು ಎಂಬ ಅಂಬೇಡ್ಕರ್ ಹೇಳಿಕೆಯನ್ನು ಸೂಕ್ಷ್ಮವಾಗಿ ಗ್ರಹಿಸುತ್ತ ಆರ್ಥಿಕ ಉದಾರೀಕರಣದ ಈ ದಿನಗಳಲ್ಲಿ ಮೀಸಲಾತಿಗೆ ಜಾತಿಯೊಳಗಿನ ವರ್ಗಗಳನ್ನು ಮಾನದಂಡವಾಗಿ ಪರಿಗಣಿಸಬೇಕು.

ದುರ್ಬಲ ಸಮುದಾಯಗಳ ಸಬಲೀಕರಣದ ಮೊದಲ ಮೆಟ್ಟಿಲು ಮೀಸಲಾತಿ. ಅದು ಸಮುದಾಯವೊಂದರ ಶೋಷಿತ ನೆಲೆಯನ್ನು ಆಧಾರವಾಗಿಟ್ಟುಕೊಂಡರೂ ತಲುಪುವುದು ವ್ಯಕ್ತಿಯನ್ನು ಮಾತ್ರ. ವ್ಯಕ್ತಿ ತಾನು ಪಡೆದದ್ದನ್ನು ಸಮುದಾಯದ ಮುನ್ನಡೆಯ ಹೆಜ್ಜೆಯಾಗಿ ಅನುವಾದಿಸಬೇಕು. ಇಲ್ಲದಿದ್ದರೆ ವ್ಯಕ್ತಿಗತ ಮುನ್ನಡೆ ಸಮುದಾಯವನ್ನು ತಲುಪಲಾರದು. ಒಟ್ಟಿನಲ್ಲಿ–

ಅ) ಮೀಸಲಾತಿಯು ಕುಟುಂಬದ ಒಂದು/ಎರಡು ತಲೆಮಾರುಗಳಿಗಷ್ಟೆ ಸೀಮಿತವಾಗಬೇಕು ಆ)ಜಾತಿ–ಉದ್ಯೋಗ ಸಂಬಂಧ ತೊಡೆಯುವಂತೆ ಇರಬೇಕು. ಇ) ಪ್ರತಿ ಸಮುದಾಯದ ಆರೋಗ್ಯ, ಶಿಕ್ಷಣ, ಸಂಪನ್ಮೂಲ ಲಭ್ಯತೆ, ಅವಕಾಶ, ಉದ್ಯೋಗಿಗಳ ಸಂಖ್ಯೆ, ಭೂಮಿಯ ಹಕ್ಕು, ತಲಾವಾರು ಆದಾಯ ಇನ್ನಿತರ ಮಾನದಂಡಗಳನ್ನಿಟ್ಟುಕೊಂಡು ಕಾಲಮಿತಿಯ ಕಲ್ಯಾಣ ಕಾರ್ಯಕ್ರಮ ರೂಪಿಸಬೇಕು. ಈ) ಪ್ರತಿ ಜಾತಿಯ ಬಡ/ಭೂಹೀನ/ಅಧಿಕಾರಹೀನ/ಮೀಸಲಾತಿ ಬಳಸಿಕೊಳ್ಳದ ಜನರಿಗೆ ಆದ್ಯತೆಯ ಮೇಲೆ ಮೀಸಲಾತಿ ಒದಗಬೇಕು. ಉ) ಕೆಲವೇ ನೂರು–ಸಾವಿರ ಜನರಿರುವ; ಮೀಸಲಾತಿಯ ಹೆಸರನ್ನೇ ಕೇಳದ; ಕನಿಷ್ಠ ಶಿಕ್ಷಣ ಪಡೆಯದ ಜಾತಿಗಳಿಗೆ ಸಮುದಾಯ ಕೇಂದ್ರಿತ ಸಬಲೀಕರಣದ ಕ್ರಿಯಾಯೋಜನೆಗಳನ್ನು ಕಾಲಮಿತಿಯಲ್ಲಿ ರೂಪಿಸಬೇಕು.



**–ಡಾ. ಎಚ್.ಎಸ್.ಅನುಪಮಾ,** ವೈದ್ಯರು, ಲೇಖಕರು ಮತ್ತು ಚಿಂತಕರು, ಕವಲಕ್ಕಿ(ಉ.ಕ.)

## ಮೀಸಲಾತಿ ಪಟ್ಟಿ ತುರ್ತು ಪರಿಷ್ಕರಣೆಗೆ ಒಳಗಾಗಲಿ.

ಭಾರತದಲ್ಲಿ ಜಾತಿ ಆಧಾರಿತ ಮೀಸಲಾತಿ ನೂರಕ್ಕೆ ನೂರರಷ್ಟು ಗೋಲ್‌ಮಾಲ್ ಆಗಿ ಪರಿವರ್ತನೆ ಹೊಂದಿಬಿಟ್ಟಿದೆ. ಮಾದಿಗ ಹೊಲೆಯ ಕೊರಮ, ಕೊರಚ ಮತ್ತು ಒಂದೆರಡು ಅಲೆಮಾರಿ ಜಾತಿಗಳಷ್ಟೇ ಇದ್ದ, ಪರಿಶಿಷ್ಟ ಜಾತಿ ಪಟ್ಟಿ ಈಗ ನೂರಾ ಒಂದು ಜಾತಿಗಳ ಪಟ್ಟಿಯಾಗಿ ಪಟ್ಟಭದ್ರ ಹಿತಾಸಕ್ತಿಗಳು ಗೂಡಂತಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ದಲಿತರ ಧ್ವನಿಗಳು ಸರ್ಕಾರಿ ಧ್ವನಿಗಳಾಗಿ, ರಾಜಕೀಯ ದೊಂಬರಾಟದ ಧ್ವನಿಗಳಾಗಿ ಕ್ಷೀಣಿಸತೊಡಗಿವೆ.

ಅಂಬೇಡ್ಕರ್ ೧೦ ವರ್ಷದ ಗಡುವು ಕೊಟ್ಟಿದ್ದು ಸರಿ. ಆದರೆ ಕೊಡಬೇಕಾದ ಮೀಸಲಾತಿಯನ್ನು ಸರ್ಕಾರಗಳು ಸೂಕ್ತವಾಗಿ ಕೊಡಲಿಲ್ಲ. ಸುಳ್ಳು ಜಾತಿ ಪತ್ರದ ಹಾವಳಿ ಮಿತಿಮೀರಿದೆ. ಇನ್ನು ಸದಾಶಿವ ಆಯೋಗದ ವರದಿ ಜಾರಿಗೆ ತಂದರೆ ಕರ್ನಾಟಕದಲ್ಲಿ ಹಾಹಾಕಾರ ಉಂಟಾಗುವ ಆತಂಕ ಹುಟ್ಟಿಸಲಾಗಿಯಲ್ಲಾ! ಅಸ್ಪೃಶ್ಯರು, ಅಲೆಮಾರಿಗಳು, ಬುಡಕಟ್ಟುಗಳು ಮೀಸಲಾತಿ ಹೊಂದಲಿ. ಮಿಕ್ಕವರು ಹಿಂದುಳಿದವರಾದರೆ, ಆರ್ಥಿಕ ಆದಾಯ ಪ್ರಮಾಣಪತ್ರದಿಂದ ಪ್ರಯೋಜನ ಪಡೆಯಲಿ. ಅಂತರ್‌ಜಾತಿ ವಿವಾಹಿತರಿಗೆ ಮೀಸಲಾತಿ ಪ್ರಮಾಣ ಶೇ. ೧೫ರಷ್ಟು ನಿಗದಿಯಾಗಲಿ. ಈಗಿನ ಮೀಸಲಾತಿ ಪಟ್ಟಿ ತುರ್ತು ಪರಿಷ್ಕರಣೆಗೊಳಗಾಗಲಿ.

ಮೀಸಲಾತಿ ಒಂದೇ ಸಾಮಾಜಿಕ ನ್ಯಾಯದ ಕಾರ್ಯಕ್ರಮವಲ್ಲ. ಹೌದು, ಜಾತಿ ನಿರ್ಮೂಲನೆ ಒಂದೇ ಮೀಸಲಾತಿಯ ಪರಿಹಾರದ ಮದ್ದು. ಜಾತಿ ವಿನಾಶ ಮತ್ತು ಮೀಸಲಾತಿ ಒಂದು ಹಂತದವರೆಗೆ ಒಟ್ಟಿಗೆ ಚಲಿಸುವುದು ಸೂಕ್ತ ಪರಿಹಾರ.



**–ಪ್ರೊ. ಎಂ.ಚಂದ್ರಶೇಖರಯ್ಯ,** ನಿವೃತ್ತ ಪ್ರಾಧ್ಯಾಪಕರು, ಲೇಖಕರು ಮತ್ತು ದಲಿತ ಚಳುವಳಿಯಲ್ಲಿ ಸಕ್ರಿಯರಾಗಿದ್ದವರು, ಭದ್ರಾವತಿ

## ಅಂಬೇಡ್ಕರ್ ಆಶಯಗಳೆಲ್ಲ ಈಡೇರಿಲ್ಲವಾದ್ದರಿಂದ...

೧) ಮೀಸಲಾತಿ ಇರುವುದರಿಂದ ಮಾತ್ರ ಈಗ ದಲಿತ ಮತ್ತಿತರ ಕೆಳಜಾತಿಗಳವರಿಗೆ ಉದ್ಯೋಗ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಸೀಟು ಸಿಗುತ್ತಿವೆ. ಮೀಸಲಾತಿಯ ಅಗತ್ಯವಿಲ್ಲದ ಕೆಲವು ಗಟ್ಟಿ ಕುಳಗಳು ಅದರ ಫಲಾನುಭವಿಗಳಾಗಿರಬಹುದು. ಅದನ್ನೇ ದೊಡ್ಡದು ಮಾಡಿ ಮೀಸಲಾತಿಯೇ ರದ್ದಾಗಲಿ ಎಂದು ಆಗ್ರಹಿಸುವುದು ನೆಗಡಿಯ ಕಾರಣಕ್ಕೆ ಮೂಗನ್ನೇ ಕೊಯ್ದುಕೊಂಡಂತೆ. ಮೀಸಲಾತಿ ಯಾರ ಅವಕಾಶಗಳನ್ನೂ ಕಿತ್ತುಕೊಳ್ಳುವುದಿಲ್ಲ; ಅದು ಸೀಮಿತ ಅವಕಾಶಗಳಿಗಾಗಿ ನಡೆಯುವ ಸ್ಪರ್ಧೆಯ ನಿಯಮಗಳನ್ನು ಕೆಳಜಾತಿವರ್ಗಗಳಿಗೆ ಕೊಂಚ ಸಡಿಲಗೊಳಿಸುತ್ತದೆ. ಮೀಸಲಾತಿ ಸಮಾನತೆಯ ಕಡೆಗೆ ಇರಿಸುವ ಹೆಜ್ಜೆಯಾಗಿದೆ.

೨) ಸಂವಿಧಾನದ ಅತಿಮುಖ್ಯ ಸೂತ್ರಗಳಾದ ಸಮಾನತೆ, ಸ್ವಾತಂತ್ರ್ಯ, ಕಾನೂನಿನ ಆಳ್ವಿಕೆ, ಪ್ರಜಾಪ್ರಭುತ್ವ ಮುಂತಾದವು ಸ್ವಾತಂತ್ರ್ಯ ಬಂದು ಇಷ್ಟು ವರ್ಷ ಕಳೆದರೂ ಪರಿಪೂರ್ಣವಾಗಿ ಜ್ಯಾರಿಗೆ ಬಂದಿಲ್ಲ. ಪ್ರಜೆಗಳೆಲ್ಲರಿಗೂ ಅನ್ನ, ಅಕ್ಷರ ಮತ್ತು ಆರೋಗ್ಯಗಳನ್ನು ಕನಿಷ್ಠ ಪ್ರಮಾಣದಲ್ಲಾದರೂ ಒದಗಿಸಲು ಈಗಲೂ ವ್ಯವಸ್ಥೆ ವಿಫಲವಾಗಿದೆ. ಸಂವಿಧಾನ ರಚನೆಯ ಹಿಂದೆ ಇದ್ದ ಅಂಬೇಡ್ಕರ್ ಆಶಯಗಳೆಲ್ಲ ಈಡೇರಿದ್ದರೆ, ಮೀಸಲಾತಿಗೆ ಅವರು ಹಾಕಿದ ಕಾಲಮಿತಿಯೂ ವ್ಯಾವಹಾರಿಕವಾಗಿರುತ್ತಿತ್ತು.

೩) ಮೀಸಲಾತಿ ಈಗ ಇರುವಂತೆಯೇ ಅದರಲ್ಲಿ ಕೆಲವು ಬದಲಾವಣೆಗಳು ಆಗಬೇಕಾಗಿದೆ. ಕ್ರೈಸ್ತ ಹಾಗೂ ಮುಸ್ಲಿಮ್ ಧರ್ಮಗಳ ಕೆಳಜಾತಿ, ಪಂಗಡಗಳವರಿಗೆ, ಮತಾಂತರಗೊಂಡವರಿಗೆ ಹಾಗೂ ಅಂತರ್ಜಾತೀಯ ವಿವಾಹವಾದವರಿಗೆ ಮೀಸಲಾತಿಯನ್ನು ಅಗತ್ಯ ವಿಸ್ತರಿಸಬೇಕು. ಮಹಿಳೆಯರಿಗೆ ಸಾರ್ವಜನಿಕ ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ವಿಶೇಷವಾದ ಮೀಸಲಾತಿಯನ್ನು ತುರ್ತಾಗಿ ಕಲ್ಪಿಸಬೇಕು.



**–ಜಿ.ರಾಜಶೇಖರ,** ಲೇಖಕರು ಮತ್ತು ಪ್ರಗತಿಪರ ಚಿಂತಕರು, ಉಡುಪಿ

## ಇಂದಿಗೂ ರಸ್ತೆ ಪಕ್ಕ ಚಪ್ಪಲಿ ಹೊಲೆಯುವವರು ಯಾರು?

೧) ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿರುವುದು ಮೀಸಲಾತಿ ನೀತಿಯಲ್ಲ, ಮೀಸಲಾತಿ ಬಗ್ಗೆ ಇರುವ ತಪ್ಪು ಕಲ್ಪನೆ ಜಾತಿಗಳನ್ನು ವೋಟ್ ಬ್ಯಾಂಕ್ ಆಗಿ ನೋಡುವುದು, ರಾಜಕೀಯ ಅಧಿಕಾರದ ದಾಹ, ಸಂಪತ್ತಿನ ಒಡೆತನ, ಜಾತಿಯ ಬಗೆಗಿನ ಶ್ರೇಷ್ಠತೆಯ ವ್ಯಸನ. ಮೀಸಲಾತಿ ನೀತಿಯ ಆಶಯವೇ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವುದು.

ಮೀಸಲಾತಿ ನೀತಿ ಜಾರಿಗೆ ಬಂದು ಇಷ್ಟು ವರ್ಷಗಳಾದರೂ ಅಸ್ಪೃಶ್ಯತೆ ನಿರ್ಮೂಲನೆಯಾಗಿಲ್ಲ, ಜಾತಿಯ ಹೆಸರಿನಲ್ಲಿ ಅವಮಾನಗಳು, ದೌರ್ಜನ್ಯಗಳು ನಡೆಯುತ್ತಲೇ ಇವೆ. ಜಾತಿಯ ಸ್ತರ ವಿನ್ಯಾಸ ಹಾಗೇ ಇದೆ. ಕೃಷಿಭೂಮಿ ಕೈಗಾರಿಕೆಗಳು, ಕಂಪನಿಗಳು, ಬಹಳಷ್ಟು ಉದ್ಯಮಗಳು, ಯಾರ ಒಡೆತನದಲ್ಲಿವೆ? ತೀರ್ಮಾನ ಕೈಗೊಳ್ಳುವಂತಹ ಆಯಕಟ್ಟಿನ ಹುದ್ದೆಗಳಲ್ಲಿ ಯಾವ ಯಾವ ಜಾತಿಯ ಅಧಿಕಾರಿಗಳಿದ್ದಾರೆ? ಪ್ರತಿಷ್ಠಿತ ಐಐಟಿ, ಐಐಎಂ ಗಳಲ್ಲಿ ಕಲಿಯುತ್ತಿರುವವರು ಯಾರು? ಇಂದಿಗೂ ರಸ್ತೆ ಪಕ್ಕ ಚಪ್ಪಲಿ ಹೊಲೆಯುವವರು ಯಾರು? ಬಹುಪಾಲು ದೇವಸ್ಥಾನಗಳ ಪೂಜಾರಿಕೆ ಯಾರ ಕೈಯಲ್ಲಿದೆ? ಬಹುಪಾಲು ಹೋಟೆಲ್‌ಗಳನ್ನು ನಡೆಸುತ್ತಿರುವವರು ಯಾರು?

೨) ಹೀಗೆ ಮೀಸಲಾತಿ ನೀತಿಯ ಆಶಯವೇ ಸಂಪೂರ್ಣವಾಗಿ ಈಡೇರಿಲ್ಲ ಎಂದ ಮೇಲೆ ಪುನರ್ವಿಮರ್ಶೆಯ ಮಾತೇಕೆ ?

೩) ಸಾಮಾಜಿಕ ಸಮಾನತೆಯ ಸಾಧನೆಗೆ ಮೀಸಲಾತಿಯ ಜೊತೆಗೇ ಈ ಪ್ರಯತ್ನಗಳು ನಡೆಯಬೇಕಿವೆ: ಎಲ್ಲರಿಗೂ ಸಮಾನವಾದ ಶಿಕ್ಷಣ ನೀಡುವುದು.

ಕಾನೂನುಗಳನ್ನು ಸಮರ್ಪಕವಾಗಿ ಜಾರಿಗೊಳಿಸುವುದು. ವೈಜ್ಞಾನಿಕ, ವೈಚಾರಿಕ ದೃಷ್ಟಿಕೋನ ಬೆಳೆಸುವಂತಹ, ಮಾನವೀಯ ಮೌಲ್ಯಗಳನ್ನು ಉನ್ನತೀಕರಿಸುವಂತಹ ಶಿಕ್ಷಣ ನೀಡಿ ಮನ:ಪರಿವರ್ತನೆಗೊಳಿಸುವುದು. ಅಂತರ್ಜಾತಿ ವಿವಾಹಗಳನ್ನು ಬೆಂಬಲಿಸುವುದು. ಅಂತರ್ಜಾತಿ ವಿವಾಹ ಆದವರಿಗೆ ಸರ್ಕಾರಿ ಉದ್ಯೋಗ ನೀಡುವುದು.



ಇದಕ್ಕೆ ಮೊದಲು ನಮ್ಮ ಮನಸ್ಸಿನಲ್ಲಿರುವ ಭಿನ್ನ ಭೇದಗಳ ಕಿತ್ತು ಮೌಢ್ಯತೆ ತೊಳೆವ ಕೆಲಸ ಆಗಬೇಕಿದೆ

**– ಮಲ್ಲಿಕಾ ಬಸವರಾಜು,** ಸಾಮಾಜಿಕ ಕಾರ್ಯಕರ್ತೆ ಮತ್ತು ಕವಯತ್ರಿ, ತುಮಕೂರು

## ಒಳಗೊಳ್ಳುವಿಕೆಯ ಹೊಸ ದಾರಿಗಳ ಹುಡುಕಾಟದ ಅಗತ್ಯವಿದೆ

ಎರಡು ನೆಲೆಗಳಲ್ಲಿ ಇವತ್ತಿನ ಮೀಸಲಾತಿಯ ಅನ್ವಯ ಹಾದಿ ತಪ್ಪಿದೆಯೆಂದು ನನಗೆ ಅನ್ನಿಸಿದೆ – ಒಂದು: ಸಮಾಜದ ಎಲ್ಲ ವರ್ಗ–ಜಾತಿಗಳನ್ನು ವರ್ತಮಾನದಲ್ಲಿ ಸಮಾನವಾಗಿ ಒಳಗೊಳ್ಳುವುದು ಮೀಸಲಾತಿಯ ಉದ್ದೇಶವೇ ಹೊರತು ಅದು ಇತಿಹಾಸದಲ್ಲಿ ಆಗಿರಬಹುದಾದ ಅನ್ಯಾಯಗಳಿಗೆ ಪ್ರತೀಕಾರವಲ್ಲ. ಆದ್ದರಿಂದ, ಇದು ಸರ್ವೋದಯದ ಸಾತ್ವಿಕ ರಾಜಕಾರಣ ಆಗಬೇಕೆ ಹೊರತು ಜಾತಿ ಜಗಳದ ಬಡಿದಾಟದ ರಾಜಕಾರಣ ಆಗಬಾರದು. ಎರಡು: ಮೀಸಲಾತಿಯು ನಿರ್ದಿಷ್ಟ ಕಾಲ ದೇಶದೊಳಗೆ ಅಗತ್ಯವಾದ ಸಾಮಾಜಿಕ ಸಮತೋಲವನ್ನು ತರುವ ಸಾಧನ; ಆದರೆ, ವಿಶಾಲವಾದ ನ್ಯಾಯದ ಪರಿಕಲ್ಪನೆಗೆ ಅದು ಪ್ರತಿಕೂಲವಾಗಕೂಡದು. ಅಂದರೆ, ಸಮಾಜದ ಕೆಲವು ವರ್ಗಗಳಿಗೆ ಒಳಿತು ಮಾಡುವ ಅವಸರದಲ್ಲಿ ಇಡಿಯ ಸಮಾಜದ ಹಿತಕ್ಕೆ ಹಾನಿಯಾಗದಂತೆ ಎಚ್ಚರ ವಹಿಸಬೇಕು.

ಆದ್ದರಿಂದ, ಒಳಗೊಳ್ಳುವಿಕೆಯನ್ನು ಯಾಂತ್ರಿಕವಾದ ಒಂದು ಸೂತ್ರದ ಹಾಗೆ ಅಥವಾ ಇಷ್ಟವಿಲ್ಲದೆಯೂ ಆಚರಿಸಬೇಕಾದ ಕಟ್ಟಲೆಯ ಹಾಗೆ ಜಾರಿಗೊಳಿಸದೆ ಅದನ್ನು ಒಂದು ಸೃಜನಶೀಲ ಹುಡುಕಾಟವಾಗಿ ಮಾರ್ಪಡಿಸಿಕೊಂಡು ಪ್ರಯೋಗ ಮಾಡಿದರೆ ಯಶಸ್ಸು ಸಾಧ್ಯವೆಂದು ನನಗನಿಸುತ್ತದೆ. ಉದಾಹರಣೆಗೆ, ನಾನು ಕೆಲಸ ಮಾಡುವ ಸಂಸ್ಥೆಯ ಅನುಭವದಲ್ಲಿಯೇ ಹೇಳುವುದಾದರೆ, ಒಂದು ಸಂಸ್ಥೆಯೊಳಗೆ ಮೀಸಲಾತಿಯ ಮೂಲಕ ಬೇರೆಬೇರೆ ಸಮುದಾಯ–ವರ್ಗದ ಜನರನ್ನು ಒಳಗೊಳ್ಳುವ ಪ್ರಕ್ರಿಯೆಯಲ್ಲಿ ಸಂಸ್ಥೆಯ ಕೆಲಸದ ವಿಧಾನ ಮತ್ತು ಗುಣಮಟ್ಟಗಳೆರಡೂ ಹಾಳಾಗದಂತೆ ಕಾಳಜಿ ವಹಿಸುವುದು ಅಗತ್ಯ; ಮತ್ತು ಅಂಥ ಎಚ್ಚರ ವಹಿಸಿದರೆ, ಅಂಥ ಒಳಗೊಳ್ಳುವಿಕೆಯನ್ನು ಸಂಸ್ಥೆಯ ಶಕ್ತಿಯಾಗಿ ಮಾರ್ಪಡಿಸಿಕೊಳ್ಳುವುದು ಕೂಡ ಸಾಧ್ಯ. ಹೆಚ್ಚಿನ ಕಡೆಗಳಲ್ಲಿ, ಅದರಲ್ಲೂ ಸರ್ಕಾರಿ ವಲಯಗಳಲ್ಲಿ, ಹಾಗಾಗಿಲ್ಲ ಎಂದು ನನಗೆ ಕಂಡಿದೆ. ಹಾಗಾಗಿ ಇವತ್ತು, ಸಾಮಾಜಿಕ ಒಳಗೊಳ್ಳುವಿಕೆಯನ್ನು ಸಾಧಿಸುವ ಹೊಸ ದಾರಿಗಳೇನು? ಮೀಸಲಾತಿಯ ಅನ್ವಯದಲ್ಲಿ ನಾವು ವಹಿಸಬೇಕಾದ ಎಚ್ಚರಗಳೇನು? – ಎಂಬ ಬಗ್ಗೆ ಹೊಸ ಹುಡುಕಾಟ ನಡೆಯಬೇಕಾಗಿದೆ ಎಂದು ನಾನು ತಿಳಿಯುತ್ತೇನೆ.



**–ಕೆ.ವಿ.ಅಕ್ಷರ,** ಲೇಖಕ, ಚಿಂತಕ ಮತ್ತು ರಂಗ ನಿರ್ದೇಶಕ, ಹೆಗ್ಗೋಡು

## ಕೆನೆಪದರ ಪರಿಶಿಷ್ಟರಿಗೂ ಅನ್ವಯವಾಗಲಿ

೧) ಇಲ್ಲ, ಜಾತಿವ್ಯವಸ್ಥೆ ಗಟ್ಟಿಕೊಳ್ಳುತ್ತಿದೆಯೆಂದು ನನಗೆ ಅನಿಸುವುದಿಲ್ಲ. ಮೀಸಲಾತಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಸಂವಿಧಾನ ಕೊಡಮಾಡಿರುವ ಸೌಲಭ್ಯ. ಈ ಸೌಲಭ್ಯವಿಲ್ಲದಿದ್ದರೆ, ಇವರ ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯ ಪ್ರಗತಿ ಅಸಾಧ್ಯವಾಗುತ್ತದೆ.

೨) ಅಂಬೇಡ್ಕರ್ ಹತ್ತು ವರ್ಷಗಳ ನಂತರ ಪುನರಾವಲೋಕನದ ಮಾತಾಡಿದ್ದು ಶಾಸನ ಸಭೆಗಳಲ್ಲಿನ ಜಾತಿ ಮೀಸಲಾತಿ ಬಗ್ಗೆಯೇ ಹೊರತು ಶಿಕ್ಷಣ, ಉದ್ಯೋಗ ಕ್ಷೇತ್ರಗಳಲ್ಲಿನ ಮೀಸಲಾತಿ ಬಗ್ಗೆ ಅಲ್ಲ. ಆದರೆ ಈ ಮೀಸಲಾತಿಯನ್ನೂ ಕಾಲಾನುಕಾಲಕ್ಕೆ ಪರಿಷ್ಕರಿಸಲು ಸಂವಿಧಾನದಲ್ಲಿ ಅವಕಾಶವಿದೆ. ವೈಜ್ಞಾನಿಕ ಸಮೀಕ್ಷೆಯ ಆಧಾರದ ಮೇಲೆ ಶೈಕ್ಷಣಿಕ ಮತ್ತು ಸಾಮಾಜಿಕ ಉನ್ನತಿಯ ಸೂಚ್ಯಂಕಗಳನ್ನು ಮಾನದಂಡಗಳನ್ನಾಗಿಟ್ಟುಕೊಂಡು ಮೀಸಲಾತಿ ಪಟ್ಟಿಯಿಂದ ಜಾತಿಗಳನ್ನು ಕೈಬಿಡುವ ಮತ್ತು ಸೇರಿಸುವ ಪ್ರಕ್ರಿಯೆ ಆರಂಭವಾಗಬೇಕಿದೆ.

ಜಾತಿ ಮೀಸಲಾತಿಯನ್ನು ಪ್ರತಿ ಕುಟುಂಬದ ಎರಡು ತಲೆಮಾರುಗಳಿಗೆ ಸೀಮಿತಗೊಳಿಸಬೇಕು ಮತ್ತು ಪರಿಶಿಷ್ಟ ಜಾತಿ ಜನಾಂಗಗಳಿಗೂ ಕೆನೆಪದರ ಅನ್ವಯವಾಗುವಂತಾಗಬೇಕು. ಅಲ್ಲದೆ, ಕೆನೆಪದರದ ಸದ್ಯದ ಆದಾಯ ಮಿತಿಗಳು ತೀರಾ ಕಡಿಮೆಯಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡರ ಕೆನೆ ಪದರ ಆದಾಯ ಮಿತಿಯನ್ನು ಎರಡು ಲಕ್ಷ ರೂಪಾಯಿಗಳಿಗೆ ನಿಗದಿ ಮಾಡಬೇಕು. ಆಗ ಮಾತ್ರ ಅರ್ಹರಿಗೆ ಮೀಸಲಾತಿ ದೊರೆಯುವಂತಾಗುತ್ತದೆ ಮತ್ತು ಮೀಸಲಾತಿ ಎಲ್ಲರ ಕಣ್ಣಲ್ಲೂ ನ್ಯಾಯಬದ್ಧವೆನಿಸುತ್ತದೆ.



೩) ಮೀಸಲಾತಿಯ ಜೊತೆಜೊತೆಗೇ ಸಮಾನ ಶಿಕ್ಷಣ ಪದ್ಧತಿ ಮತ್ತು ಭೂಸುಧಾರಣೆ ಕಟ್ಟುನಿಟ್ಟಾಗಿ ಜಾರಿಗೆ ಬಂದು ಸಂಪತ್ತಿನ ಮರ್ನಹಂಚಿಕೆಯಾಗಬೇಕು.

**–ಮನೋರಮಾ ನಿಸಾರ್ ಅಹಮದ್,** ನಿವೃತ್ತ ಇತಿಹಾಸ ಉಪನ್ಯಾಸಕರು, ಶಿವಮೊಗ್ಗ

## ನ್ಯಾ. ಎ.ಜೆ. ಸದಾಶಿವ ಆಯೋಗದ ವರದಿಯೂ, ಸಾಮಾಜಿಕ ನ್ಯಾಯ ರಾಜಕಾರಣವೂ...



ನ್ಯಾ.ಎ.ಜೆ. ಸದಾಶಿವ

**ಉ**ದ್ಯೋಗಾವಕಾಶಗಳಲ್ಲಿ ಪರಿಶಿಷ್ಟ ಜಾತಿಗಳಿಗಿರುವ ಶೇ ೧೫ರಷ್ಟು ಮೀಸಲಾತಿಯ ಬಹುಪಾಲು ಒಂದೇ ಜಾತಿಗೆ ಹೋಗುತ್ತಿದೆ ಎಂಬುದು ಬಹುದಿನದ ಕೂಗು. ಈ ಕೂಗನ್ನು ಪರಿಶೀಲಿಸಿ ಈ ಮೀಸಲಾತಿಯಲ್ಲಿ ಆಗುತ್ತಿರಬಹುದಾದ ಅನ್ಯಾಯವನ್ನು ಸರಿಪಡಿಸಲು ಅನುವಾಗುವಂತಹ ಕ್ರಮಗಳನ್ನು ಸೂಚಿಸಲು ೨೦೦೫ರಲ್ಲಿ ಧರ್ಮಸಿಂಗ್ ಸರ್ಕಾರ ನ್ಯಾ. ಸದಾಶಿವ ಆಯೋಗವನ್ನು ನೇಮಿಸಿತು. ಆಯೋಗವು ಏಳು ವರ್ಷಗಳ ಸುದೀರ್ಘ ಅವಧಿಯಲ್ಲಿ ಸುಮಾರು ೯೭ ಲಕ್ಷ ಪರಿಶಿಷ್ಟರನ್ನೊಳಗೊಂಡ ಈ ಸಮುದಾಯಗಳ ಮಾದರಿ ಮನೆ ಮನೆ ಸಮೀಕ್ಷೆ ನಡೆಸಿ, ನೂರಾ ಒಂದು ಪರಿಶಿಷ್ಟ ಜಾತಿಗಳ ಪೈಕಿ ಬಲಗೈ ಜಾತಿ(ಹೊಲೆಯ–ಚಲವಾದಿ) ಸಮುದಾಯಕ್ಕೆ ತನ್ನ ಜಾತಿ ಜನಸಂಖ್ಯಾ ಪ್ರಮಾಣವನ್ನು ಬಹುಪಾಲು ಮೀರಿದ ಮೀಸಲಾತಿ ಸೌಲಭ್ಯ ದೊರೆಯುತ್ತಿರುವುದನ್ನು ಗುರುತಿಸಿತು. ಈ ಜಾತಿಯಲ್ಲಿ ಶಿಕ್ಷಣ ಮತ್ತು ಉದ್ಯೋಗ ಪಡೆದವರ ಸಂಖ್ಯೆ ಜಾಸ್ತಿ ಇರುವುದೂ ಇದಕ್ಕೆ ಕಾರಣವಿರಬಹುದೆಂದೂ ಅದು ಹೇಳಿತು.

ಇದನ್ನು ಸರಿಪಡಿಸಲು ಆಯೋಗವು ಪರಿಶಿಷ್ಟ ಜಾತಿಗಳನ್ನು ಎಡಗೈ, ಬಲಗೈ, ಸ್ಪೃಶ್ಯ ಮತ್ತು ಇತರೆ ಎಂದು ನಾಲ್ಕು ಗುಂಪುಗಳಾಗಿ ವಿಂಗಡಿಸಿ ಅವುಗಳ ಜನಸಂಖ್ಯಾ ಅನುಸಾರವಾಗಿ ಕ್ರಮವಾಗಿ ಶೇ ೬, ಶೇ.೫, ಶೇ.೩ ಮತ್ತು ಶೇ.೧ ರಂತೆ ಮೀಸಲಾತಿಯನ್ನು ಸೂಚಿಸಿತು. ಜೊತೆಗೆ ಪರಿಶಿಷ್ಟ ಜಾತಿಗಳ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ದಕ್ಷತೆಯನ್ನು ಹೆಚ್ಚಿಸಲು ಕ್ರಮಗಳನ್ನೂ ಸಲಹೆ ಮಾಡಿತು. ಈ ಆಯೋಗಕ್ಕಾಗಿ ಸರ್ಕಾರ ಮಾಡಿದ ವೆಚ್ಚ ಸುಮಾರು ೧೨ ಕೋಟಿ ರೂಪಾಯಿಗಳು

ವಿಷಾದದ ಸಂಗತಿ ಎಂದರೆ, ಅನ್ಯಾಯಕ್ಕೊಳಗಾದ ಜಾತಿಗಳಿಂದ ಈ ವರದಿಯ ಶೀಘ್ರ ಅನುಷ್ಠಾನದ ಒತ್ತಾಯ ಕೇಳಿಬರುತ್ತಿದ್ದರೆ, ಇದಕ್ಕೆ ಇತರ ಪರಿಶಿಷ್ಟ ಜಾತಿಗಳಿಂದ ಸಹಾನುಭೂತಿಯ ಬೆಂಬಲದ ಬದಲಾಗಿ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಪರಿಶಿಷ್ಟರನ್ನು ಒಡೆಯಬೇಡಿ ಎಂಬುದು ಹೆಚ್ಚು ಸೌಲಭ್ಯ ಪಡೆದವರ ಕೂಗು. ಆಯೋಗದ ವರದಿ ಸಲ್ಲಿಕೆಯಾಗಿ ಮೂರು ವರ್ಷಗಳಾಗಿದ್ದರೂ, ಸರ್ಕಾರ ವರದಿಯ ಬಗ್ಗೆ ನಿರ್ದಿಷ್ಟ ನಿರ್ಧಾರ ತೆಗೆದುಕೊಳ್ಳುವುದನ್ನು ಮುಂದೂಡುತ್ತಲೇ ಬಂದಿದೆ ಏಕೆ?. ಸಾಮಾಜಿಕ ನ್ಯಾಯ ರಾಜಕಾರಣ ಮುಟ್ಟಿರುವ ನೈತಿಕ ಬಿಕ್ಕಟ್ಟಿನ ಸೂಚನೆಯೇ ಇದು? –ಸಂಪಾದಕ

## ಸಾಹಿತ್ಯ-ಸಂಸ್ಕೃತಿ-ಪರಂಪರೆ ಇತ್ಯಾದಿ

# ಭಗವದ್ಗೀತೆ, ಬ್ರಾಹ್ಮಣ ಮೌಲ್ಯ ಮತ್ತು ಗಿರಿಜನ ಸೇವೆ!



ಇತ್ತೀಚಿನ ದಿನಗಳಲ್ಲಿ, ಮೊಟ್ಟ ಮೊದಲ ಬಾರಿಗೆ ನಮ್ಮ ಪ್ರಗತಿಪರ ಅಥವಾ ಎಡಪಂಥೀಯ ಗುಂಪಿನಿಂದ ಒಂದು ನಿಜವಾದ ಆತ್ಮಾವಲೋಕನದ, ಹೊಸ ವಿವೇಕದ ಮಾತು ಹೊರಬಿದ್ದಿದೆ. ಲೇಖಕ ದೇವನೂರ ಮಹಾದೇವ ಅವರು ಮೊನ್ನೆ ಮಂಗಳೂರಿನ 'ಜನನುಡಿ'ಯಲ್ಲಿ ಪ್ರಗತಿಪರರೆಂದು ಹೇಳಲಾಗುವ ಗುಂಪು ಈವರೆಗೆ ಒಂದು ಪಟ್ಟಭದ್ರ ಹಿತಾಸಕ್ತಿಯ ಗ್ರಂಥವೆಂದೇ ಹೇಳುತ್ತಾ ಬಂದಿದ್ದ ಭಗವದ್ಗೀತೆ ಓದಬೇಕಾದ ಗ್ರಂಥವೆಂದು ಹೇಳಿದ್ದಾರೆ. ಅದರಲ್ಲಿನ ವರ್ಣಧರ್ಮವನ್ನು ಮಾನ್ಯ ಮಾಡುವ ಭಾಗವನ್ನು ಕೈಬಿಟ್ಟು ಓದಿದರೆ ಅದೊಂದು ಹೆಚ್ಚೂಕಡಿಮೆ ಬೌದ್ಧ ಗ್ರಂಥವೇ ಆಗಿ ಕಾಣುತ್ತದೆ ಎಂದಿದ್ದಾರೆ. ಜೊತೆಗೇ ತಮ್ಮನ್ನೂ ಸೇರಿಸಿಕೊಂಡು, ತಾವೆಲ್ಲ ಜನಸಮೂಹದ ಭಾಷೆಯಿಂದ ದೂರಾದ ತಮ್ಮದೇ ಕಲಿತ ಬೌದ್ಧಿಕ ಭಾಷೆಯಲ್ಲಿ ಮಾತಾಡುತ್ತಾ ತಮ್ಮ ಮಾತುಗಳಿಗೆ ತದ್ವಿರುದ್ಧವಾದ ಕ್ರಿಯೆಗಳು ಸಮಾಜದಲ್ಲಿ ಆಗುತ್ತಿರುವುದನ್ನು ಗಮನಿಸದೇ ನಿರರ್ಥಕ ಪ್ರವಚನಕಾರರಾಗುತ್ತಿರುವ ದುರಂತವನ್ನು ಕುರಿತು ಅವರು ಮಾತನಾಡಿದ್ದಾರೆ. ಈಗಲಾದರೂ ಪ್ರಗತಿಪರರು ಎನಿಸಿಕೊಂಡವರು ನಮ್ಮ ಗತವನ್ನು ಕಲಿತ ಸಿದ್ಧಾಂತಗಳ ಕೌಶಲ್ಯದ ಪ್ರದರ್ಶನದ ಮೂಲಕ ನೋಡದೆ ಸಹಾನುಭೂತಿಪರ ದೃಷ್ಟಿಕೋನದ ಮೂಲಕ ನೋಡುವಂತೆ ಅವರು ಸೂಚಿಸಿದ್ದಾರೆ. ಈ ಸಂಬಂಧವಾಗಿ ಅವರು ಲೋಹಿಯಾ ಮತ್ತು ಕುವೆಂಪು ಅವರ ವಿವೇಕಗಳ ಪ್ರಸ್ತಾಪ ಮಾಡಿದ್ದಾರೆ.

ನನಗೆ ತಿಳಿದಂತೆ ಮಹಾದೇವ ಅವರಿಗೆ ಇದೆಲ್ಲ ಹೊಸದಾಗಿ ಹೊಳೆದಿರುವ ಸಂಗತಿಗಳೇನಲ್ಲ. ಎಲ್ಲವನ್ನೂ ತೆರೆದ, ಸಹಾನುಭೂತಿಯ ಕಣ್ಣುಗಳಿಂದಲೇ ನೋಡುವ ಅವರು ತಮ್ಮ ಮನದೊಳಗಿನ ಈ ಮಾತುಗಳನ್ನು ಬಹಿರಂಗವಾಗಿ ಆಡುವ ಧೈರ್ಯವನ್ನೀಗ ತೋರಿದ್ದಾರಷ್ಟೆ. ಸಾರ್ವಜನಿಕ ಜೀವನದಲ್ಲಿ ಮಹಾ ಲೆಕ್ಕಾಚಾರದ ಮನುಷ್ಯರಾದ ಮಹಾದೇವ, ಈ ಮೋದಿ ಯುಗದವರೆಗಿನ ಪ್ರಗತಿಪರ ಗುಂಪಿನ ಎಲ್ಲ ಆಟಪಾಠಗಳನ್ನೂ ನೋಡಿ ಅವರೂ, ತಾವೂ ಇಬ್ಬರೂ ಸುಸ್ತಾಗಿರುವ ಸಮಯ ಅರಿತು ಈ ಆಯಕಟ್ಟಿನ ಮಾತುಗಳನ್ನಾಡಿದ್ದಾರೆಂದು ನನಗೆ ಅನಿಸುತ್ತಿದೆ.

ಈ ದೇಶದ ಚರಿತ್ರೆಯಲ್ಲಿ ಮತ್ತು ಸಂಸ್ಕೃತಿಯಲ್ಲಿ ಕಟ್ಟುನಿಟ್ಟಾದ ವೈದಿಕ-ಅವೈದಿಕ-ಶೂದ್ರ-ಬೌದ್ಧ-ಜೈನ ಇತ್ಯಾದಿ ವಿಂಗಡಣೆಗಳು ಇಲ್ಲ. ಜಗಳಗಳನ್ನಾಡಲು ಮಾತ್ರ ವಿದ್ವಾಂಸರಿಂದ ಇಂತಹ ವಿಂಗಡಣೆಗಳು ನಡೆದಿವೆ. ವಿಶೇಷವಾಗಿ ಪಶ್ಚಿಮದ ಪುನರುಜ್ಜೀವನ ಯುಗದ ಫಲಗಳಾದ ಕಾರ್ಟೇಸಿಯನ್ ತರ್ಕಮೂಲ ವಿಂಗಡಣೆಯ ಮತ್ತು *ಸೆಮೆಟಿಕ್* ಧರ್ಮಗಳಿಂದ ಪಡೆದ ಏಕರೂಪಿ ಮತ ಮಾದರಿಗಳಿಂದ ಪ್ರಭಾವಿತವಾದ ಭಾರತೀಯ ಮನಸ್ಸುಗಳಷ್ಟೇ ನಮ್ಮ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಹೀಗೆ (ಪ್ರತಿಕೃತಿ ಪರಿಶ್ರಮದ ಮೂಲಕ) ವಿಂಗಡಿಸಿ ತಮ್ಮ ಪ್ರಗತಿಪರತೆಯನ್ನು ಮೆರೆಯುವ ಹವ್ಯಾಸವನ್ನು ಬೆಳೆಸಿಕೊಂಡಿವೆಯಷ್ಟೆ. ಇದನ್ನು ನಾವು ವಿದ್ವತ್ತು ಎಂದು ಕರೆದು ಜನಸಾಮಾನ್ಯರ ವಿವೇಕವನ್ನು ಅವಮಾನಿಸುತ್ತಾ ಅವರ ಮನಸ್ಸನ್ನೂ ಒಡೆಯುತ್ತಾ ಬಂದಿದ್ದೇವಷ್ಟೆ. ಇದರ ಮಧ್ಯೆಯೇ ಮಹಾದೇವ ಪ್ರಸ್ತಾಪಿಸಿರುವ ಸ್ವತಂತ್ರ ಆಲೋಚನೆಯ ಚಿಂತಕರಾದ ಲೋಹಿಯಾ ಮತ್ತು ಕುವೆಂಪು ನಮ್ಮ ಪರಂಪರೆಯನ್ನು ಪ್ರತಿಮಾ ದೃಷ್ಟಿಯ ಮೂಲಕ ನೋಡಿ ಸೋಸಿ ಚಿನ್ನ ಕರಗಿಸಿಕೊಳ್ಳುವ ಪ್ರತಿಭೆಯ ಪಾಠ ಹೇಳಿದ್ದಾರೆ. ಆದರೆ ಮಹಾದೇವ ಹೇಳಿದಂತೆ ಬೌದ್ಧಿಕ ಕೌಶಲ ನಿರ್ಮಾಣ ಮತ್ತು ಪ್ರದರ್ಶನದಲ್ಲೇ ಮುಳುಗಿಹೋಗಿ, ಇದನ್ನೇ ಹೇಳಿದ್ದ ಪರಮಹಂಸ, ವಿವೇಕಾನಂದ, ಲೋಹಿಯಾ, ಕುವೆಂಪು ಇತ್ಯಾದಿ ಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ದಾರ್ಶನಿಕರ ಮಾತುಗಳನ್ನು ಅಧ್ಯಾತ್ಮ ಎಂಬ ಶಬ್ದದ ಅಲರ್ಜಿಯಿಂದಾಗಿ ತಿರಸ್ಕರಿಸುತ್ತಾ ಬಂದಿದ್ದ ನಾವು ಈಗ ದಲಿತ ನಾಯಕರು ಹೇಳಿರುವರೆಂಬ ಕಾರಣಕ್ಕಾದರೂ ಸಹಾನುಭೂತಿಯಿಂದ ಅವನ್ನು ಆಲಿಸಲು ಸಾಧ್ಯವೇ ಎಂಬುದನ್ನು ಕಾದು ನೋಡಬೇಕಿದೆ!

ಬಹುಶಃ ಇದು ಅಷ್ಟು ಸುಲಭವಲ್ಲ ಎಂಬುದು ಮಾರನೆಯ ದಿನವೇ ಅದೇ ವೇದಿಕೆಯಿಂದ ರಹಮತ್ ತರೀಕೆರೆಯವರು ಆಡಿರುವ ಮಾತುಗಳಿಂದ ಸಾಬೀತಾಗಿದೆ. ಅವರು, ನಮ್ಮ ಶಾಲಾ ಪಠ್ಯಗಳು ಬ್ರಾಹ್ಮಣ ಮೌಲ್ಯಗಳಿಂದ ತುಂಬಿ ಹೋಗಿವೆ ಎಂದು ಹೌಹಾರಿದ್ದಾರೆ. ಪಠ್ಯಗಳಲ್ಲಿ ಅಸಮಾನತೆಯನ್ನು ಅಸಹಿಷ್ಣುತೆಯನ್ನು, ಮೌಢ್ಯಗಳನ್ನು ಬೋಧಿಸುವ ಅಂಶಗಳಿದ್ದರೆ ಅದನ್ನು ತೆಗೆಯಿರಿ. ಬದಲಿಗೆ ಸಮಾಜದಲ್ಲಿ ಮತ್ತು ವಿಶೇಷವಾಗಿ ವಿದ್ಯಾರ್ಥಿ ಸಮೂಹದಲ್ಲಿ ಈ ಜಾತಿ ಪ್ರಚೋದನೆಯ ಮಾತೇಕೆ? ನಿಮ್ಮ ಮಾತುಗಳನ್ನೆಲ್ಲ ನಿಮ್ಮ ಪಠ್ಯ ವಿಮರ್ಶನ ಸಮಿತಿಯಲ್ಲಿ ಆಡಿ ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಇದನ್ನೆಲ್ಲ ನಮ್ಮ ರಾಜಕಾರಣಕ್ಕೆ ಬಳಸಿಕೊಳ್ಳುವುದು ಬೇಡ. ಏಕೆಂದರೆ, ಮುಂದೆ 'ಅವರ' ಸರ್ಕಾರ ಬಂದರೆ ಹೇಗೂ ನಿಮ್ಮ ಪಠ್ಯಗಳನ್ನು ಪರಿಷ್ಕರಿಸಲು ಅವರಿಗೆ ನೀವು ಈಗ ಕಾರಣ ಒದಗಿಸುತ್ತಿದ್ದೀರಿ. ನಮ್ಮ ಮಕ್ಕಳ ಪಠ್ಯ ಹೀಗೆ ಎಡಪಂಥೀಯತೆ ಮತ್ತು ಬಲಪಂಥೀಯ ರಾಜಕಾರಣದ ಮಧ್ಯೆ ಸಿಕ್ಕು ದಿಕ್ಕೆಡುತ್ತಿರುವುದು ನಿಜವಾಗಿಯೂ ಖೇದಕರ.



ಇನ್ನು ನಮ್ಮ ಕರ್ನಾಟಕ ಸಾಹಿತ್ಯ ಅಕಾಡೆಮಿ ಕಡೆ ನೋಡಿ. ಮೊನ್ನೆ ಅಲ್ಲಿಂದ ನನಗೊಂದು ಆಹ್ವಾನ ಪತ್ರಿಕೆ ಬಂತು. ಅದು ಈ ಅಕಾಡೆಮಿ ಆಯೋಜಿಸಿದ್ದ ಗಿರಿಜನರ ನೋವು ನಲಿವುಗಳನ್ನು ಕುರಿತ ಎರಡು ದಿನಗಳ ಕಾರ್ಯಕ್ರಮದ ಆಹ್ವಾನ ಪತ್ರಿಕೆ. ನಾನು ಆಹ್ವಾನ ಪತ್ರಿಕೆಯನ್ನು ಇದೇನಾದರೂ ನಮ್ಮ ಸಮಾಜ ಕಲ್ಯಾಣ ಇಲಾಖೆ ಕಾರ್ಯಕ್ರಮವೇನೋ ಎಂದು ಇನ್ನೊಮ್ಮೆ ನೋಡಿದೆ. ಇಲ್ಲ, ಅದು ಸಾಹಿತ್ಯ ಅಕಾಡೆಮಿಯ ಕಾರ್ಯಕ್ರಮವೇ ಆಗಿತ್ತು. ನನ್ನ ಪ್ರಶ್ನೆ: ಸಾಹಿತ್ಯ ಅಕಾಡೆಮಿಗೆ ತನ್ನ ಕಾರ್ಯಚಟುವಟಿಕೆಗಳಿಗೆಂದು ಒಂದು ಚೌಕಟ್ಟು ಇಲ್ಲವೆ? ಸಾಹಿತ್ಯ ಅಕಾಡೆಮಿಯಾಗಿ ಅದು ಮನುಷ್ಯಾನುಭವಗಳು ಭಾಷೆಯಲ್ಲಿ ಸೃಜನಶೀಲ ಅಭಿವ್ಯಕ್ತಿಯಾಗಿ ಲಿಪಿ ರೂಪದಲ್ಲಿ ದಾಖಲಾಗುವ ಚಟುವಟಿಕೆಗಳನ್ನು ಪೋಷಿಸಲು ರಚಿಸಲಾಗಿರುವ ಸಂಸ್ಥೆಯಲ್ಲವೆ? (ಲಿಪಿ ರೂಪದಲ್ಲಿ ದಾಖಲಾಗದ ಅಭಿವ್ಯಕ್ತಿಗಳಿಗೆ ಬೇರೆಯೇ ಅಕಾಡೆಮಿಗಳಿವೆ) ಹಾಗಿರುವಾಗ ಗಿರಿಜನರ ನೋವು ನಲಿವುಗಳ ಚರ್ಚೆಗೆ ಸಾಹಿತ್ಯ ಅಕಾಡೆಮಿ ಹೇಗೆ ವೇದಿಕೆಯಾದೀತು? ಆಹ್ವಾನಪತ್ರಿಕೆಯನ್ನು ಮತ್ತೆ ವಿವರವಾಗಿ ನೋಡಿದೆ. ಅಲ್ಲಿ ಔಪಚಾರಿಕತೆಗಳಿಗೆಂಬಂತೆ ಕೆಲ ಸಾಹಿತಿಗಳ ಹೆಸರುಗಳಿದ್ದವಾದರೂ, ಕಲಾಪದಲ್ಲಿ ಎಲ್ಲಿಯೂ ಸಾಹಿತ್ಯದ ವಾಸನೆ ಕಾಣಲಿಲ್ಲ. ಅದೊಂದು ಪೂರ್ಣ ಸಮಾಜ ಕಲ್ಯಾಣ ಇಲಾಖೆಯ ಕಲಸುಮೇಲೋಗರದ ಕಾರ್ಯಕ್ರಮದಂತಿತ್ತು. ಈ ಪ್ರಶ್ನೆ ಕೇಳಿದೊಡನೆ ಕೇಳಿದವರಿಗೆ ಗಿರಿಜನರ ವಿರೋಧಿ ಎಂಬ ಹಣೆಪಟ್ಟಿ ಹಚ್ಚಿ (ಅಪ)ಪ್ರಚಾರಾಂದೋಲನ ನಡೆಸುವ ಒಂದು ದೊಡ್ಡ (ಸಾಮಾಜಿಕ ನ್ಯಾಯದ ಹೆಸರಿನ ಜಾತಿ ರಾಜಕಾರಣದ)ಪಡೆಯೇ ಇಂದು ರಾಜ್ಯದಲ್ಲಿ ಸಿದ್ಧವಾಗಿದೆ. ಆ ಪಡೆ ಇಂದು ಸರ್ಕಾರದ ಆಶ್ರಯದಲ್ಲಿರುವ ಸಾಹಿತ್ಯ-ಸಂಸ್ಕೃತಿ ಸಂಸ್ಥೆಗಳನ್ನು ತನ್ನ ವಶಕ್ಕೆ ಪಡೆದುಕೊಂಡುಬಿಟ್ಟಿವೆ. ಅವುಗಳ ಮುಖ್ಯಸ್ಥರಿಗೋ ಅವರ ಆ ಸ್ಥಾನಮಾನಗಳೇ ಅಲಂಕಾರ!



ಈ ಮಧ್ಯೆ ಗೆಳೆಯ ಕೆ.ವಿ. ತಿರುಮಲೇಶ್‌ಗೆ ಅವರ 'ಅಕ್ಷಯ ಕಾವ್ಯ'ಕ್ಕಾಗಿ ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಲಾಗಿದೆ. ಕನ್ನಡ ನಾಡಿನಿಂದ ದೂರವಿದ್ದರೂ(ತಿರುಮಲೇಶರ ಪ್ರಕಾರ ದೂರವಿಡಲ್ಪಟ್ಟಿದ್ದರೂ) ಕನ್ನಡದ ಸೃಜನಶೀಲ ಕೆಲಸಗಳನ್ನು ಮಾಡುತ್ತಿರುವ ಅವರು ಕವಿಯಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ಸಾಹಿತ್ಯ ಚಿಂತಕರಾಗಿ ಸದಾ ಹೊಸತನ್ನು ಅರಸುತ್ತಾ ಪ್ರಯೋಗಗಳಲ್ಲಿ ತೊಡಗಿಕೊಂಡವರು. 'ಅಕ್ಷಯ ಕಾವ್ಯ' ಕೂಡ ಅಂತಹ ಒಂದು ಪ್ರಯೋಗವೇ. ಆದರೆ ಈ ಕೃತಿ ಈವರೆಗೆ ಯಾರ ಆಸಕ್ತಿಯನ್ನೂ ಸೆಳೆದಂತಿಲ್ಲ. ಹಾಗೆ ನೋಡಿದರೆ ತಿರುಮಲೇಶ್ ಎಂದೊಡನೆ ನೆನಪಾಗುವುದು ಅವರ 'ಪಾರ್ಟಿ ಮುಗಿದ ಮೇಲೆ' ಎಂಬ ಹಚ್ಚಹೊಸತನದ ಕವನವನ್ನೊಳಗೊಂಡ 'ಮುಖಾಮುಖಿ' ಹಾಗೂ ನವ್ಯ ಬೌದ್ಧಿಕತೆಯಿಂದ ದೂರಾದ, ಸರಳವಾಗಿ, ಪಾರದರ್ಶಕವಾಗಿ, ಅಂತಃಕರಣವನ್ನು ಮುಟ್ಟುವಂತಹ ಪದ್ಯಗಳನ್ನೊಳಗೊಂಡ 'ಅವಧ' ಕವನ ಸಂಕಲನಗಳು.

ಇರಲಿ, ತಿರುಮಲೇಶ್‌ಗೆ ಪತ್ರಿಕೆಯ ಅಭಿನಂದನೆಗಳು.

**-ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಜಾಗತೀಕರಣ, ಶಿಕ್ಷಣ ಮತ್ತು ಸಮಾಜ** ಲೇ: **ಜಿ.ಎಸ್. ಜಯದೇವ**
ಪ್ರ: **ಅಭಿರುಚಿ ಪ್ರಕಾಶನ,** ಮೈಸೂರು ಪು: **೧೬೮** ಬೆಲೆ: **ರೂ.೧೩೦/-**

# ಗುಣಾತ್ಮಕ ಶಿಕ್ಷಣದ ಹುಡುಕಾಟದಲ್ಲಿ




**ಸ**ಮಕಾಲೀನ ಶಿಕ್ಷಣ ಪದ್ಧತಿಯ ಬಿಕ್ಕಟ್ಟುಗಳನ್ನು ಪ್ರಾದೇಶಿಕ ನೆಲೆಯಲ್ಲಿ ಸಾದರ ಪಡಿಸುವ ಈ ಕೃತಿ ಹಲವು ಕಾರಣಗಳಿಂದಾಗಿ ನಮ್ಮ ಆಸಕ್ತಿಯನ್ನು ಕೆರಳಿಸುವಂತಿದೆ. ಶಿಕ್ಷಣದ ಮೂಲ ಪರಿಕಲ್ಪನೆ ತಿಳಿಯದೆ ನಾವು ತಪ್ಪು ಹೆಜ್ಜೆ ಇಟ್ಟಿದ್ದೇವೆ ಎನ್ನುವ ಈ ಕೃತಿ, ಜಾಗತೀಕರಣ, ಎಣೆ ಇಲ್ಲದ ತಾಂತ್ರಿಕ ಪ್ರಗತಿಯಿಂದ ಬದುಕು ದುರಾಸೆಗೆ ಈಡಾಗಿದ್ದು, ಶಿಕ್ಷಣದ ಈ ಅಪವ್ಯವಸ್ಥೆಯಿಂದಾಗಿ ಶಾಲೆಗಳು ಸಜ್ಜನಶೀಲವಾಗುವ ಬದಲು ಅಪಾಯಕಾರಿಯಾಗಿವೆ ಎಂದು ಹೇಳುತ್ತದೆ. ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರುಣೆಯಿಂದ ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚುವ ಹಂತದಲ್ಲಿದೆ. ನಾಯಿಕೊಡೆಗಳಂತೆ ಹಬ್ಬುತ್ತಿರುವ ಯಾರೋ ಕಿಡ್‌ಶಾಲೆಗಳು ಮಕ್ಕಳನ್ನು ಚುಂಬಕದಂತೆ ಸೆಳೆದು, ನಮ್ಮ ದೇಸೀ ಸಂಸ್ಕೃತಿಯನ್ನು ಹಾಳು ಮಾಡಿ ನಮ್ಮನ್ನು ಎಲ್ಲಿಗೆ ಕರೆದೊಯ್ದು ಮುಳುಗಿಸುವವೋ ತಿಳಿಯದಾಗಿದೆ ಎಂಬ ಆತಂಕದ ಈ ಸಂದರ್ಭದಲ್ಲಿ ಸ್ವತಃ ವಿಜ್ಞಾನ ಅಧ್ಯಾಪಕರಾಗಿದ್ದ ಲೇಖಕರು ಗಿರಿಜನರ ಸಹವಾಸದ ಪರಿಣಾಮವಾಗಿ ನಿರ್ಗತಿಕ ಮಕ್ಕಳ ಆಶ್ರಮಶಾಲೆ ಅರಂಭಿಸಿ, ಎರಡು ದಶಕಗಳು ಶೈಕ್ಷಣಿಕ ಪ್ರಯೋಗ ನಡೆಸಿದ ಫಲವೇ ಈ ಕೃತಿ.

ಸಾಮ್ರಾಜ್ಯಶಾಹಿಗಳ ಕಾರ್ಪೋರೇಟ್ ಶೈಲಿಯ ಶಿಕ್ಷಣ ನಿಜಕ್ಕೂ ನಮ್ಮ ಮಕ್ಕಳ ಕರುಳ ಬಳ್ಳಿಯನ್ನೇ ಕತ್ತರಿಸಿ ಅವರ ಭವಿಷ್ಯವನ್ನು ಚಿಗುರಿನಲ್ಲಿ ಚಿವುಟಿ ಹಾಕಿದೆ. ರಾಷ್ಟ್ರದ ೪೦ ಕೋಟಿ ಮಕ್ಕಳು ಕಾನ್ವೆಂಟ್ ಶಾಲೆಗಳ ಮೋಹಕ್ಕೆ ಬಲಿಯಾಗಿ ದಿಕ್ಕು ತಪ್ಪುತ್ತಿದ್ದಾರೆ. ಪೋಷಕರು ಕೂಡ ತಮ್ಮ ಮಕ್ಕಳು ತಮ್ಮಂತೆ ಕಷ್ಟ ಪಡದೇ ಇಂಗ್ಲೀಷ್ ಕಲಿತು ಕೈತುಂಬ ಸಂಬಳ 'ತರುವ ಸಾಫ್ಟ್‌ವೇರ್ ಎಂಜಿನೀಯರ್ ಆಗಲಿ ಎಂದು ಕನಸು ಕಾಣುತ್ತಿದ್ದಾರೆ. ಕೃಷಿ ಬದುಕು, ಹೈನುಗಾರಿಕೆ, ಗ್ರಾಮೀಣ ಗುಡಿ ಕೈಗಾರಿಕೆಯಂಥ ದೇಸೀ ಸಂಸ್ಕೃತಿಯ ಕಸುಬುಗಳು ಕನಿಷ್ಠ ಎಂಬ ಮನೋಭೂಮಿಕೆ ಎಲ್ಲರಲ್ಲೂ ಮನೆ ಮಾಡಿದೆ. ಹೀಗಾದರೆ ನಮಗೆ ಅನ್ನ ನೀಡುವ ಧಾನ್ಯ ಬೆಳೆಯುವವರಾರು ? ಎಂದು ಲೇಖಕರು ಪ್ರಶ್ನಿಸುತ್ತಾ ತಮ್ಮ ಈ ಕೃತಿಯಲ್ಲಿ ಇದಕ್ಕೆ ಪರಿಹಾರಗಳನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ.

ಶಿಕ್ಷಣವು ಪಠ್ಯದ ೧ರಿಂದ ೧೦ನೇ ತರಗತಿಯ ಮಕ್ಕಳನ್ನು ಕೂರಿಸಿಕೊಂಡು ವೇಗವಾಗಿ ಹೊರಟಿದೆ. ಅದು ಒಮ್ಮೆಯೂ ಹಿಂದಿರುಗಿ ನೋಡಿಲ್ಲ. ಅಕ್ಕ-ಪಕ್ಕಗಳ ಗೋಡೆವೆಯೇ ಅದಕ್ಕಿಲ್ಲ ಮಕ್ಕಳು ಸತ್ಯಕಾಮನಂತೆ ಪ್ರಕೃತಿಯಿಂದ ಸಹಜವಾಗಿ ಕಲಿಯಬೇಕು. ಕಾಡಿನಲ್ಲಿ ನಡೆದಾಡಬೇಕು, ಹೂವು ಅರಳುವುದನ್ನು ನೋಡಬೇಕು. ಮಕ್ಕಳ ಮನಸ್ಸು ಪ್ರಫುಲ್ಲವಾಗಿ ಅರಳುವಂತಹ ಸೃಜನಶೀಲ ಶಿಕ್ಷಣ ಇಂದಿನ ಅಗತ್ಯ. ಮಕ್ಕಳಿಗೆ ಭೂಗೋಳ, ಚರಿತ್ರೆ, ಗಣಿತ, ವಿಜ್ಞಾನಗಳನ್ನು ಬಿಡಿಬಿಡಿಯಾಗಿ ಹೇಳುವುದಕ್ಕಿಂತ ಅಖಂಡವಾಗಿ ಹೇಳಿಕೊಡಬೇಕು. ಕಲಿಸುವವರು ಕಲಿಯುವವರಿಂದ ಕಲಿತಾಗಲೇ ಕಲಿಕೆ ಜೀವಂತವಾಗಬಲ್ಲದು ಎನ್ನುವುದು ಕಲಿಕೆ ಕುರಿತಂತೆ ಈ ಲೇಖಕರು ಹೇಳುವ ಮುಖ್ಯ ಮಾತು.

ಕಲಿಸುವವರು ಮಕ್ಕಳ ಕಣ್ಣು, ಕಿವಿ, ಮನದೊಳಗೆ ಹೊಕ್ಕು ಮಗುವಾಗಿ ಕಲಿಸಬೇಕು. ಆದರೆ ಇಂದಿನ ಶಿಕ್ಷಕರಿಗೆ ಆಸಕ್ತಿ ಇಲ್ಲ. ಬೀಜ ಮೊಳಕೆ ಯೊಡೆಯುವುದನ್ನು ಓರ್ವ ಶಿಕ್ಷಕ ಶಾಲೆಯ ಕಂಪ್ಯೂಟರಿನಲ್ಲಿ ತೋರಿಸುತ್ತಾನೆ. ಪಕ್ಕದಲ್ಲಿಯೇ ಕಾಡಿದ್ದರೂ ಅದರ ದರ್ಶನ ಮಾಡಿಸುವುದಿಲ್ಲ. ಮಕ್ಕಳನ್ನು ಮಾಹಿತಿ ತುಂಬುವ ಉಗ್ರಾಣಗಳನ್ನಾಗಿ ಮಾಡಿಕೊಂಡಿದ್ದೇವೆ. ಲೇಖಕರು ಮಾರ್ಟಿನ್ ಲೂಥರ್ ಹೇಳಿದಂತೆ ಬರಿಪುಸ್ತಕ ಜ್ಞಾನ ಮನುಷ್ಯನ ವಿನಾಶಕಾರಿ ಬುದ್ಧಿಯನ್ನು ಹೆಚ್ಚಿಸುತ್ತದೆ ಎಂಬ ಮಾತನ್ನು ತಮ್ಮ ಈ ಕೃತಿಯಲ್ಲಿ ವಿಷದೀಕರಿಸಿದ್ದಾರೆ. ಜೀನ್ ಪೀಯರ್ ಹ್ಯಾಲೆಟ್ ಹೇಳಿದ ಬಾಲ್ಯದಲ್ಲಿಯೇ ಮನದಲ್ಲಿ ಬೇರೂರಿದ ಶ್ರೇಷ್ಠ ಮೌಲ್ಯಗಳು ಜೀವನಪರ್ಯಂತ ಹಸುರಾಗಿರುತ್ತವೆ ಎಂಬ ಮಾತು ಕೂಡ ಕೃತಿಯಲ್ಲಿ ಅನುರಣಿಸುತ್ತದೆ.

ಭಾಷಾತಜ್ಞ ನೋಮ್ ಚೋಮ್‌ಸ್ಕಿ ಮಕ್ಕಳು ಮಾತೃಭಾಷೆಯಲ್ಲಿ ಮಾತ್ರ ನಿರರ್ಗಳವಾಗಿ ತಮಗೆ ಅನ್ನಿಸಿದ್ದನ್ನು ಅಭಿವ್ಯಕ್ತಿಸುತ್ತಾರೆ ಎಂದಿದ್ದಾರೆ. ಮಾತೃಭಾಷೆ ಅನ್ನ ಕೊಡುವ ಭಾಷೆ. ಅದು ಜನರ ಸಂಸ್ಕೃತಿ, ಸಂವಹನ, ಸಂವಾದ. ಅರಳು ಹುರಿದಂತೆ ಮಾತನಾಡುವುದು, ನಗುವುದು, ಅಳುವುದು, ಮಾತೃಭಾಷೆಯ ಗುಣ. ಜರ್ಮನಿ, ಫ್ರಾನ್ಸ್, ದೇಶಗಳು ತಮ್ಮ ಮಾತೃಭಾಷೆಯಿಂದಲೇ ಪ್ರಗತಿ ಸಾಧಿಸಿವೆ. ಇಂಥ ಮಾತೃಭಾಷೆ ಸತ್ತರೆ ಅಲ್ಲಿಯ ಸಂಸ್ಕೃತಿಯೇ ಸತ್ತಂತೆ. ಇಂಗ್ಲೀಷ್ ಆಕರ್ಷಣೆ, ಭ್ರಮೆಯಿಂದ ನಾವು ಇಂಗ್ಲಿಷ್ ಭಾಷೆಯ ಮೊರೆಹೋಗಿ ಮಕ್ಕಳನ್ನು ಮನುಷ್ಯರನ್ನಾಗಿ ಮಾಡದೇ ದುಡಿಯುವ ರೋಬೋಗಳನ್ನಾಗಿ ಮಾಡುತ್ತಿದ್ದೇವೆ ಎನ್ನುವ ಲೇಖಕರು ಇಂಗ್ಲೀಷ್‌ನ್ನು ಕೊಲೆಗಡುಕ ಭಾಷೆ, ಆಗಂತುಕ 'ಭಾಷೆ, ಮೋಸದ ಭಾಷೆ ಎಂದು ಕರೆದಿದ್ದಾರೆ.

ಕಾಡಿನ ನಾಶ, ಓಝೋನ್ ಪದರದ ಕಳಚುವಿಕೆ, ಭೂತಾಪದ ಏರಿಕೆ, ವಾಯುಗುಣ ವೈಪರಿತ್ಯ, ಭ್ರಷ್ಟಾಚಾರ, ವರ್ಗವೈಷಮ್ಯ, ಮೌಢ್ಯ ಮುಂತಾದ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಯಾವ ಶಿಕ್ಷಣವೂ ಕೈಹಾಕಿದಂತಿಲ್ಲ. ಭೂಮಿ ಚಿಂತನೆ ಇಲ್ಲಿ ಬತ್ತಿ ಹೋಗಿವೆ. ಮೂಲ ವಿಜ್ಞಾನಗಳು ಮೂಲೆಗುಂಪಾಗಿವೆ. ಶಿಕ್ಷಣದ ಮೂಲಗುರಿ ಹಣ ಸಂಪಾದಿಸುವುದು ಮತ್ತು ಮಕ್ಕಳನ್ನು ಮಾರುಕಟ್ಟೆಯ ಸರಕುಗಳನ್ನಾಗಿಸಿ, ಗಿಳಿಪಾಠ ಪರೀಕ್ಷೆ, ರ್‍ಯಾಂಕು, ಮಾರ್ಕ್ಸ್ ಕಾರ್ಡ್ ಮೂಲಕ ಸಂಬಳಗಳಿಸಲು ಮಕ್ಕಳನ್ನು ಸಜ್ಜಗೊಳಿಸುವಂತಾಗಿ ಯಾವ ಲಂಗು ಲಗಾಮು, ನಿಯಂತ್ರಣವಿಲ್ಲದ ವಸಹಾತು ಶಾಹಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಕೃತಿಕಾರರು ಶೇರು ಮಾರುಕಟ್ಟೆ, ಕಾಳಸಂತೆ, ಒಣಗಿದ ವೃಕ್ಷಕ್ಕೆ ಹೋಲಿಸುತ್ತಾರೆ. ಅವುಗಳನ್ನು ಹಗಲು ದರೋಡೆಯ ಶೋಷಣಾ ಕೇಂದ್ರಗಳೆಂದು ಅವುಗಳ ಕಾರ್ಯ ವೈಖರಿಯನ್ನು ಬಣ್ಣಿಸುತ್ತಾರೆ.

ಬಹು ರಾಷ್ಟ್ರೀಯ ಕಂಪನಿಗಳ ಜಾಹಿರಾತುಗಳು ನಮ್ಮತನವನ್ನು ಅಳಿಸಿಹಾಕುತ್ತಿವೆ. ಉದಾಹರಣೆಗೆ ಈ ಜಗತ್ತನ್ನು ಹಿಟ್ಲರ್, ಸ್ಟಾಲಿನ್, ನೆಪೋಲಿಯನ್ ಗೆಲ್ಲಲಿಲ್ಲ ಆದರೆ ಕೋಕಾಕೋಲಾ ಗೆದ್ದಿತು ಎನ್ನುವಂತೆ ನಮ್ಮ ಶಿಕ್ಷಣ ಸಂಸ್ಥೆಗಳು ಮಕ್ಕಳ ಬ್ರೇನ್‌ವಾಶ್ ಮಾಡುತ್ತಿವೆ. ಇದರ ಪರಿಣಾಮದಿಂದ ನೂಡಲ್ಸ್ ಸಂಸ್ಕೃತಿ ತಲೆ ಎತ್ತಿ ನಮ್ಮ ಸಾಂಪ್ರದಾಯಿಕ ಆಹಾರಗಳನ್ನು ಮಕ್ಕಳು ತಿನ್ನದೇ ಜಂಕ್‌ಫುಡ್ ತಿನ್ನುತ್ತಿದ್ದಾರೆ. ಸರಳ, ಸಹಜ ಬದುಕು ನಮ್ಮದಾಗಬೇಕು. ನಮ್ಮ ದೇಶಿ ಸಂಸ್ಕೃತಿ ಮೌಲ್ಯ ಪಡೆಯಬೇಕೆಂದು ಲೇಖಕರು ಆಸೆ ಪಡುತ್ತಾರೆ.

ಶಿಕ್ಷಣ ವ್ಯವಸ್ಥೆಯ ಮರಳುಗಾಡಿನಲ್ಲಿ ಓಯಸಿಸ್‌ನಂತೆ ಕಾಣುವ ಮಧ್ಯಪ್ರದೇಶದ ಏಕಲವ್ಯ ವಿದ್ಯಾಸಂಸ್ಥೆ, ಶಿಕ್ಷಣ ಪ್ರೇಮಿ ಅಜೀಮ್ ಪ್ರೇಮಜಿ ಹಾಗೂ ಕೃತಿಕಾರ ಪ್ರೊ. ಜಯದೇವ್‌ರಂಥವರು ಶಿಕ್ಷಣ ಕ್ಷೇತ್ರದ, ಸುಸ್ಥಿರ ಸಮಾಜದ ಆಶಾಕಿರಣಗಳಾಗಿ ಇಲ್ಲಿ ಕಾಣಿಸುತ್ತಾರೆ. ಪಾಶ್ಚಾತ್ಯರ ಬಾಹ್ಯವನ್ನು ಅನುಕರಣೆ ಮಾಡಿದ್ದೇವೆಯೇ ಹೊರತು ಅವರ ಸಾಹಸ, ವೈಜ್ಞಾನಿಕತೆಯನ್ನಲ್ಲ. ಜಯದೇವ್ ಅವರ ದೀನಬಂಧು ಆಶ್ರಮದಲ್ಲಿ ಒಂದು ವರ್ಷ ಅನುಭವ ಪಡೆದ ಜರ್ಮನಿಯ ಸೂಸನ್‌ರ ಪ್ರಕಾರ ಭಾರತೀಯರಿಗೆ ಸ್ವಂತ ಸರಳ ನಿರ್ಧಾರ ಕೈಗೊಳ್ಳಲು ಆಗದೆ, ಅವರು ಎಲ್ಲದಕ್ಕೂ ಆದೇಶಕ್ಕಾಗಿ ಕಾಯುತ್ತಾರೆ. ಇನ್ನು ಮಕ್ಕಳಿಗೂ ಸ್ವತಂತ್ರವಾಗಿ ಯೋಚಿಸಲೂ ಬಿಡದೇ ಒತ್ತಡ ಹೇರಿ ಇನ್ನೊಬ್ಬರು ಹೇಳಿದಂತೆ ಮಾಡಲು ನಾವು ನಿರ್ದೇಶಿಸುತ್ತೇವೆ. ಐನ್‌ಸ್ಟೀನ್‌ರ ಮಾತಲ್ಲಿ ಹೇಳುವುದಾದರೆ, ಕಲಿತದ್ದು ಮರೆತು ಹೋದಮೇಲೆ ತಲೆಯಲ್ಲಿ ಉಳಿದಿದ್ದೇ ಶಿಕ್ಷಣ. ಹಾಗಾಗಿ ಲೇಖಕರು ತಮ್ಮ ಬರವಣಿಗೆಯಲ್ಲಿ ಮಕ್ಕಳಿಗೆ ಪ್ರಕೃತಿಯ ಸೂಕ್ಷ್ಮ ಅವಲೋಕನ ಸ್ವಯಂ ನಿರ್ಧಾರ, ವೈಜ್ಞಾನಿಕ ಚಿಂತನೆ, ಸಂತಸದ ಕಲಿಕೆ, ಸೃಜನ ಶೀಲತೆಗೆ ಹೆಚ್ಚು ಗಮನ ನೀಡಲು ಸೂಚಿಸುತ್ತಾರೆ.

ವರ್ತಮಾನದ ಶೈಕ್ಷಣಿಕ ತಲ್ಲಣಗಳಿಗೆ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಈ ಕೃತಿ ಸ್ಫೂರ್ತಿ ನೀಡಬಲ್ಲದು. ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವಂಥವರಿಗೆ ಈ ಕೃತಿ ಕಣ್ಣು ತೆರೆಸುವಂತಿದೆ.

**-ಡಾ. ಶೇಖರ್ ಗೌಳೇರ್**

**‘ಹೊಸ ಮನುಷ್ಯ’ ಓದುಗರೆಲ್ಲರಿಗೂ**

**ಸಂಕ್ರಾಂತಿಯ ಶುಭಾಶಯಗಳು**



**–ಅನರ್ಘ್ಯಸಿರಿ**
**ಸದಾಪೂರ್ಣ**

ಚಿತ್ರದುರ್ಗ

‘ಹೊಸ ಮನುಷ್ಯ’ ಓದುಗರೆಲ್ಲರಿಗೂ

ಗಣರಾಜ್ಯೋತ್ಸವ ಶುಭಾಶಯಗಳು



**–ಇಸ್ಮಾಯಿಲ್ ಎಂ. ಅರಳಿಕಟ್ಟಿ**

ಇಂಜಿನಿಯರಿಂಗ್ ವರ್ಕ್ಸ್

ಫ್ಯಾಬ್ರಿಕೇಶನ್ ಗುತ್ತಿಗೆದಾರರು

ಯಾಲಕ್ಕಿಶೆಟ್ರ, ಕಾಲೋನಿ

ಧಾರವಾಡ

**'ಹೊಸ ಮನುಷ್ಯ' ಓದುಗರೆಲ್ಲರಿಗೂ**

**ಹೊಸ ವರ್ಷದ ಶುಭಾಶಯಗಳು**



**-ಹೋಟೆಲ್ ವಿಶ್ವ ರೆಸಾರ್ಟ್**

ಮಾಲೀಕರು: ನಾರಾಯಣ ಶೆಟ್ಟಿ

ಮತ್ತು ಕುಟುಂಬ

ಮಮ್ಮಿಗಟ್ಟಿ ಗ್ರಾಮ

ಪವರ್‌ಗ್ರಿಡ್ ಎದುರು

ಧಾರವಾಡ ತಾ.

**ತಿಂಗಳ ಸಾಲುಗಳು...**



ಹಿಂದಿನ ಧರ್ಮಗಳು ಹೇಳಿದವು, ದೇವರಲ್ಲಿ ನಂಬಿಕೆ ಇಲ್ಲದವನು ನಾಸ್ತಿಕ ಎಂದು. ಇಂದಿನ ಧರ್ಮ ಹೇಳುತ್ತದೆ, ಯಾರಿಗೆ ತನ್ನಲ್ಲಿ ತನಗೆ ನಂಬಿಕೆ ಇಲ್ಲವೋ ಅವನು ನಾಸ್ತಿಕ ಎಂದು

-ಸ್ವಾಮಿ ವಿವೇಕಾನಂದ

**ಪತ್ರಿಕೆಗೆ ಶುಭ ಕೋರುತ್ತಾ...**

**-ಸಿ. ಪ್ರಶಾಂತ್**

**ದೀಪಾ**

**ಕು. ಅನಘ**

ಬೆಂಗಳೂರು

HOSA MANUSHYA, a kannada Socialist monthly solely owned, edited, published and printed by D. S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrail Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)